ಮಂಗಳವಾರ, ಸೆಪ್ಟೆಂಬರ್ 7, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 250 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಯೋಗ, ಪ್ರಾಣಾಯಾಮ, ಧ್ಯಾನವು ದೀರ್ಘಕಾಲದಲ್ಲಿ ದೇಹ ಮತ್ತು ಮನಸ್ಸಿನ ದೃಢತೆಯನ್ನು ಹೆಚ್ಚಿಸಿ ಕೋಪವನ್ನು ನಿಭಾಯಿಸಲು ಕೆಲಮಟ್ಟಿಗೆ ಸಹಾಯ ಮಾಡಬಲ್ಲವು



ಸಂಖ್ಯೆ-ಸುದ್ದಿ ಪಕ್ಷಗಳ ಆದಾಯ ಅನಾಮಧೇಯ

ನಿಫಾ ತಡೆಗೆ ಮಾರ್ಗಸೂಚಿ ಪ್ರಕಟ 9
ಅಫ್ಗನ್ ಪೂರ್ಣ ವಶಕ್ಕೆ: ತಾಲಿಬಾನ್ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,296 ▲	17,377 ▲	₹48,600 (ಬೆಂಗಳೂರು)	₹65,400 (ಬೆಂಗಳೂರು)	73.10 ▼

ಮನುಷ್ಯನನ್ನು ಕೊಲ್ಲದೇ ಕೊಲ್ಲುವ ರೋಗ

ನಾವು ತಿನ್ನುವ ಆಹಾರವು ಸರಿಯಾಗಿ ಜೀರ್ಣವಾಗದಿದ್ದರೆ, ಅದು ಆಮ್ಲೀಕರಿಸಲ್ಪಟ್ಟು, ಕಿಣ್ವನಕ್ಕೆ ಗುರಿಯಾಗುತ್ತದೆ. ಅದು ಹೊಟ್ಟೆಯಲ್ಲಿ ಅತೀವ ಗ್ಯಾಸ್ ಉತ್ಪತ್ತಿಯಾಗಲು ಕಾರಣವಾಗುತ್ತದೆ. ಅದರಿಂದಾಗಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸಗೊಳ್ಳುವ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅವುಗಳೆಂದರೆ ತೀವ್ರ ಹೊಟ್ಟೆನೋವು, ಹೊಟ್ಟೆಯಲ್ಲಿ ಉಬ್ಬರ, ತೇಗು, ವಾಂತಿ, ಕಡಿಮೆ ಹಸಿವು, ಕೆಟ್ಟವಾಸನೆಯ ಉಸಿರು, ನಿದ್ರೆಯಿಲ್ಲದಿರುವುದು, ಮಲಬದ್ಧತೆ, ಎದೆಯುರಿ, ಹಳದಿ ಮೂತ್ರ, ಕೆಳಬೆನ್ನುನೋವು, ದು:ಸ್ವಪ್ನ ಮತ್ತು ಯಾವಾಗಲೂ ಸುಸ್ತು ಇತ್ಯಾದಿ ಸಂಬಂಧಿತ ತೊಂದರೆಗಳನ್ನು ನಿಯಂತ್ರಿಸುತ್ತದೆ. ಅಮೃತಬಿಂದು ಒಂದು ಕೇರಳಾ ಆಧಾರಿತ ಆಯುರ್ವೇದಿಕ್ ಔಷಧವಾಗಿದ್ದು, ಇದು ಯಾವುದೇ ಅಡ್ಡ ಪರಿಣಾಮಗಳನ್ನು ಹೊಂದಿಲ್ಲ. ಕೇರಳಾ ಮೂಲಕ ಡಾ. ಕೆ.ಎನ್.ಗಂಗಾಧರನ್ ಅವರು ಅಮೃತ ಬಿಂದುವನ್ನು ಅಭಿವೃದ್ಧಿಪಡಿಸಿದ್ದಾರೆ. ಒಂದು ಪವಿತ್ರವಾದ ಮತ್ತು ಸಂಪೂರ್ಣವಾಗಿ ಆಯುರ್ವೇದಿಕ್ ಔಷಧವಾಗಿರುವ ಇದು ಜಠರ ಸಂಬಂಧಿತ ಕಾಯಿಲೆಗಳಿಂದ ಬಳಲುವವರಿಗೆ ಒಂದು ಸಮಗ್ರ ಮತ್ತು ಪರಿಣಾಮಕಾರಿ ವೆಚ್ಚದ ಚಿಕಿತ್ಸೆಯಾಗಿದೆ.

ಅಮೃತಬಿಂದು

1 ತಿಂಗಳ ಔಷಧಿ ಕೇವಲ ₹ 260 ಮಾತ್ರ

ಮಧುರವಾದ ಬಾಂಧವ್ಯಕ್ಕಾಗಿ "ಬ್ರೂಮೆಕ್ಸ್ ಫೋರ್ಟೆ"

ಸುಮಧುರ ಸಂಬಂಧವನ್ನು 'ಬ್ರೂಮೆಕ್ಸ್ ಫೋರ್ಟೆ' ಸೇವಿಸಿ ಬಲಪಡಿಸಿಕೊಳ್ಳಿ. ಇದು ಸಾಂಪ್ರದಾಯಿಕ ಮಹಾರಾಜ ಪ್ರಸರಣ ತೈಲ ಇವರು ತಯಾರಿಸಿದ ನಿತ್ರಾಣ ಹೋಗಲಾಡಿಸುವ ಔಷಧ.

ನರ ಮತ್ತು ರಕ್ತನಾಳಗಳನ್ನು ಪುನಶ್ಚೇತನಗೊಳಿಸುವುದಲ್ಲದೇ, ದೇಹದ ಆಯಾಸಕ್ಕೆ ಬಲು ಉಪಯೋಗಕಾರಿಯಾಗಿದೆ. ದುರ್ಬಲ ನರಗಳಿಂದಾಗಿ ಹೊರಹೊಮ್ಮುವ ನಿತ್ರಾಣ, ಮರಗಟ್ಟುವಿಕೆ, ಶಕ್ತಿ ಕುಂದುವಿಕೆ ಹಾಗೂ ಇನ್ನಿತರ ಅನೇಕ ಕಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ಇದರ ಸೇವನೆಯಿಂದ ಪಡೆಯಬಹುದು. ವಯಸ್ಸಿನ ಅಂತರವನ್ನು ಮರೆತು, ನರದೌರ್ಬಲ್ಯ ಹೋಗಲಾಡಿಸಿ ಬಲಯುತಗೊಳಿಸಿ ನಿಕಟ ಸಂಬಂಧವನ್ನು ನಿರಂತರ ಶಕ್ತಿಯ ತರಂಗದೊಡನೆ ಉದ್ದೀಪನಗೊಳಿಸಿ. ಎಲ್ಲಾ ವಯಸ್ಸಿನವರಿಗೆ ಇದೊಂದು ಮೃದುವಾದ ಜೆಲ್ ರೂಪದ ಎನರ್ಜಿ ಬೂಸ್ಟರ್.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore
For a Healthy Society
Ph: 8762226000, 9243112373.

ಮಹಾನಗರ ಪಾಲಿಕೆ ಚುನಾವಣೆ: ಬೆಳಗಾವಿ ಬಿಜೆಪಿ ತೆಕ್ಕೆಗೆ, ಹು–ಧಾ ಬಿಜೆಪಿ ಮೇಲುಗೈ, ಕಲಬುರ್ಗಿ ಅತಂತ್ರ

ಬಿಜೆಪಿಗೆ ಅಲ್ಪತೃಪ್ತಿ, ಕಾಂಗ್ರೆಸ್‌ಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿ- ಧಾರವಾಡ, ಬೆಳಗಾವಿ ಮತ್ತು ಕಲಬುರ್ಗಿ ಮಹಾನಗರ ಪಾಲಿಕೆಗಳಿಗೆ ಶುಕ್ರವಾರ ನಡೆದ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಬಿಜೆಪಿ ಅಲ್ಪತೃಪ್ತಿಗೆ ಸಮಾಧಾನ ಹೊಂದಿದ್ದರೆ; ಕಾಂಗ್ರೆಸ್ ಹಿನ್ನಡೆ ಅನುಭವಿಸಿದ್ದರೆ, ಜೆಡಿಎಸ್ ಕಹಿಫಾತ ಉಂಡಿದೆ.

ಹುಬ್ಬಳ್ಳಿ- ಧಾರವಾಡ ಮಹಾನಗರಪಾಲಿಕೆಯಲ್ಲಿ ಈ ಹಿಂದೆ ಆಡಳಿತ ನಡೆಸಿದ್ದ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಗಳಿಸಿದೆ. ಆದರೆ, ಮುಖ್ಯಮಂತ್ರಿ, ಕೇಂದ್ರ ಸಚಿವರು, ಹಲವು ಪ್ರಮುಖ ನಾಯಕರ ಹಿಡಿತ ನಗರದಲ್ಲಿ ಇದ್ದರೂ ಬಹುಮತದ 'ಮ್ಯಾಜಿಕ್ ಸಂಖ್ಯೆ' 42 ತಲುಪಲು ಬಿಜೆಪಿ ವಿಫಲವಾಗಿದೆ.

ಆದರೆ, ಬೆಳಗಾವಿಯಲ್ಲಿ ಬಿಜೆಪಿ ಭರ್ಜರಿ ಜಯಭೇರಿ ಬಾರಿಸಿದೆ. ಕಲಬುರ್ಗಿಯಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿದ್ದು, ಯಾವುದೇ ಪಕ್ಷಕ್ಕೂ ಬಹುಮತ ಸಿಗದೇ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್ ಶಾಸಕರು ಇದ್ದರೂ ನಗರಸಭೆಯಲ್ಲಿ ಅಧಿಕಾರ ಹಿಡಿಯುವಲ್ಲಿ ಸಫಲವಾಗಿಲ್ಲ. ತರೀಕೆರೆಯಲ್ಲಿ ಬಿಜೆಪಿ ಶಾಸಕರಿದ್ದರೂ ಗೆಲುವು ಸಾಧಿಸಲು ಶಕ್ಯವಾಗಿಲ್ಲ. ಕಾಂಗ್ರೆಸ್ ಮತ್ತೆ ಅಧಿಕಾರ ದಕ್ಕಿಸಿಕೊಂಡಿದೆ. ಜೆಡಿಎಸ್ ಒಟ್ಟಾರೆ ಸಾಧನೆ ಕಳಪೆಯಾಗಿದ್ದು, ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿಯಲ್ಲಿ ಖಾತೆ ತೆರೆಯುವಲ್ಲಿ ಯಶಸ್ವಿಯಾಗಿದೆ.

ಬಸವರಾಜ ಬೊಮ್ಮಾಯಿ ಸರ್ಕಾರದ ಚುಕ್ಕಾಣಿ ಹಿಡಿದ ಬಳಿಕ ಎದುರಿಸುತ್ತಿರುವ ಮೊದಲ ಚುನಾವಣೆ ಇದಾಗಿದ್ದು, ಚುನಾವಣಾ ಸಾಧನೆ ಅವರಿಗೆ 'ತೃಪ್ತಿಕರ' ಎನಿಸಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ಬಹುಮತಕ್ಕೆ ಮೂರು ಸ್ಥಾನದ ಕೊರತೆ ಇದೆ. ಆದರೆ, ಕಲಬುರ್ಗಿಯಲ್ಲಿ ಅಧಿಕಾರ ಹಿಡಿಯಬೇಕಿದ್ದರೆ, ಜೆಡಿಎಸ್ ಮತ್ತು ಪಕ್ಷೇತರ ನೆರವು ಬೇಕೇ ಬೇಕು.

8ನೇ ಪುಟ ನೋಡಿ

ಬೆಳಗಾವಿ ಮಹಾನಗರಪಾಲಿಕೆ ಚುನಾವಣೆಯಲ್ಲಿ ಬಹುಮತ ಗಳಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು ಪ್ರಜಾವಾಣಿ ಚಿತ್ರ

ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶ



*ಮೈಸೂರು ನಗರಪಾಲಿಕೆಯ 1, ಬೀದರ್, ಬಸವಕಲ್ಯಾಣ ನಗರಸಭೆಯ ತಲಾ 2, ರಾಮನಗರ, ದಾಂಡೇಲಿ, ಭದ್ರಾವತಿ, ಹರಿಹರ, ರಾಬರ್ಟ್‌ಸನ್‌ಪೇಟೆ ನಗರಸಭೆ ತಲಾ 1, ವಾಡಿ ಪುರಸಭೆಯ 2, ಕುಷ್ಟಗಿ ಪುರಸಭೆಯ 1 ಸ್ಥಾನಕ್ಕೆ ಉಪಚುನಾವಣೆ ನಡೆದಿತ್ತು.

ಮೂರು ಮಹಾನಗರ ಪಾಲಿಕೆಗಳೂ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶವು ರಾಜ್ಯದ ಬಿಜೆಪಿ ಸರ್ಕಾರಕ್ಕೆ ಜನಬೆಂಬಲ ಇರುವುದನ್ನು ಸಾಬೀತುಪಡಿಸಿದೆ. ಈ ಚುನಾವಣೆಯು ಭವಿಷ್ಯದ ದಿನಗಳ ದಿಕ್ಸೂಚಿಯಂತೆ ಇದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಈ ಫಲಿತಾಂಶ ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯಲ್ಲ. ಇದು ಎಚ್ಚರಿಕೆಯ ಗಂಟೆ. ಬೆಳಗಾವಿಯಲ್ಲಿ ನಿರೀಕ್ಷಿತ ಫಲಿತಾಂಶ ಬಂದಿಲ್ಲ. ಹುಬ್ಬಳ್ಳಿಯಲ್ಲಿ ಮುಖ್ಯಮಂತ್ರಿ, ಕೇಂದ್ರ ಸಚಿವರು ಮತ್ತು ಹಲವು ಶಾಸಕರು ಬಿಜೆಪಿಗೆ ಬೆಂಬಲವಾಗಿ ಇದ್ದರು. ಹೀಗಾಗಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ
ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

3 ಮಹಾನಗರ ಪಾಲಿಕೆಗಳು, ಇತರ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಜೆಡಿಎಸ್ ಗಂಭೀರವಾಗಿ ಪರಿಗಣಿಸಿರಲಿಲ್ಲ. ಕಲಬುರ್ಗಿಯಲ್ಲಿ ಮಾತ್ರ ಸ್ವಲ್ಪ ಪ್ರಚಾರ ನಡೆಸಲಾಗಿತ್ತು. ಅಲ್ಲಿ ನಾಲ್ಕೇ ಸ್ಥಾನ ಗೆದ್ದಿದ್ದರೂ, ಪಕ್ಷದ ಮತ ಗಳಿಕೆ ಹೆಚ್ಚಾಗಿದೆ
ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಓವಲ್‌ನಲ್ಲಿ ಭಾರತದ ಕಮಾಲ್

ಲಂಡನ್: ಕೆನಿಂಗ್ಟನ್ ಓವಲ್ ಅಂಗಳದಲ್ಲಿ ಸೋಮವಾರ ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಜಯ ದಾಖಲಿಸಿತು.

ಸ್ಕೋರ್ ವಿವರ

	ಭಾರತ	ಇಂಗ್ಲೆಂಡ್
ಮೊದಲ ಇನಿಂಗ್ಸ್	191 (61.3 ಓವರ್)	290 (84 ಓವರ್)
ಎರಡನೇ ಇನಿಂಗ್ಸ್	466 (148.2 ಓವರ್)	210 (92.2 ಓವರ್)

ಗೆಲುವಿನ ಗುರಿ 368

ಸುದರ್ಶನ್ ಜ್ಯುವೆಲರ್ಸ್

ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹ 4370/-gm
ಬೆಳ್ಳಿ ₹ 62,000/-*CA
ಚಿಕ್ಕಪೇಟೆ: 41300355
Gangothri

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕೇಂದ್ರಕ್ಕೆ 'ಸುಪ್ರೀಂ' ಎಚ್ಚರಿಕೆ

ನ್ಯಾಯಮಂಡಳಿಗೆ ನೇಮಕ ವಿಳಂಬಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಜತೆಗೆ ಸಂಘರ್ಷಕ್ಕೆ ಇಳಿಯಲು ಬಯಸುವುದಿಲ್ಲ; ಆದರೆ, ನ್ಯಾಯಮಂಡಳಿಗಳ ನೇಮಕದಲ್ಲಿ ಸರ್ಕಾರ ಮಾಡುತ್ತಿರುವ ವಿಳಂಬವನ್ನು ಗಮನಿಸಿದರೆ ತಾಳ್ಮೆ ಕಳೆದುಕೊಳ್ಳುವಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

'ಸುಪ್ರೀಂ ಕೋರ್ಟ್‌ನ ಈ ಹಿಂದಿನ ತೀರ್ಪುಗಳನ್ನು ನಿರ್ಲಕ್ಷಿಸಿ, ನ್ಯಾಯಮಂಡಳಿ ಸುಧಾರಣೆ ಕಾಯ್ದೆ 2021 ಅನ್ನು ಅಂಗೀಕರಿಸಲಾಗಿದೆ. ಇದು ನ್ಯಾಯಾಲಯಕ್ಕೆ ತೀವ್ರ ಅಸಮಾಧಾನ ಉಂಟು ಮಾಡಿದೆ. ಸುಪ್ರೀಂ ಕೋರ್ಟ್‌ನ ತೀರ್ಪುಗಳಿಗೆ ಗೌರವ ನೀಡಲೇಬಾರದು ಎಂದು ಕೇಂದ್ರವು ಟೊಂಕ ಕಟ್ಟಿ ನಿಂತ ಹಾಗೆ ಇದೆ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಹೇಳಿದೆ.

ನ್ಯಾಯಮಂಡಳಿಗಳಿಗೆ ವಾರದೊಳಗೆ ನೇಮಕ ಮಾಡದಿದ್ದರೆ ನ್ಯಾಯಾಂಗ ನಿಂದನೆ ಎದುರಿಸಬೇಕಾದೀತು ಎಂಬ ಎಚ್ಚರಿಕೆಯನ್ನೂ ಪೀಠವು ಸರ್ಕಾರಕ್ಕೆ ನೀಡಿದೆ.

'ನಮಗೆ ಸಂಘರ್ಷ ಬೇಕಾಗಿಲ್ಲ. ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ ಮಾಡಿದ ರೀತಿಯು ನಮಗೆ ಖುಷಿ ತಂದಿದೆ. ಆದರೆ, ಸದಸ್ಯರು ಮತ್ತು ಅಧ್ಯಕ್ಷರು ಇಲ್ಲದೆ ನ್ಯಾಯಮಂಡಳಿಗಳ ಗುಣಮಟ್ಟ ಕುಸಿಯುತ್ತಿದೆ. ನಿಮ್ಮಲ್ಲಿ ಇರುವ ಪರ್ಯಾಯ ಯೋಜನೆಗಳೇನು ಎಂಬುದನ್ನು ತಿಳಿಸಿ. ನಿಮಗೆ ಏನು ಬೇಕಿದೆ? ನ್ಯಾಯಮಂಡಳಿಗಳನ್ನು ಮುಚ್ಚಬೇಕೇ' ಎಂದು ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಡಿ.ವೈ. ಚಂದ್ರಚೂಡ್ ಅವರೂ ಇದ್ದ ಪೀಠವು ಸರ್ಕಾರವನ್ನು ಪ್ರಶ್ನಿಸಿದೆ.

'ನಾವು ಶಿಫಾರಸು ಮಾಡಿದ ಹೆಸರುಗಳನ್ನು ಕೈಬಿಡಲಾಗುತ್ತಿದೆ. ಏಕೆ ಎಂಬುದೇ ಸ್ಪಷ್ಟವಿಲ್ಲ. ಅಧಿಕಾರಿಗಳ ಜತೆ ಕುಳಿತು ನಾವು ನಿರ್ಧಾರಗಳನ್ನು ಕೈಗೊಂಡಿದ್ದೆವು. ಎಲ್ಲ ಶ್ರಮವೂ ವ್ಯರ್ಥ' ಎಂದು ಚಂದ್ರಚೂಡ್ ಹೇಳಿದರು.

'ತೀರ್ಪು ಬಗ್ಗೆ ಗೌರವವಿಲ್ಲ'

ಈ ನ್ಯಾಯಾಲಯದ ತೀರ್ಪುಗಳ ಬಗ್ಗೆ ಸರ್ಕಾರಕ್ಕೆ ಗೌರವ ಇಲ್ಲ. ಅದು ದುರದೃಷ್ಟಕರ. ನ್ಯಾಯಮಂಡಳಿಗೆ ನೇಮಕ ಮಾಡಲಾಗುವುದು ಎಂದು ಕಳೆದ ಬಾರಿ ಹೇಳಿದ್ದೀರಿ. ಎಷ್ಟು ಹುದ್ದೆಗಳಿಗೆ ನೇಮಕ ಮಾಡಿದ್ದೀರಿ' ಎಂದು ಪೀಠವು ಸರ್ಕಾರವನ್ನು ಪ್ರಶ್ನಿಸಿದೆ. ನ್ಯಾಯಮಂಡಳಿಗಳನ್ನು ದುರ್ಬಲಗೊಳಿಸಲು ಸರ್ಕಾರ ಯತ್ನಿಸುತ್ತಿದೆ ಎಂದಿದೆ.

ಮದ್ರಾಸ್ ವಕೀಲರ ಸಂಘದ ಪ್ರಕರಣದಲ್ಲಿ ವಜಾ ಮಾಡಲಾದ ಕಾಯ್ದೆಯ ಪಡಿಯಚ್ಚಿನಂತೆ 2021ರ ಕಾಯ್ದೆ ಇದೆ ಎಂದು ಪೀಠವು ಅತೃಪ್ತಿ ವ್ಯಕ್ತಪಡಿಸಿತು.

'ಮೂರು ವಿಚಾರಗಳನ್ನು ಈಗ ಗಮನಿಸಬಹುದು– ಮೊದಲನೆಯದಾಗಿ, ನ್ಯಾಯಮಂಡಳಿ ಕಾಯ್ದೆಯನ್ನು ತಡೆ ಹಿಡಿಯಿರಿ ಅಥವಾ ನ್ಯಾಯಮಂಡಳಿಗಳನ್ನು ಮುಚ್ಚಿಬಿಡಿ. ನ್ಯಾಯಮಂಡಳಿಗೆ ನಾವೇ ನೇಮಕ ಮಾಡುತ್ತೇವೆ ಅಥವಾ ಹೈಕೋರ್ಟ್‌ಗಳಿಗೆ ಈ ಅಧಿಕಾರ ಕೊಡುತ್ತೇವೆ. ಮೂರನೆಯದಾಗಿ, ನ್ಯಾಯಾಂಗ ನಿಂದನೆ ಪ್ರಕರಣ ಪ್ರಕ್ರಿಯೆ ಆರಂಭಿಸುತ್ತೇವೆ' ಎಂದು ಪೀಠವು ಹೇಳಿದೆ.

ಮುಖ್ಯಾಂಶಗಳು

- 19 ನ್ಯಾಯಮಂಡಳಿಗಳಿಗೆ ಅಧ್ಯಕ್ಷರಿಲ್ಲ
- 110 ನ್ಯಾಯಾಂಗ ಸದಸ್ಯರ ಹುದ್ದೆಗಳು ಖಾಲಿ ಇವೆ
- 111 ತಾಂತ್ರಿಕ ಸದಸ್ಯರ ಹುದ್ದೆಗಳು ಖಾಲಿ ಇವೆ

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ತುಮಕೂರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿ.



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಬಿ. ಶ್ರೀರಾಮುಲು, ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಸಾರಿಗೆ ಸಚಿವರು ವಿಕಲಚೇತನ ಫಲಾನುಭವಿಗಳಿಗೆ ತ್ರಿಚಕ್ರ ವಾಹನ ವಿತರಿಸುತ್ತಿರುವುದು

75 ನೇ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ

54 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಹಾಗೂ ಇಲಾಖಾ ಫಲಾನುಭವಿಗಳಿಗೆ ಸಹಾಯಧನ ಮತ್ತು ಸವಲತ್ತುಗಳ ವಿತರಣಾ ಸಮಾರಂಭ

ದಿನಾಂಕ : 07-09-2021, ಸಂಜೆ 5.00 ಗಂಟೆಗೆ | ಸ್ಥಳ : ಗುಬ್ಬಿ ವೀರಣ್ಣ ರಂಗ ಮಂದಿರ, ತುಮಕೂರು

ರೂ. 17.83 ಕೋಟಿ ವೆಚ್ಚದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಮತ್ತು ರೂ 1.00 ಕೋಟಿ ವೆಚ್ಚದಲ್ಲಿ ತಾಲ್ಲೂಕು ಮಟ್ಟದ ವಾಲ್ಮೀಕಿ ಭವನ ಕಟ್ಟಡದ ಲೋಕಾರ್ಪಣೆ
ಸ್ಥಳ : ಪಳವಳ್ಳಿ / ಪಾವಗಡ

ರೂ. 18.00 ಕೋಟಿ ವೆಚ್ಚದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಕಟ್ಟಡದ ಲೋಕಾರ್ಪಣೆ
ಸ್ಥಳ : ಸೋದೇನಹಳ್ಳಿ, ಮಧುಗಿರಿ

ರೂ. 3.95 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯದ ಲೋಕಾರ್ಪಣೆ
ಸ್ಥಳ : ಶಿರಾ

ರೂ. 2.99 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯದ ಲೋಕಾರ್ಪಣೆ
ಸ್ಥಳ : ಕ್ಯಾತಸಂದ್ರ, ತುಮಕೂರು

ರೂ. 7.07 ಕೋಟಿ ವೆಚ್ಚದಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಜಿಲ್ಲಾ ಕಚೇರಿ ಲೋಕಾರ್ಪಣೆ
ಸ್ಥಳ : ತುಮಕೂರು

ರೂ. 2.99 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯದ ಲೋಕಾರ್ಪಣೆ
ಸ್ಥಳ : ಮರಳೂರು - ತುಮಕೂರು

: ಉದ್ಘಾಟನೆ :
ಶ್ರೀ ಬಿ. ಶ್ರೀರಾಮುಲು
ಮಾನ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಸಾರಿಗೆ ಇಲಾಖೆ ಸಚಿವರು

: ಅಧ್ಯಕ್ಷತೆ :
ಶ್ರೀ ಜಿ.ಬಿ. ಜ್ಯೋತಿ ಗಣೇಶ್
ಮಾನ್ಯ ಶಾಸಕರು, ತುಮಕೂರು ನಗರ ಕ್ಷೇತ್ರ

: ಸವಲತ್ತು ವಿತರಣೆ :
ಶ್ರೀ ಎಸ್.ವಿ. ರಾಮಚಂದ್ರಪ್ಪ
ಮಾನ್ಯ ಶಾಸಕರು, ಜಗಳೂರು ವಿ. ಸ. ಕ್ಷೇತ್ರ & ಅಧ್ಯಕ್ಷರು, ಕ. ಮ. ವಾ. ಪ. ಪಂ. ಅ. ನಿ

: ಘನ ಉಪಸ್ಥಿತಿ :
ಶ್ರೀ ಎ. ನಾರಾಯಣಸ್ವಾಮಿ, ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಖಾತೆ ಸಚಿವರು ಭಾರತ ಸರ್ಕಾರ
ಶ್ರೀ ಜೆ.ಸಿ. ಮಾಧುಸ್ವಾಮಿ, ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು
ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು, ಕ್ರೈಸ್
ಶ್ರೀ ಬಿ. ಸಿ. ನಾಗೇಶ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

: ವಿಶೇಷ ಆಹ್ವಾನಿತರು :
ಶ್ರೀ ಬಿ. ಜಿ. ಕೃಷ್ಣಪ್ಪ, ಪೂಜ್ಯ ಮಹಾ ಪೌರರು ಮಹಾನಗರ ಪಾಲಿಕೆ, ತುಮಕೂರು
ಶ್ರೀ ಜಿ. ಎಸ್. ಬಸವರಾಜು, ಮಾನ್ಯ ಲೋಕಸಭಾ ಸದಸ್ಯರು ತುಮಕೂರು ಲೋಕಸಭಾ ಕ್ಷೇತ್ರ
ಶ್ರೀ ಡಿ. ಕೆ. ಸುರೇಶ್, ಮಾನ್ಯ ಲೋಕಸಭಾ ಸದಸ್ಯರು, ಬೆಂಗಳೂರು (ಗ್ರಾ) ಲೋಕಸಭಾ ಕ್ಷೇತ್ರ

: ಮುಖ್ಯ ಅತಿಥಿಗಳು :
ಡಾ|| ಜಿ. ಪರಮೇಶ್ವರ್, ಮಾನ್ಯ ಶಾಸಕರು ಕೊರಟಗೆರೆ ವಿಧಾನಸಭಾ ಕ್ಷೇತ್ರ
ಶ್ರೀ ವೆಂಕಟರಮಣಪ್ಪ, ಮಾನ್ಯ ಶಾಸಕರು ಪಾವಗಡ ವಿಧಾನಸಭಾ ಕ್ಷೇತ್ರ
ಶ್ರೀ ಎಸ್. ಆರ್. ಶ್ರೀನಿವಾಸ್, ಮಾನ್ಯ ಶಾಸಕರು ಗುಬ್ಬಿ ವಿಧಾನಸಭಾ ಕ್ಷೇತ್ರ
ಶ್ರೀ ಡಿ. ಸಿ. ಗೌರಿಶಂಕರ್, ಮಾನ್ಯ ಶಾಸಕರು ತುಮಕೂರು ಗ್ರಾಮಾಂತರ
ಶ್ರೀ ಎಂ. ವಿ. ವೀರಭದ್ರಯ್ಯ, ಮಾನ್ಯ ಶಾಸಕರು ಮಧುಗಿರಿ ವಿಧಾನಸಭಾ ಕ್ಷೇತ್ರ
ಶ್ರೀ ಎ. ಎಸ್. ಜಯರಾಮ್, ಮಾನ್ಯ ಶಾಸಕರು, ತುರುವೇಕೆರೆ ವಿಧಾನಸಭಾ ಕ್ಷೇತ್ರ
ಡಾ. ರಂಗನಾಥ ಹೆಚ್.ಡಿ., ಮಾನ್ಯ ಶಾಸಕರು ಕುಣಿಗಲ್ ವಿಧಾನಸಭಾ ಕ್ಷೇತ್ರ
ಡಾ. ರಾಜೇಶ್ ಗೌಡ, ಮಾನ್ಯ ಶಾಸಕರು ಶಿರಾ ವಿಧಾನಸಭಾ ಕ್ಷೇತ್ರ
ಶ್ರೀ ವೈ.ಎ. ನಾರಾಯಣಸ್ವಾಮಿ, ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀ ಬೆಮೆಲ್ ಕಾಂತರಾಜು, ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀ ಕೆ.ಎ. ತಿಪ್ಪೇಸ್ವಾಮಿ, ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀ ಚಿದಾನಂದ ಎಂ. ಗೌಡ, ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀ ಬಿ.ವಿ. ನಾಗೇಶ್, ಮಾನ್ಯ ಅಧ್ಯಕ್ಷರು ತು.ನ.ಅ. ಪ್ರಾಧಿಕಾರ ತುಮಕೂರು
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ., ಅಪರಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು
ಡಾ. ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಪ. ವರ್ಗಗಳ ಕಲ್ಯಾಣ ಇಲಾಖೆ

ಸರ್ವರಿಗೂ ಆದರದ ಸ್ವಾಗತ

ಡಾ. ವೈಎಸ್. ಪಾಟೀಲ್, ಭಾ.ಆ.ಸೇ., ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ
ರಾಹುಲ್ ಕುಮಾರ್ ಶಹಾಪುರವಾಡ್ ಭಾ.ಆ.ಸೇ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತುಮಕೂರು ಜಿಲ್ಲೆ
ವಿದ್ಯಾಕುಮಾರಿ, ಭಾ.ಆ.ಸೇ., ಸಿ.ಇ.ಓ., ಜಿಲ್ಲಾ ಪಂಚಾಯತ್, ತುಮಕೂರು ಜಿಲ್ಲೆ
ಪಿ.ಎಸ್. ಕಾಂತರಾಜ್, ಕ.ಆ.ಸೇ., ನಿರ್ದೇಶಕರು, ಪ.ವ. ಕಲ್ಯಾಣ ಇಲಾಖೆ
ಸಿದ್ದೇಶ್ವರ ಎನ್. ಕ.ಆ.ಸೇ., ಕಾರ್ಯನಿರ್ವಾಹಕ ನಿರ್ದೇಶಕರು ಕ.ವ.ಶಿ.ಸ.ಸಂ
ಕವಿತಾ ಎಂ. ವಾರಂಗಲ್, ವ್ಯವಸ್ಥಾಪಕ ನಿರ್ದೇಶಕರು, ಕ. ಮ. ವಾ. ಪ. ಪಂ. ಅ. ನಿ

ಮಾಸ್ಕ್ ಧರಿಸಿ | ವ್ಯಕ್ತಿಗತ ಅಂತರ ಕಾಪಾಡಿ | ಆರೋಗ್ಯದಿಂದಿರಿ

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಕೆಲಸ ಸ್ಥಗಿತಗೊಳಿಸಿದ ಬಿಬಿಎಂಪಿ ಪೌರ ಕಾರ್ಮಿಕರು

ಪ್ರತಿಭಟನೆ– ಕಸ ವಿಲೇವಾರಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪೌರ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರ ಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ್ದರಿಂದ ನಗರದಲ್ಲಿ ಅನೇಕ ಕಡೆ ಕಸ ವಿಲೇವಾರಿಯಲ್ಲಿ ವ್ಯತ್ಯಯವಾಯಿತು.

ಪೌರಕಾರ್ಮಿಕರು, ಮೇಲ್ವಿಚಾರಕರು, ಕಸ ಸಾಗಣೆ ವಾಹನ ಮತ್ತು ಆಟೊ ಟಿಪ್ಪರ್ ಚಾಲಕರು, ಲೋಡರ್‌ಗಳು ಹಾಗೂ ಸಹಾಯಕರು ಸೇರಿದಂತೆ ಎಲ್ಲ ಸ್ವಚ್ಛತಾ ಕಾರ್ಮಿಕರನ್ನು ನೇರ ಪಾವತಿ ವ್ಯವಸ್ಥೆಯಡಿ ತರಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಹಾಸಂಘವು ಪ್ರತಿಭಟನೆಗೆ ಕರೆ ನೀಡಿತ್ತು.

ಮನೆ ಮನೆಯಿಂದ ಕಸ ಸಂಗ್ರಹಿಸುವ ಹಾಗೂ ರಸ್ತೆಗಳನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದರು. ಹಾಗಾಗಿ ಅನೇಕ ಕಡೆ ಮನೆಗಳ ಮುಂದೆಯೇ ಕಸಗಳು ಉಳಿದವು. ಸಚಿವರು ಸೇರಿದಂತೆ ಗಣ್ಯರ ಮನೆಗಳ ಮುಂದಿನ ಕಸವೂ ವಿಲೇವಾರಿ ಆಗಿರಲಿಲ್ಲ. ಪಾಲಿಕೆ ಕೇಂದ್ರ ಕಚೇರಿ ಬಳಿಯೂ ಕಸ ಹಾಗೆಯೇ ಉಳಿದಿತ್ತು.

ಪ್ರತಿಭಟನೆ ಬಗ್ಗೆ ಖಚಿತತೆ ಇಲ್ಲದ ಕಾರಣ ಬಿಬಿಎಂಪಿ ಅಧಿಕಾರಿಗಳೂ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿರಲಿಲ್ಲ.

2ನೇ ಪುಟ ನೋಡಿ

ಸ್ವಚ್ಛತಾ ಕಾರ್ಮಿಕರ ಸೇವೆ ಕಾಯಂಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ನೇತೃತ್ವದಲ್ಲಿ ಆನಂದರಾವ್ ವೃತ್ತದ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಪೌರಕಾರ್ಮಿಕರು ಘೋಷಣೆ ಕೂಗಿದರು ಪ್ರಜಾವಾಣಿ ಚಿತ್ರ

'ಬೇಡಿಕೆ ಈಡೇರದಿದ್ದರೆ ಮತ್ತೆ ಪ್ರತಿಭಟನೆ'

'ರಾಜ್ಯದಾದ್ಯಂತ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಪೌರಕಾರ್ಮಿಕರನ್ನು ಒಂದು ತಿಂಗಳ ಒಳಗೆ ಕಾಯಂಗೊಳಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪೌರಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಮತ್ತೆ ಪ್ರತಿಭಟನೆಗೆ ಇಳಿಯಲಿದ್ದಾರೆ' ಎಂದು ಮಹಾಸಂಘದ ಅಧ್ಯಕ್ಷ ಮೈಸೂರು ನಾರಾಯಣ ಸ್ಪಷ್ಟಪಡಿಸಿದರು.

2ನೇ ಪುಟ ನೋಡಿ

ಚರ್ಚ್ ವಾರ್ಷಿಕೋತ್ಸವ ಆಚರಣೆಗೆ ಮನವಿ

ಬೆಂಗಳೂರು: ಶಿವಾಜಿನಗರದಲ್ಲಿರುವ ಸಂತ ಆರೋಗ್ಯ ಮಾತೆ ಬೆಸಿಲಿಕಾ ಚರ್ಚ್‌ನ ವಾರ್ಷಿಕೋತ್ಸವ ಆಚರಣೆಗೆ ಅನುಮತಿ ನೀಡಬೇಕು ಎಂದು ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಮನವಿ ಮಾಡಿದೆ.

'ಕೋವಿಡ್ ನಿಯಮದಂತೆ ಗಣೇಶೋತ್ಸವವನ್ನು ಸರಳವಾಗಿ ಆಚರಿಸಲು ಹಿಂದೂಗಳಿಗೆ ಸರ್ಕಾರವು ಅವಕಾಶ ಮಾಡಿಕೊಟ್ಟಿದೆ. ಸರ್ಕಾರದ ಈ ನಿರ್ಧಾರವನ್ನು ಸಂಘವು ಸ್ವಾಗತಿಸುತ್ತದೆ. ಅದೇ ರೀತಿ, ಕ್ರೈಸ್ತರಿಗೂ ಚರ್ಚ್‌ಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು' ಎಂದು ಸಂಘದ ಅಧ್ಯಕ್ಷ ರಫಾಯಲ್ ರಾಜ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. 'ಇದೇ 8ರಂದು ಸಂತ ಆರೋಗ್ಯ ಮಾತೆ ಬೆಸಿಲಿಕ ಚರ್ಚ್‌ನ ವಾರ್ಷಿಕೋತ್ಸವ ನಡೆಯಲಿದೆ. ಅಂದು ಸಂಜೆ 5.30ರಿಂದ ರಾತ್ರಿ 9ರವರೆಗೆ ಆಚರಣೆಗೆ ಅವಕಾಶ ನೀಡಬೇಕು. ವಾರ್ಷಿಕೋತ್ಸವ ವೇಳೆ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು' ಎಂದಿದ್ದಾರೆ.

THE BIG DISCOUNT SALE
All New 2021 Collection at Mill Rate

Opening Today
Credit Cards Accepted
SINCE 1960
hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas
HEAVY DISCOUNT UPTO 50%
Shop online at www.hakoba.in
Venue :
Nagalakshmi Kalyana Mantapa
No. 5, BSK IInd Stage, Near Post Office, Bangalore - 560 070
KALAVISION

ಮುಖ್ಯ ರಸ್ತೆ ಗುಂಡಿ ಮುಚ್ಚಲು 20ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಮುಖ್ಯ ರಸ್ತೆಗಳ ಗುಂಡಿ ಮುಚ್ಚಲು ಇದೇ 20ರ ಹಾಗೂ ವಾರ್ಡ್ ರಸ್ತೆಗಳ ಗುಂಡಿ ಮುಚ್ಚಲು ಇದೇ 30ರ ಗಡುವನ್ನು ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವ ಆರ್.ಅಶೋಕ ನಿಗದಿಪಡಿಸಿದ್ದಾರೆ.

ನಗರದ ರಸ್ತೆಗಳು ಅಧ್ವಾನ ಸ್ಥಿತಿ ತಲುಪಿವೆ. ಗುಂಡಿಗಳಿಂದ ಕೂಡಿದ ರಸ್ತೆಗಳಲ್ಲಿ ವಾಹನ ಚಲಾಯಿಸಲು ಚಾಲಕರು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ದೂರುಗಳು ಬಂದಿದ್ದರಿಂದ ಸಚಿವರು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಅಧಿಕಾರಿಗಳ ಸಭೆಯನ್ನು ಸೋಮವಾರ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಚಿವರು, '3-4 ತಿಂಗಳುಗಳಿಂದ ನಗರದಲ್ಲಿ ಮಳೆ ಸುರಿಯುತ್ತಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಮುಖ್ಯ ರಸ್ತೆಗಳಲ್ಲಿ ಹಾಗೂ ವಾರ್ಡ್ ರಸ್ತೆಗಳಲ್ಲಿ ಗುಂಡಿಗಳು ಕಾಣಿಸಿಕೊಂಡಿವೆ. ಒಟ್ಟು 2,653 ರಸ್ತೆಗಳು ಹಾಳಾಗಿವೆ. ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಸೂಚನೆ ನೀಡಿದ್ದೇನೆ' ಎಂದರು.

'ಬಿಬಿಎಂಪಿಯು ಕಣ್ಣೂರಿನಲ್ಲಿ ಸ್ಥಾಪಿಸಿರುವ ಘಟಕದಲ್ಲಿ ನಿತ್ಯ 20 ಲೋಡ್‌ಗಳಷ್ಟು ಜಲ್ಲಿ– ಬಿಸಿ ಡಾಂಬರು ಮಿಶ್ರಣ ಸಿದ್ಧವಾಗುತ್ತದೆ. ಇದನ್ನು ಎಲ್ಲ ವಲಯಗಳಿಗೆ ಕಳುಹಿಸಿಕೊಡಲಾಗುತ್ತಿದೆ. ಜಲ್ಲಿ– ಡಾಂಬರು ಮಿಶ್ರಣ ಪೂರೈಕೆಯಾಗುವ ಕಡೆ ಸ್ಥಳೀಯ ಎಂಜಿನಿಯರ್‌ಗಳು ಕಡ್ಡಾಯವಾಗಿ ಹಾಜರಿರಬೇಕು. ರಸ್ತೆ ಗುಂಡಿಯನ್ನು ಶುಚಿಗೊಳಿಸಿ, ಅದರಲ್ಲಿ ನೀರು ನಿಲ್ಲದಂತೆ ವ್ಯವಸ್ಥೆ ಕಲ್ಪಿಸಬೇಕು' ಎಂದು ಸೂಚನೆ ನೀಡಿದರು.

'ಗುಂಡಿ ಮುಚ್ಚುವ ಕಾರ್ಯ ಯಾವುದೇ ಕಾರಣಕ್ಕೂ ತಡವಾಗಬಾರದು. ಇದೇ 20ರ ನಂತರ ಮಳೆ ಬಂದು ಗುಂಡಿ ಬಿದ್ದರೆ ಅದನ್ನೂ ತಕ್ಷಣವೇ ಮುಚ್ಚಬೇಕು. ದುರಸ್ತಿ ಮಾಡಿದ ರಸ್ತೆಯ ಡಾಂಬರು ಮರುದಿನವೇ ಕಿತ್ತುಹೋಗಬಾರದು. ಗಡುವಿನೊಳಗೆ ಗುಂಡಿಗಳನ್ನು, ಮುಚ್ಚದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಅನಿವಾರ್ಯ' ಎಂದು ಎಚ್ಚರಿಸಿದರು.

ನಗರದ ರಸ್ತೆಗಳು ಮತ್ತೆ ಬಾಯ್ದೆರೆದಿರುವ ಕುರಿತು 'ಪ್ರಜಾವಾಣಿ' ಸೋಮವಾರದ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು.

ಕಾಮಗಾರಿ ವಿವರಕ್ಕೆ ಜಿಯೊ ಸ್ಟ್ಯಾಂಪ್ ಆ್ಯಪ್

'ರಸ್ತೆ ಗುಂಡಿ ಮುಚ್ಚಿದ ಕುರಿತು ಅಕ್ರಮವಾಗಿ ಬಿಲ್ ಮಾಡುವುದಕ್ಕೆ ಅವಕಾಶ ಇಲ್ಲದಂತೆ ಮಾಡಲು ಜಿಯೊ ಸ್ಟ್ಯಾಂಪ್ ಆ್ಯಪ್ ರೂಪಿಸಿದ್ದೇವೆ. ಗುಂಡಿ ಮುಚ್ಚುತ್ತಿದ್ದಂತೆಯೇ ಅದರ ವಿವರಗಳು ಚಿತ್ರ ಸಮೇತ ಈ ಆ್ಯಪ್‌ನಲ್ಲಿ ಅಪ್‌ಲೋಡ್ ಆಗಲಿದೆ. ಜಲ್ಲಿ– ಬಿಸಿ ಡಾಂಬರು ಮಿಶ್ರಣ ಘಟಕ ಹೊತ್ತ ಲಾರಿ ಎಲ್ಲೆಲ್ಲ ಸಂಚರಿಸಿದೆ, ಎಲ್ಲಿ ಕೆಲಸ ಪ್ರಗತಿಯಲ್ಲಿದೆ ಎಂಬ ವಿವರಗಳೂ ಈ ಆ್ಯಪ್‌ನಲ್ಲಿ ಲಭ್ಯ' ಎಂದು ಅಶೋಕ ಮಾಹಿತಿ ನೀಡಿದರು.

'ಈ ಆ್ಯಪ್ ಮೂಲಕ ಕಾಮಗಾರಿ ನಡೆಯುವ ಸ್ಥಳದ ಮಾಹಿತಿ ಮೇಲಧಿಕಾರಿಗಳಿಗೆ ನಿಖರವಾಗಿ ತಿಳಿಯುತ್ತದೆ. ಸಾರ್ವಜನಿಕರೂ ಈ ವಿವರಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಜಿಯೊ ಸ್ಟ್ಯಾಂಪಿಂಗ್ ಆ್ಯಪ್ ಬಳಕೆಯಿಂದಾಗಿ ವಂಚನೆಗೆ ಅವಕಾಶವೇ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಸಮನ್ವಯ ಸಭೆ ಶೀಘ್ರ

'ಜಲಮಂಡಳಿಯವರು ನೀರಿನ ಕೊಳವೆ ದುರಸ್ತಿ ಮಾಡಿದ ಕಡೆ ರಸ್ತೆಗಳನ್ನು ಅಗೆದು ಹಾಗೆಯೇ ಬಿಟ್ಟು ಹೋಗಿದ್ದಾರೆ. ಬೆಸ್ಕಾಂನವರು ನೆಲದಡಿ ಕೇಬಲ್ ಅಳವಡಿಸಲು ರಸ್ತೆ ಅಗೆಯುತ್ತಿದ್ದಾರೆ. ಇವುಗಳನ್ನು ಸರಿಯಾಗಿ ಮುಚ್ಚದೇ ಸಮಸ್ಯೆ ಎದುರಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಗಮನಕ್ಕೆ ತಂದಿದ್ದಾರೆ. ಈ ಸಮಸ್ಯೆ ಬಗೆಹರಿಸಲು ಬೆಸ್ಕಾಂ, ಜಲಮಂಡಳಿ ಹಾಗೂ ಬಿಬಿಎಂಪಿ ಅಧಿಕಾರಿಗಳ ಸಭೆ ನಡೆಸುತ್ತೇನೆ' ಎಂದು ಅಶೋಕ ತಿಳಿಸಿದರು.

'ಏಕರೂಪ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವುದು ಅಗತ್ಯ'

ಬೆಂಗಳೂರು: 'ಸ್ವಾತಂತ್ರ್ಯ ಅಮೃತ ಮಹೋತ್ಸವದ ಹೊತ್ತಿನಲ್ಲಿ ದೇಶಕ್ಕೆ ಏಕರೂಪದ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವುದು ಅತ್ಯಗತ್ಯ' ಎಂದು ರಾಷ್ಟ್ರೀಯ ಶಿಕ್ಷಣ ನೀತಿ ಸಲಹಾ ಸಮಿತಿ ಸದಸ್ಯ ಎಂ.ಕೆ.ಶ್ರೀಧರ್ ಅಭಿಪ್ರಾಯಪಟ್ಟರು.

ವಿದ್ಯಾಭಾರತಿ ಕರ್ನಾಟಕ ಮತ್ತು ಸಿ.ಎಂ.ಆರ್.ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಕರ್ನಾಟಕದ ಶಾಲಾ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ: ಅವಕಾಶಗಳು ಹಾಗೂ ಕಾರ್ಯತಂತ್ರಗಳು' ಕುರಿತ ವಿಚಾರ ಸಂಕಿರಣದಲ್ಲಿ ಸೋಮವಾರ ಮಾತನಾಡಿದರು.

'ಸ್ವಾತಂತ್ರ್ಯ ಬಂದ ನಂತರ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತರುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯಲಿಲ್ಲ' ಎಂದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್, 'ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಈ ಸಂಬಂಧ ಶಿಕ್ಷಣ ತಜ್ಞರು, ಶಿಕ್ಷಣ ಸಂಸ್ಥೆಗಳು ಹಾಗೂ ಸಂಘ ಸಂಸ್ಥೆಗಳ ಸಲಹೆಗಳನ್ನು ಪಡೆದು ಮುಂದಡಿ ಇಡುತ್ತೇವೆ' ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ, 'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಗ್ರಾಮೀಣ ಹಾಗೂ ನಗರ ಶಿಕ್ಷಣದಲ್ಲಿ ಸಮನ್ವಯತೆ ಮತ್ತು ಸಮಗ್ರತೆ ತರಲು ನೆರವಾಗಲಿದೆ' ಎಂದರು.

ವಿದ್ಯಾಭಾರತಿ ಕರ್ನಾಟಕದ ಅಧ್ಯಕ್ಷ ದೂಸಿ ರಾಮಕೃಷ್ಣ ರಾವ್ 'ರಾಷ್ಟ್ರೀಯ ಶಿಕ್ಷಣ ನೀತಿಯಿಂದ ದೇಶದಲ್ಲಿ ಆಮೂಲಾಗ್ರ ಬದಲಾವಣೆ ಸಾಧ್ಯ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ರೌಡಿ ಪಟ್ಟಿ: ಅಮಾಯಕರ ಹೆಸರು ಹೊರಕ್ಕೆ-ಆರಗ ಜ್ಞಾನೇಂದ್ರ

ಬೆಂಗಳೂರು: 'ಕನ್ನಡ, ರೈತ ಹಾಗೂ ಜನಪರ ಚಳವಳಿಗಳಲ್ಲಿ ಭಾಗವಹಿಸಿದವರು ಅಮಾಯಕರಾಗಿದ್ದು, ಅಂತಹವರೂ ಸೇರಿದಂತೆ ಅಮಾಯಕರ ಹೆಸರುಗಳು ರೌಡಿಪಟ್ಟಿಯಲ್ಲಿ ಸೇರ್ಪಡೆಯಾಗಿದ್ದರೆ ಅವುಗಳನ್ನು ಕೈಬಿಡಲು ಕ್ರಮವಹಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿರುವ ರೌಡಿ ಪಟ್ಟಿಯನ್ನು ಕಾನೂನಿನ ಮಾನದಂಡಗಳ ಪ್ರಕಾರ ಮರು ಪರಿಶೀಲಿಸಬೇಕು. ಈ ರೀತಿಯ ವೈಜ್ಞಾನಿಕವಾಗಿ ಪರಿಷ್ಕರಿಸುವ ಅಧಿಕಾರವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನೀಡಲಾಗಿದೆ' ಎಂದು ಹೇಳಿದರು.

'ವೀಸಾ ಅವಧಿ ಮುಗಿದರೂ ರಾಜ್ಯದಲ್ಲಿ ಅಕ್ರಮವಾಗಿ ನೆಲಸಿರುವ ವಿದೇಶಿ ನಾಗರಿಕ ರನ್ನು ಗುರುತಿಸಿ ಅವರು ನಡೆಸುತ್ತಿರುವ ಚಟುವಟಿಕೆಗಳ ಮೇಲೆ ತೀವ್ರ ನಿಗಾ ವಹಿಸಬೇಕೆಂದು ನಿರ್ದೇಶನ ನೀಡಲಾಗಿದೆ' ಎಂದು ಅವರು ವಿವರಿಸಿದರು.

ಕರುಣಾ ವಿರುದ್ಧ ದೂರು: ತಪಾಸಣೆಗೆ ಸಮಿತಿ ರಚನೆ

ಬೆಂಗಳೂರು: ಕರುಣಾ ಅನಿಮಲ್ ವೆಲ್ಫೇರ್ ಸೊಸೈಟಿ ವಿರುದ್ಧ ಸರ್ಕಾರಕ್ಕೆ ದೂರು ಬಂದಿರುವುದರಿಂದ, ದೂರಿನ ಬಗ್ಗೆ ತಪಾಸಣೆ ನಡೆಸಿ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಸಮಿತಿಯೊಂದನ್ನು ರಚಿಸಿದೆ.

ಕರ್ನಾಟಕ ವೆಟರ್ನರಿ ಕೌನ್ಸಿಲ್ ಅಧ್ಯಕ್ಷ ಡಾ.ನರೇಂದ್ರ ಸಮಿತಿಯ ಅಧ್ಯಕ್ಷರಾಗಿದ್ದು, ಕ್ಯಾಪ್ಟನ್ ಪ್ರದೀಪ್ ವಿ.ರಾವ್, ಪ್ರಿಯಾ ಚೆಟ್ಟಿ ರಾಜ್‌ಗೋಪಾಲ್, ನಂದಿನಿ ಮತ್ತು ಡಾ. ಚೆಲುವಯ್ಯ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಬಾಲಕಿ ಮೇಲೆ ಅತ್ಯಾಚಾರ: ಎಂಟು ಮಂದಿ ಬಂಧನ

ಪುಣೆ(ಪಿಟಿಐ): ಇಲ್ಲಿನ ರೈಲು ನಿಲ್ದಾಣ ಪ್ರದೇಶದಿಂದ 14 ವರ್ಷದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಆರೋಪದಲ್ಲಿ ಆರು ಮಂದಿ ಆಟೊ ಚಾಲಕರು ಮತ್ತು ಇಬ್ಬರು ರೈಲ್ವೆ ನೌಕರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕಿ ನಾಪತ್ತೆಯಾಗಿರುವ ಕುರಿತು ಈ ಹಿಂದೆ ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ತನಿಖೆ ನಡೆಸಿ ಬಾಲಕಿಯನ್ನು ಪತ್ತೆ ಹಚ್ಚಲಾಗಿದೆ. ಈ ವೇಳೆ ಆಕೆ ತನ್ನ ಮೇಲೆ ಅತ್ಯಾಚಾರ ನಡೆದಿರುವ ವಿಚಾರ ತಿಳಿಸಿದ್ದಾಳೆ ಎಂದು ಪೊಲೀಸರು ಹೇಳಿದ್ದಾರೆ.

'ಪ್ರಸಕ್ತ ಸಾಲಿನಿಂದಲೇ ಹೊಸ ಶಿಕ್ಷಣ ನೀತಿ ಜಾರಿ'

ಬೆಂಗಳೂರು: 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲಾಗುತ್ತದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಕೆ.ಇ.ದೇವನಾಥನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಈ ವರ್ಷದಿಂದ ನಾಲ್ಕು ವರ್ಷಗಳ ಸ್ನಾತಕೋತ್ತರ ಪದವಿ ಆರಂಭಿಸಲಾಗುತ್ತದೆ. ವಿದ್ಯಾರ್ಥಿಗಳು ತಮಗಿಷ್ಟದ ಕೋರ್ಸ್‌ಗಳನ್ನು ಕಲಿಯುವ ಅವಕಾಶವನ್ನೂ ನೀಡಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಉತ್ತಮ ಅಂಶಗಳಿದ್ದು, ಇದನ್ನು ವಿದ್ಯಾರ್ಥಿ ಕೇಂದ್ರಿತವಾಗಿ ರೂಪಿಸಲಾಗಿದೆ' ಎಂದು ಹೇಳಿದರು.

'ಇದೇ 9ರಂದು ಸಾಂಸ್ಕೃತಿಕ ಮಹೋತ್ಸವ ಹಾಗೂ ಸಂಸ್ಕೃತ ಗ್ರಂಥ ಪುರಸ್ಕಾರ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಗಾಯನ ಸಮಾಜದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 15 ಮಂದಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಮಾಹಿತಿ ನೀಡಿದರು.

ಪ್ರೊ.ಎಂ.ಕೊಟ್ರೇಶ್, ವಿ.ಗಿರೀಶ್ ಚಂದ್ರ ಇದ್ದರು.

'ಮುಸ್ಲಿಮರು ಹೆದರಬೇಕಾಗಿಲ್ಲ'

ಮುಂಬೈ (ಪಿಟಿಐ): ಹಿಂದೂಗಳು ಯಾರ ಬಗ್ಗೆಯೂ ವೈರತ್ವ ಸಾಧಿಸುವುದಿಲ್ಲ. ಹಾಗಾಗಿ ಭಾರತದಲ್ಲಿ ಅಲ್ಪಸಂಖ್ಯಾತರು ಯಾವುದಕ್ಕೂ ಹೆದರಬೇಕಾಗಿಲ್ಲ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸೋಮವಾರ ಇಲ್ಲಿ ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು ಭಾರತದ ಪ್ರತಿ ಪ್ರಜೆ ಕೂಡ 'ಹಿಂದೂ' ಆಗಿದ್ದಾನೆ. ವಿವೇಕಯುತ ಮುಸ್ಲಿಂ ನಾಯಕರು ಮೂಲಭೂತವಾದಿಗಳ ವಿರುದ್ಧ ಒಗ್ಗೂಡಬೇಕು ಎಂದರು.

ಕಸ ವಿಲೇವಾರಿ ವ್ಯತ್ಯಯ

ಒಂದನೇ ಪುಟದಿಂದ

ಪರಿಸ್ಥಿತಿಯ ಗಂಭೀರತೆ ಅರಿವಾಗುತ್ತಿದ್ದಂತೆಯೇ ಅಧಿಕಾರಿಗಳು ಪೌರಕಾರ್ಮಿಕರ ಮನವೊಲಿಸಿ ಕೆಲವು ಕಡೆ ಕಸ ತೆರವುಗೊಳಿಸಿದರು. ಪ್ರಮುಖ ಮಾರುಕಟ್ಟೆಗಳ ಬಳಿ ಕಸದ ರಾಶಿ ತೆರವುಗೊಳಿಸಲು ಕ್ರಮ ಕೈಗೊಂಡರು.

'ಅನೇಕ ವಲಯಗಳಲ್ಲಿ ಪೌರಕಾರ್ಮಿಕರು ದಿಢೀರ್ ಕೆಲಸ ಸ್ಥಗಿತಗೊಳಿಸಿದ್ದರಿಂದ ಕಸ ವಿಲೇವಾರಿ ಸಮಸ್ಯೆ ಆಗಿದ್ದು ನಿಜ. ದಕ್ಷಿಣ ವಲಯ, ಆರ್.ಆರ್.ನಗರ, ಪೂರ್ವ ವಲಯ ಹಾಗೂ ಯಲಹಂಕ ವಲಯದ ಯಲಹಂಕ ವಿಭಾಗದಲ್ಲಿ ಹೆಚ್ಚಿನ ಸಮಸ್ಯೆ ಆಗಿದೆ. ಕಸ ವಿಲೇವಾರಿ ಶೇ 30ರಷ್ಟು ವ್ಯತ್ಯಯವಾಗಿದೆ' ಎಂದು ಬಿಬಿಎಂಪಿ ಕಸ ನಿರ್ವಹಣೆ ವಿಭಾಗದ ಜಂಟಿ ಆಯುಕ್ತ ಸರ್ಫರಾಜ್ ಖಾನ್ ತಿಳಿಸಿದರು.

'ಮಾರುಕಟ್ಟೆಗಳ ಬಳಿ ಕಸ ವಿಲೇ ಎಂದಿನಂತೆಯೇ ನಡೆದಿದೆ. ಹಬ್ಬ ಹರಿದಿನಗಳು ಸಮೀಪಿಸುತ್ತಿರುವುದರಿಂದ ಮಾರುಕಟ್ಟೆಗಳ ಕಾರ್ಯ ನಿರ್ವಹಣೆಗೆ ಯಾವುದೇ ತೊಡಕಿಲ್ಲ' ಎಂದರು.

ಪೌರಕಾರ್ಮಿಕರ ಬೇಡಿಕೆಗಳೇನು?

- ಸ್ವಚ್ಛತಾ ವ್ಯವಸ್ಥೆಯಡಿ ಕಾರ್ಯನಿರ್ವಹಿಸುವ ಎಲ್ಲರ ಸೇವೆಯನ್ನೂ ಕಾಯಂಗೊಳಿಸಬೇಕು
- ನೇರ ಪಾವತಿ ವ್ಯವಸ್ಥೆಯ ಮೇಲ್ವಿಚಾರಕರ ಕನಿಷ್ಠ ವೇತನವನ್ನು ₹ 25 ಸಾವಿರಕ್ಕೆ ಹೆಚ್ಚಿಸಬೇಕು
- ಬಿಬಿಎಂಪಿ ವ್ಯಾಪ್ತಿಯ ಸ್ವಚ್ಛತಾ ಕಾರ್ಮಿಕರನ್ನು ಕಸ ನಿರ್ವಹಣೆ ಕಂಪನಿಯ ಬದಲು ಪಾಲಿಕೆಯಲ್ಲೇ ಕಾಯಂಗೊಳಿಸಬೇಕು
- ಪೌರಕಾರ್ಮಿಕರು ನಿವೃತ್ತಿ ಸಂದರ್ಭದಲ್ಲಿ ಅವರ ಜೀವನ ಭದ್ರತೆಗಾಗಿ ₹ 10 ಲಕ್ಷ ನೀಡಬೇಕು
- ಮೇಲ್ವಿಚಾರಕರ ನೇಮಕಾತಿಯ ವಯೋಮಿತಿಯನ್ನು 45 ವರ್ಷಗಳಿಂದ 55 ವರ್ಷಗಳಿಗೆ ಹೆಚ್ಚಿಸಬೇಕು
- ಈಗಿನಂತೆ ಪ್ರತಿ 700 ಜನಸಂಖ್ಯೆಗೆ ಒಬ್ಬರ ಬದಲು ಐಪಿಡಿ ಸಾಲಪ್ಪ ಅವರ ವರದಿ ಪ್ರಕಾರ ಪ್ರತಿ 500 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರನ್ನು ನೇಮಿಸಬೇಕು
- ಕೋವಿಡ್‌ನಿಂದ ಮೃತಪಟ್ಟ ಪೌರಕಾರ್ಮಿಕರ ಕುಟುಂಬಗಳಿಗೆ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿ ₹ 30 ಲಕ್ಷ ಪರಿಹಾರ ಒದಗಿಸಬೇಕು
- ಮಹಿಳಾ ಪೌರಕಾರ್ಮಿಕರಿಗೆ ವಿಶ್ರಾಂತಿ ಗೃಹಗಳ ಹಾಗೂ ಶೌಚಾಲಯಗಳ ವ್ಯವಸ್ಥೆ ಹಾಗೂ ಕುಡಿಯಲು ಬಿಸಿ ನೀರು, ವಸತಿ ವ್ಯವಸ್ಥೆ ಒದಗಿಸಬೇಕು
- ಐಪಿಡಿ ಸಾಲಪ್ಪ ವರದಿಯನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಬೇಕು
- ಭವಿಷ್ಯನಿಧಿ ಕುರಿತ ಗೊಂದಲ ಬಗೆಹರಿಸಬೇಕು

'ಬೇಡಿಕೆ ಈಡೇರದಿದ್ದರೆ ಮತ್ತೆ ಪ್ರತಿಭಟನೆ'

ಒಂದನೇ ಪುಟದಿಂದ

'ಬಿಬಿಎಂಪಿಯ 18 ಸಾವಿರ ಪೌರಕಾರ್ಮಿಕರು ಸೇರಿದಂತೆ ರಾಜ್ಯದಲ್ಲಿ 38 ಸಾವಿರಕ್ಕೂ ಅಧಿಕ ಪೌರಕಾರ್ಮಿಕರು ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಬದುಕಿನ ಭದ್ರತೆ ಬಗ್ಗೆ ಸರ್ಕಾರ ಕಾಳಜಿ ವಹಿಸುತ್ತಿಲ್ಲ' ಎಂದು ಅವರು ಟೀಕಿಸಿದರು.

'ಸಚಿವ ಆರ್.ಅಶೋಕ ಅವರು ನಮ್ಮ ಜೊತೆ ಮಾತುಕತೆ ನಡೆಸಿದ್ದು, ಬೇಡಿಕೆ ಈಡೇರಿಸಲು ಎರಡು ತಿಂಗಳ ಕಾಲಾವಕಾಶ ಕೋರಿದ್ದಾರೆ. ಈ ಬಗ್ಗೆ ಸಮಿತಿಯ ಪದಾಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನವನ್ನು ತಿಳಿಸುವುದಾಗಿ ಹೇಳಿದ್ದೇನೆ' ಎಂದರು.

ಮಹಾಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮುನಿರಾಜು, ರಾಜ್ಯ ಸಂಚಾಲಕ ಓಬಳೇಶ್, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಮುತ್ಯಾಲಪ್ಪ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಎನ್.ಪಿ.ಶ್ರೀನಿವಾಸ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್

chamundeswari
CIN: U15435KA1970PLC001974
ನೋಂದಾಯಿತ ಕಚೇರಿ: ನಂ. 88/5, ರಿಚ್‌ಮಂಡ್ ರೋಡ್, ಬೆಂಗಳೂರು – 560 025
Phone no: 080 - 2500 2500 Fax: 080 – 2500 2510
Email: complianceofficer@chamundisugars.com Web: www.chamundeswarisugars.in

ಷೇರುದಾರರಿಗೆ ಸೂಚನೆ

ಕಂಪನಿಯ ಸದಸ್ಯರ **ನಲವತ್ತೆಂಟನೆಯ ವಾರ್ಷಿಕ ಸಾಮಾನ್ಯ ಸಭೆ (AGM)** ಬುಧವಾರ, 29 ಸೆಪ್ಟೆಂಬರ್, 2021 ರಂದು ಭಾರತಿಯ ಕಾಲಮಾನ ಮಧ್ಯಾಹ್ನ 12:10 ಕ್ಕೆ ವಿಡಿಯೋ ಕಾನ್ಫರೆನ್ಸಿಂಗ್ ("VC")/ಇತರೆ ಆಡಿಯೋ–ವಿಷುಯಲ್ ಮೀನ್ಸ್ ("OAVM") ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಕಂಪನಿಗಳ ಕಾಯ್ದೆ 2013 ರ ಅನ್ವಯವಾಗುವ ಎಲ್ಲಾ ನಿಯಮಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅನುಸಾರವಾಗಿ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 02/2021, ನಂ. 14/2020, 17/2020 ಮತ್ತು 20/2020 ರ ಏಪ್ರಿಲ್ 8, 2020, ಏಪ್ರಿಲ್ 13, 2020 ಮತ್ತು ಮೇ 5, 2020 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("MCA") ಹೊರಡಿಸಿದ ಎಲ್ಲಾ ಇತರೆ ಸುತ್ತೋಲೆಗಳು AGM ಗೆ ಕರೆ ಮಾಡುವ ಸೂಚನೆಯಲ್ಲಿ ವ್ಯವಹಾರವನ್ನು ವಹಿವಾಟು ಮಾಡಲು, ಸದಸ್ಯರು VC/OAVM ಮೂಲಕ AGM ಗೆ ಹಾಜರಾಗಬಹುದು.

ಅನ್ವಯವಾಗುವ ಸುತ್ತೋಲೆಯ ಪ್ರಕಾರ ಆರ್ಥಿಕ ವರ್ಷ 2020–21 ಕ್ಕೆ ಸಂಬಂಧಪಟ್ಟಂತೆ ಒಟ್ಟುಗೂಡಿಸಿದ ಹಾಗೂ ಪ್ರತ್ಯೇಕ ಆರ್ಥಿಕ ತಖ್ತೆಗಳು ಆಡಳಿತ ಮಂಡಳಿಯ ವರದಿ ಮತ್ತಿತರ ದಾಖಲೆಗಳನ್ನು ಸೋಮವಾರ 06ನೇ ತಾರೀಕು ಸೆಪ್ಟೆಂಬರ್ 2021ರ ದಿನಾಂಕದಂದು ಸದಸ್ಯರುಗಳ ನೊಂದಣಿ ಪುಸ್ತಕದಲ್ಲಿರುವ ಸದಸ್ಯರುಗಳಿಗೆ, ಹಾಗೂ ಇ–ಮೇಲ್ ವಿಳಾಸವನ್ನು ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್ರೊಂದಿಗೆ ನೊಂದಾಯಿಸಿಕೊಂಡಿರುವ ಷೇರುದಾರರಿಗೆ, ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿದೆ. ಈ ಮೇಲ್ಕಂಡ ದಾಖಲಾತಿಗಳು ಕಂಪನಿಯ ಅಂತರ್ಜಾಲ ವಿಳಾಸ www.chamundeswarisugars.in ನಲ್ಲೂ ಲಭ್ಯವಿರುತ್ತದೆ.

ವಿದ್ಯುನ್ಮಾನ ಮತಚಲಾವಣೆ (e-voting) ಹಾಗೂ ವಾರ್ಷಿಕ ಮಹಾಸಭೆಯಲ್ಲಿ ವಿದ್ಯುನ್ಮಾನ ಮತಚಲಾವಣೆ (e-voting) ಬಗ್ಗೆ ಮಾರ್ಗಸೂಚಿ:

ವಾರ್ಷಿಕ ಮಹಾಸಭೆಯಲ್ಲಿ ಅಂಗೀಕರಿಸಬೇಕಾದ ವಿಷಯಗಳ ಮೇಲೆ ವಿದ್ಯುನ್ಮಾನದ ಮೂಲಕ ಮತಚಲಾಯಿಸುವ (e-voting) ಅವಕಾಶವನ್ನು ಕಲ್ಪಿಸಲಾಗಿದ್ದು ಸದಸ್ಯರುಗಳು ಎನ್.ಎಸ್.ಡಿ.ಎಲ್‌ನ ವಿದ್ಯುನ್ಮಾನ ಮತಚಲಾವಣೆ (ರಿಮೋಟ್ ಇ–ಮತಚಲಾವಣೆ) ವ್ಯವಸ್ಥೆಯನ್ನು ಈ ಕೆಳಗೆ ನಮೂದಿಸಿರುವ ದಿನಾಂಕಗಳಿಂದ ಚಲಾಯಿಸಬಹುದಾಗಿರುತ್ತದೆ.

ಇದಲ್ಲದೆ ದೂರ ಸಂವೇದಿ ಮುಖಾಂತರ ಮತಚಲಾಯಿಸದೇ ಇರುವ ಸದಸ್ಯರು ವಾರ್ಷಿಕ ಮಹಾಸಭೆಯ ವೇಳೆಯಲ್ಲಿ (ರಿಮೋಟ್ ಇ–ಮತಚಲಾವಣೆ) http://www.evoting.nsdl.com ಮೂಲಕ ಮತ ಚಲಾಯಿಸಬಹುದಾಗಿರುತ್ತದೆ.

ಎನ್.ಎಸ್.ಡಿ.ಎಲ್. ಇವರನ್ನು ವಿದ್ಯುನ್ಮಾನ ಮತಚಲಾವಣೆಗಾಗಿ ನೇಮಿಸಲಾಗಿದೆ.

ಮತಚಲಾವಣೆ ಕುರಿತಂತೆ ಮಾಹಿತಿ ಮತ್ತು ಮಾರ್ಗಸೂಚಿಗಳನ್ನು ಇ–ಅಂಚೆಯ ಮೂಲಕ ಈಗಾಗಲೇ ಕಳುಹಿಸಿದ್ದು ಇದರಲ್ಲಿ ಯೂಸರ್ ಐಡಿ ಮತ್ತು ಪಾಸ್ವರ್ಡ್ ಅನ್ನು ನೀಡಲಾಗಿದೆ. ದೂರವೇದಿ / ಶ್ರಾವ್ಯ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಇದೇ ದಾಖಲೆಗಳನ್ನು ಉಪಯೋಗಿಸತಕ್ಕದ್ದು.

ಇ–ಮೇಲ್ ವಿಳಾಸವನ್ನು ನೀಡದೆ ಇರುವ ದೂರ ಸಂಪರ್ಕ ಇ–ಮತಚಲಾವಣೆ, (e-voting) ಡಿ–ಮ್ಯಾಟ್ ರೂಪದಲ್ಲಿ, ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳಿಗೆ ವಿದ್ಯುನ್ಮಾನ ಮತಚಲಾವಣೆ ಮೂಲಕ, ಮಹಾಸಭೆಯ ಸಮಯದಲ್ಲಿ ಮತ ಚಲಾವಣೆ ಮಾಡುವ ಬಗ್ಗೆ ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ವಿವರಗಳನ್ನು ನೀಡಲಾಗಿದ್ದು ಇದೇ ವಿವರಗಳನ್ನು ಅಂತರ್ಜಾಲ ವಿಳಾಸ www.chamundeswarisugars.in ಹಾಗೂ ಎನ್.ಎಸ್.ಡಿ.ಎಲ್.ವಿಳಾಸ http://www.evoting.nsdl.com ರಲ್ಲಿ ಪಡೆಯಬಹುದಾಗಿರುತ್ತದೆ.

ಇ– ವಿದ್ಯುನ್ಮಾನ ಮತಚಲಾವಣೆ (e-voting) ವ್ಯವಸ್ಥೆಯು ಈ ಕೆಳಕಂಡಂತೆ ಇರುತ್ತದೆ.

ವಿದ್ಯುನ್ಮಾನ ಮತಚಲಾವಣೆಯ ಪ್ರಾರಂಭ	ಶನಿವಾರ ದಿನಾಂಕ 25.09.2021 ಬೆಳಿಗ್ಗೆ 9:00 ಘಂಟೆಯಿಂದ
ವಿದ್ಯುನ್ಮಾನ ಮತಚಲಾವಣೆಯು ಅಂತ್ಯಗೊಳ್ಳುವ ಸಮಯ:	ಮಂಗಳವಾರ ದಿನಾಂಕ 28.09.2021 ಸಂಜೆ 5:00 ಘಂಟೆಯವರೆಗೆ

ಈ ಮೇಲ್ಕಂಡ ಮತಚಲಾವಣೆ ಮತ ದಿನಾಂಕ ಹಾಗೂ ಸಮಯಗಳ ನಂತರ ವಿದ್ಯುನ್ಮಾನ ಮತಚಲಾವಣೆ (e-voting) ಮಾಡಲು ಅವಕಾಶವಿರುವುದಿಲ್ಲ ಹಾಗೂ ಎನ್.ಎಸ್.ಡಿ.ಎಲ್ ಈ ವ್ಯವಸ್ಥೆಯನ್ನು ಆ ಸಮಯದ ನಂತರ ಸ್ಥಗಿತಗೊಳಿಸುತ್ತದೆ.

ದಿನಾಂಕ 21.09.2021 ರ ಮಂಗಳವಾರದ ಒಳಗೆ ಸದಸ್ಯರುಗಳ ನೊಂದಣಿ ಪುಸ್ತಕ ಅಥವಾ ಫಲಾನುಭವಿಯಾಗಿರುವ ವಾರಸುದಾರರ ಪುಸ್ತಕದಲ್ಲಿ ನೊಂದಣಿಯಾಗಿರುವವರು ಮತ್ತು ದೂರವೇದಿ ವಿದ್ಯುನ್ಮಾನ ಮತಚಲಾವಣೆ, ವಾರ್ಷಿಕ ಮಹಾಸಭೆಯಲ್ಲಿದ್ದಾಗ http://www.evoting.nsdl.com ಮುಖಾಂತರ ಮತಚಲಾಯಿಸಬಹುದಾಗಿರುತ್ತದೆ.

ಇ–ಮೇಲ್ ವಿಳಾಸ ನೊಂದಣಿ/ ಆಧುನೀಕರಣ ಮಾಡುವ ವಿಧಾನ

1. ಡಿ–ಮ್ಯಾಟ್ ರೂಪದಲ್ಲಿ ಷೇರನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸವನ್ನು ನೊಂದಣಿಮಾಡದೆ ಅಥವಾ ಆಧುನಿಕರಣ ಮಾಡಿಸದೆ ಇದ್ದ ಪಕ್ಷದಲ್ಲಿ ಕೊಂಡಿ (ಲಿಂಕ್) https://www/integratedindia.in/emailupdation.aspx ಮೂಲಕ ಮಾಡಬಹುದಾಗಿದೆ.
2. ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ರವಾನಿಸಿದ ನಂತರ ಷೇರುದಾರರಾಗಿದ್ದು ಕಟ್–ಆಫ್ ದಿನಾಂಕ ದೊಳಗೆ ಷೇರನ್ನು ಹೊಂದಿದ್ದ ಪಕ್ಷದಲ್ಲಿ ಯುಸರ್ ಐಡಿ ಪಾಸ್ವರ್ಡ್ ಅನ್ನು ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ತಿಳಿಸಿರುವಂತೆ ಕಂಪನಿಯು ಅಂತರ್ಜಾಲ ವಿಳಾಸ ಹಾಗೂ NSDL ವಿಳಾಸ http://www.evoting.nsdl.com ದಲ್ಲಿ ಪಡೆಯಬಹುದಾಗಿದೆ.
3. ಅಂತಹ ಸದಸ್ಯರು ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ನೀಡಿರುವ ವಿದ್ಯುನ್ಮಾನ ಮತಚಲಾವಣೆ ಮಾರ್ಗಸೂಚಿಗಳನ್ವಯ ಮತ ಚಲಾಯಿಸಬಹುದು.

ದೂರವೇದಿ ವಿದ್ಯುನ್ಮಾನಗಳ ಮೂಲಕ ಮತಚಲಾಯಿಸಿರುವ ಸದಸ್ಯ(ರು) ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬಹುದು. ಆದರೆ ಮತ್ತೆ ಮಹಾಸಭೆಯಲ್ಲಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ವಿದ್ಯುನ್ಮಾನ ಮತ ಚಲಾವಣೆಯ (e-voting) ವಿಷಯದಲ್ಲಿ ಅನುಮಾನಗಳೇನಾದರು ಇದ್ದರೆ ಸದಸ್ಯರುಗಳು, ಪದೇ ಪದೇ ಕೇಳಲಾಗುವ ಪ್ರಶ್ನೆಗಳ ವಿಭಾಗ – http://www.evoting.nsdl.com ವಿದ್ಯುನ್ಮಾನ ಮತಚಲಾವಣೆ (e-voting) ಇದರ ಸಹಾಯ ವಿಭಾಗದಿಂದ ಅಥವಾ helpdesk.evoting@nsdl.in ನಿಂದ ಪಡೆಯಬಹುದು.

ವಿದ್ಯುನ್ಮಾನ ವಿಧಾನದಿಂದ ಮತಚಲಾಯಿಸುವ ಬಗ್ಗೆ ಏನಾದರು ಕುಂದು ಕೊರತೆ ಅಥವಾ ಪ್ರಶ್ನೆಗಳಿದ್ದರೆ ಅಂತಹ ಸದಸ್ಯರು M/s Integrated Registry Management Services Private Limited ಇವರನ್ನು ಇ–ಮೇಲ್ ಐಡಿ giri@integratedindia.in ಮೂಲಕ ಸಂಪರ್ಕಿಸಬಹುದು.

ಮಂಡಳಿಯ ಆದೇಶದ ಮೇರೆಗೆ
ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿ. ಪರವಾಗಿ
ಸಹಿ/–
ಎಂ. ಶ್ರೀನಿವಾಸನ್
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : 06ನೇ ಸೆಪ್ಟೆಂಬರ್ 2021

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Walk-in

Surabhi Chits Ltd., (Govt. Licensed Company)
We are one of the leading chit company having 10 branches in Bangalore City. Requires the following personnel to its Malleshwaram Branch.
1. Marketing Executive
2. Collection Executive
3. Accounts Executive
Walk-in-Interview on 08.09.2021 and 09.09.2021 From 11AM TO 2PM
E-mail: malleswaramsurabhi@gmail.com
40, 1st Floor, Sai Spandana Sirur Park Road, Malleshwaram, Bangalore-560003.
9448553467/7349213380

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Date : 3rd Sept to 12th Sept 2021 | Timings : 11:00 AM - 07:00 PM
Venue: Karnataka Chitrakala Parishath, Kumara Krupa Road, Bengaluru - 01
Your safety is our Priority, we have taken Precaution & Safety Measures to prevent the transmission of Covid-19
RAJASTHANI FOLK SUFI MUSIC PERFORMANCE

06TH | 07TH | 08TH | 09TH & 10TH SEPT 2021 - TIMINGS 04 PM - 07 PM

CHARI DANCE SHOW LIVE 11TH SEPT | 5 PM - 7 PM

KALBELIYA DANCE SHOW LIVE 12TH SEPT | 5 PM - 7 PM

80+ Shopping Stalls | Daily Rajasthani Folk Performance | & Much More | Entry Free

PERSONAL

Change of Name

ANTHONI SAMY D, 6493650W, HAV/MT, Door.No.20/458, SOUTH KALAM, Vill- MUTHAPUDAIYANPATTI, KANNUDAYANPATTI, MANAPPARI, TIRUCHIRAPPALLI, TAMIL NADU, have changed my Son's name from REBIYAN JOSEWA to REBIYAN JOSHUA ANTHONISAMY, 04/09/2021, Notary K.V.Mani, Bangalore

I, JC-770422P, SUBEDAR SHIV MANGAL RAI Residing at Flat-001, #34, BM Bhavisha, Trinity Complex, Sompura Gate, Sarjapura Road, Bangalore- 562125 have Changed My Son's Name From KUNAL to KUNAL RAI vide Affidavit Dated: 04.09.2021 Sworn Before Notary Roopa G.Bhandare, Bangalore.

ASARAFA DEVI M/o 14815760X- HAV- SANJAY KUMAR RAI R/a Nasaratpur, Parsa, Ghazipur, Uttar Pradesh changed name from ASARAFA DEVI to ASHRAFI notary KV Mani Bangalore.

ARATHI PAULIN MERY, W/o, 6493650W, HAV/MT, ANTHONI SAMY D, Door.No.20/458, SOUTH KALAM, Vill- MUTHAPUDAIYANPATTI, KANNUDAYANPATTI, MANAPPARI, TIRUCHIRAPPALLI, TAMIL NADU, have changed my name from ARATHI PAULIN MERY to ARATHI PAULIN MARY ANTHONISAMY, 04/09/2021, Notary K.V.Mani, Bangalore

LATHA W/O. JC681474W, EX-SUB/HONY/LT Kamble Satappa Dadu, vill; Metke Hamindwada Kagal Kolhapur, Maharashtra, my name LATHA to LATA SATAPPA KAMBLE notary K.V.MANI, Bangalore.

I, VISWANATHA REDDY CHALLAM, aged about 49 years, son of late Aswartha Reddy C, residing at Flat No. 301, Pragathi Residency, No. 24 2nd Cross, Amruthahalli, Bangalore 560092, have changed my daughter's name from C. VAINAVI to VAINAVI REDDY CHALLAM, vide Affidavit dated 04/09/2021, sworn before KUNDAN BABU M, Notary, Bangalore.

I, SHANKARA R r/at. #2025, 10th cross, Bhuvaneshwari Nagara, Doddaballapur, Bengaluru Rural- 561203 Karnataka, Have changed my name from Shankar. R to SHANKARA. R vide affidavit dated 05/09/2021 before notary Prakasha. C, Doddaballapura

P NAGESWARA RAO, 14824773W, HAV/MT, Vill- KATTAKRINDIPALLI, GUDIPATIPALLI, KANIGIRI, PRAKASAM, ANDHRA PRADESH, have changed my Daughter's name from PAPABATHINI REENU to PAPABATHINI RIDHA, 04/09/2021, Notary K.V.Mani, Bangalore

KANCHAN W/O 14815760X- HAV- SANJAY KUMAR RAI R/a Nasaratpur, Parsa, Ghazipur, Uttar Pradesh changed name from KANCHAN to KANCHAN RAI notary KV Mani Bangalore.

DANGE MAHESH SOMNATH, 14848581X, HAV/CLK (SD), Vill- ANDUR, TULJAPUR, OSMANABAD, MAHARASHTRA, have changed my Son's name from RUDRANSH to RUDRANSH MAHESH DANGE, 04/09/2021, Notary K.V. Mani, Bangalore

BUSINESS

Business to Business

Finance

AISHWARYA GROUP (Bengaluru) Invest Min.20K to 5-Lakhs in Trading, Multiple Businesses. Weekly/ Monthly-10% Secured Fixed Returns. Investors, Referral Welcome.Good Regular Income. Phone:-7892818780.

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ನಗರದ ಹನುಮಂತನಗರದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳು ರಂಗೋಲಿ ಹಾಕಿದರು (ಎಡ ಚಿತ್ರ), ನಗರದ ಟಸ್ಕರ್ ಟೌನ್‌ನಲ್ಲಿ ಬಿಬಿಎಂಪಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ದೇಹದ ಉಷ್ಣಾಂಶ ಪರೀಕ್ಷಿಸಲಾಯಿತು ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ಶೇ 30ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಹಾಜರು, ತಳಿರು–ತೋರಣದಿಂದ ಕಂಗೊಳಿಸಿದ ಶಾಲಾ ಆವರಣ

ಶಾಲೆಗಳಲ್ಲಿ ಮತ್ತೆ ಮಕ್ಕಳ ಕಲರವ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಾಲೆಗಳ ಆವರಣಗಳು ತಳಿರು–ತೋರಣ, ರಂಗೋಲಿಯಿಂದ ಕಂಗೊಳಿಸಿದವು. ಒಂದೂವರೆ ವರ್ಷಗಳ ನಂತರ ಶಾಲೆಗಳಲ್ಲಿ ಮಕ್ಕಳ ಕಲರವ ಕೇಳಿ ಬಂತು. ಈ ಶೈಕ್ಷಣಿಕ ವರ್ಷದಲ್ಲಿ 6,7 ಮತ್ತು 8ನೇ ತರಗತಿಯ ಮಕ್ಕಳು ಶಾಲೆಗೆ ಹಾಜರಾದರು.

'ಗೆಳೆಯರ ಜತೆಯಲ್ಲಿ ಕುಣಿಕುಣಿದು, ಬೆಳೆಯುವ ಸೊಗಸಿನ ಕಾಲವಿದು' ಎನ್ನುವ ಸಡಗರದಲ್ಲಿ ವಿದ್ಯಾರ್ಥಿಗಳು ಶಾಲೆಯತ್ತ ಹೆಜ್ಜೆ ಹಾಕಿದರು. ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡರೆ ಹೇಗೋ, ಏನೋ ಎಂಬ ಆತಂಕದಲ್ಲಿಯೇ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಿದರು.

ನಗರದ ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇತ್ತು. ಖಾಸಗಿ ಶಾಲೆಗಳ ಅನೇಕ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿಯೇ ತರಗತಿ ಹಾಜರಾದರು.

ಹೂವು ನೀಡಿ ಸ್ವಾಗತ: ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹೂ, ಸಿಹಿ ನೀಡಿ ಬರ ಮಾಡಿಕೊಳ್ಳುವ ದೃಶ್ಯ ಕಂಡು ಬಂತು. ವಿದ್ಯಾರ್ಥಿನಿಯರು ಶಾಲೆಯ ಆವರಣವನ್ನು ರಂಗೋಲಿಯಿಂದ ಚೆಂದಗೊಳಿಸಿದ್ದರು. ಮೊದಲ ದಿನ ಪುನಶ್ಚೇತನ ಬೋಧನೆಗೆ ಆದ್ಯತೆ ನೀಡಲಾಗಿತ್ತು. ಬೆಳಿಗ್ಗೆ 9.30ರಿಂದ 1.30ರವರೆಗೆ ಮಾತ್ರ ತರಗತಿಗಳು ನಡೆದವು.

ಸುರಕ್ಷತೆಗೆ ಆದ್ಯತೆ: ಶಾಲೆಗಳನ್ನು ಸ್ಯಾನಿಟೈಸ್ ಮಾಡಲಾಗಿತ್ತು. ಪರಸ್ಪರ ಅಂತರ ಸಾಧ್ಯವಾಗುವಂತೆ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಶಾಲೆಗೆ ಬಂದ ವಿದ್ಯಾರ್ಥಿಗಳ ದೇಹದ ತಾಪಮಾನ ಪರೀಕ್ಷಿಸಿ, ತರಗತಿಗೆ ಕಳಿಸಲಾಯಿತು. ಪೋಷಕರು ಅನುಮತಿ ಪತ್ರ ತರುವುದನ್ನು ಕಡ್ಡಾಯಗೊಳಿಸಲಾಗಿತ್ತು.

'ವಿದ್ಯಾರ್ಥಿಗಳ ಸುರಕ್ಷತೆಗೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪೋಷಕರು ಯಾವುದೇ ಆತಂಕವಿಲ್ಲದೆ ಮಕ್ಕಳನ್ನು ಶಾಲೆಗೆ ಕಳಿಸಿಕೊಡಬೇಕು. ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ' ಎಂದು ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕಿಯೊಬ್ಬರು ಹೇಳಿದರು.

'ಶಿಕ್ಷಕರಿಗೆ ಕೋವಿಡ್ ಲಸಿಕೆಯನ್ನು ಹಾಕಿಸಲಾಗಿದೆ. ಮಕ್ಕಳಿಗೆ ಮನೆಯಿಂದಲೇ ಬಿಸಿ ನೀರು ತರಲು ಹೇಳಲಾಗಿದೆ. ಮಾಸ್ಕ್ ಧರಿಸುವಂತೆ, ಅಂತರ ಕಾಪಾಡುವಂತೆ ಮಕ್ಕಳಿಗೆ ತಿಳಿ ಹೇಳಲಾಗುವುದು. ಇಲಾಖೆ ನೀಡಿರುವ ಪಠ್ಯ ಪುಸ್ತಕ ನೀಡುತ್ತಿದ್ದೇವೆ. ಮತ್ತೆ ಭೌತಿಕ ತರಗತಿಗಳು ನಡೆಯುತ್ತಿರುವುದಕ್ಕೆ ಶಿಕ್ಷಕ ವರ್ಗ ಮತ್ತು ಮಕ್ಕಳು ಸಂತಸ ವ್ಯಕ್ತಪಡಿಸಿದ್ದಾರೆ' ಎಂದು ಶಿಕ್ಷಕಿ ಜಯಶ್ರೀ ಹೇಳಿದರು.

ಶಿಕ್ಷಕರ ದಿನ ಆಚರಣೆ: ಸೆ.5ರಂದು ರಜೆ ಇದ್ದುದರಿಂದ, ಸೋಮವಾರವೇ ಶಾಲೆಗಳಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ವಿದ್ಯಾರ್ಥಿಗಳು ಶಿಕ್ಷಕರಿಗೆ ಹೂವು ನೀಡಿ ಶುಭ ಕೋರಿದರು. ಗುರುಗಳ ಆಶೀರ್ವಾದ ಪಡೆದರು.

'ಬಿಸಿಯೂಟ ವ್ಯವಸ್ಥೆ ಮಾಡಿ'

'ಸರ್ಕಾರಿ ಶಾಲೆಗಳು ಪುನರಾರಂಭವಾಗಿದ್ದು, ಮಧ್ಯಾಹ್ನ ಬಿಸಿಯೂಟಕ್ಕೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ' ಎಂದು ಪೋಷಕರು ಮನವಿ ಮಾಡಿದರು.

'6,7 ಮತ್ತು 8ನೇ ತರಗತಿಗಳು ಪುನರಾರಂಭವಾಗಿರುವುದು ಸಂತಸ ತಂದಿದೆ. ಆದರೆ, ಬೆಳಗಿನ ಅವಧಿಯವರೆಗೆ ಮಾತ್ರ ತರಗತಿಗಳನ್ನು ನಡೆಸಲಾಗುತ್ತಿದೆ. ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ನೀಡುವುದು, ಕೋವಿಡ್ ಕಾರಣದಿಂದ ಸುರಕ್ಷಿತವಲ್ಲ ಎಂದು ಹೇಳುತ್ತಿದ್ದಾರೆ. ಬಿಸಿಯೂಟ ಕಾರ್ಯಕ್ರಮವನ್ನು ಪುನರಾರಂಭಿಸಬೇಕು. ಪೊಟ್ಟಣಗಳಲ್ಲಿಯಾದರೂ ಆಹಾರ ವಿತರಿಸಲು ಆರಂಭಿಸಿದರೆ ಅನುಕೂಲವಾಗುತ್ತದೆ' ಎಂದು ಪೋಷಕರೊಬ್ಬರು ಕೋರಿದರು.

'ಶಾಲಾ ಆವರಣದಲ್ಲಿ ವಿದ್ಯುತ್ ಮಾರ್ಗ ತೆರವು ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಆವರಣದಲ್ಲಿ ಹಾದು ಹೋಗಿರುವ ಎಲ್ಲಾ ವಿದ್ಯುತ್ ಮಾರ್ಗಗಳನ್ನು ಬದಲಿಸುವಂತೆ ರಾಜ್ಯ ಸರ್ಕಾರ ಮತ್ತು ಕೆಪಿಟಿಸಿಎಲ್‌ಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ತುಮಕೂರು ಜಿಲ್ಲೆಯಲ್ಲಿ ಆ.15ರಂದು ಧ್ವಜಾರೋಹಣ ಸಂದರ್ಭದಲ್ಲಿ ವಿದ್ಯುತ್ ತಗುಲಿ ಬಾಲಕ ಮೃತಪಟ್ಟ ಪ್ರಕರಣದ ಸ್ವಯಂ ಪ್ರೇರಿತ ವಿಚಾರಣೆ ನಡೆಸುತ್ತಿರುವ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

ಕೊಪ್ಪಳ ಜಿಲ್ಲೆಯ ಹಾಸ್ಟೆಲ್‌ನಲ್ಲಿ 2019ರಲ್ಲಿ ಧ್ವಜ ಹಾರಿಸುವ ವೇಳೆ ಧ್ವಜ ಕಂಬದ ಮೂಲಕ ವಿದ್ಯುತ್ ಹಾದು ಐವರು ವಿದ್ಯಾರ್ಥಿಗಳು ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ಪೀಠ, 2021ರ ಆಗಸ್ಟ್ 15ರಂದು ತುಮಕೂರು ಜಿಲ್ಲೆಯ ಕರಿಕೆರೆ ಶಾಲೆಯಲ್ಲಿ ಧ್ವಜಾರೋಹಣ ವೇಳೆ ವಿದ್ಯುತ್ ಸ್ಪರ್ಶಿಸಿ 16 ವರ್ಷದ ಬಾಲಕ ಚಂದನ್ ಮೃತಪಟ್ಟ ಪ್ರಕರಣವನ್ನೂ ವಿಚಾರಣೆಗೆ ಕೈಗೆತ್ತಿಕೊಂಡಿದೆ.

'ವಿದ್ಯಾರ್ಥಿಗಳೇ ಸ್ವಯಂ ಪ್ರೇರಣೆಯಿಂದ ಧ್ವಜಾರೋಹಣಕ್ಕೆ ಮುಂದಾಗಿದ್ದರು ಎಂದು ತುಮಕೂರು ಜಿಲ್ಲಾಧಿಕಾರಿ ವರದಿ ನೀಡಿದ್ದಾರೆ. ಆದರೆ, ಇದನ್ನು ಒಪ್ಪಲಾಗದು. ಸಾಮಾನ್ಯವಾಗಿ ಶಿಕ್ಷಕರ ಸೂಚನೆಯಂತೆ ವಿದ್ಯಾರ್ಥಿಗಳು ಈ ಕಾರ್ಯಕ್ಕೆ ಮುಂದಾಗುತ್ತಾರೆ. ಜಿಲ್ಲಾಧಿಕಾರಿ ವರದಿ ಗಮನಿಸಿದರೆ ಅವರು ಶಾಲಾ ಸಿಬ್ಬಂದಿಯ ಪರವಾಗಿ ನಿಂತು ಪ್ರಕರಣ ತಿರುಚಲು ಪ್ರಯತ್ನಿಸುತ್ತಿರುವಂತಿದೆ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

'ಶಾಲಾ ಆವರಣದಲ್ಲಿ ವಿದ್ಯುತ್ ಮಾರ್ಗಗಳು ಹಾದು ಹೋಗಬಾರದು. ಒಂದು ವೇಳೆ ಈ ರೀತಿಯ ಮಾರ್ಗಗಳಿದ್ದರೆ, ಕೂಡಲೇ ಬದಲಾವಣೆ ಮಾಡಬೇಕು' ಎಂದು ತಿಳಿಸಿದ ಪೀಠ, ಕೆಪಿಟಿಸಿಎಲ್‌ಗೆ ನೋಟಿಸ್ ನೀಡಲು ಆದೇಶಿಸಿತು.

'ಮೃತ ಬಾಲಕ ಚಂದನ್ ಕುಟುಂಬಕ್ಕೆ ₹1 ಲಕ್ಷ ಮಾತ್ರ ಪರಿಹಾರ ನೀಡಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ನೀಡಿದ ಮಾದರಿಯಲ್ಲೇ ₹10 ಲಕ್ಷ ಪರಿಹಾರ ನೀಡಬೇಕು. ಗಾಯಗೊಂಡ ಬಾಲಕನಿಗೂ ಪರಿಹಾರ ನೀಡಬೇಕು' ಎಂದು ಪೀಠ ನಿರ್ದೇಶನ ನೀಡಿತು.

ಲಸಿಕೆ ಪಡೆದ ನಂತರ ಮಗ ಸಾವು: ಪೋಷಕರ ಆರೋಪ

ಬಾಣಾವರ: ಕೋವಿಡ್ ಲಸಿಕೆ ಪಡೆದ ಬಳಿಕ ತಮ್ಮ ಮಗ ವಸಂತ ನಾಯಕ್ (35) ಮೃತಪಟ್ಟಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ.

ಸಮೀಪದ ಬೋರನಕೊಪ್ಪಲು ಗ್ರಾಮದ ವಸಂತ ಸೆ. 4 ರಂದು ಬೆಂಗಳೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್-19 ಲಸಿಕೆ ಪಡೆದು ಗ್ರಾಮಕ್ಕೆ ಮರಳಿದ್ದರು ಸೋಮವಾರ ಅಸ್ವಸ್ಥಗೊಂಡಿದ್ದ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಹಿಮ್ಸ್ ಆಸ್ಪತ್ರೆಗೆ ದಾಖಲಿಸುವ ವೇಳೆ ಮೃತಪಟ್ಟರು.

'ಮಗನ ಸಾವಿಗೆ ಕೋವಿಡ್-19 ಲಸಿಕೆ ಕಾರಣ. ಯಾವುದೇ ಕಾಯಿಲೆಗಳಿರಲಿಲ್ಲ. ಆ ಬಗ್ಗೆ ತನಿಖೆಯಾಗಬೇಕು ಹಾಗೂ ಪರಿಹಾರ ನೀಡಬೇಕು' ಎಂದು ಪೋಷಕರು ಒತ್ತಾಯಿಸಿದ್ದಾರೆ.

'ಲಸಿಕೆಗೂ ಸಾವಿಗೂ ಯಾವುದೇ ಸಂಬಂಧವಿಲ್ಲ. ಮರಣೋತ್ತರ ಪರೀಕ್ಷೆಯ ನಂತರ ಕಾರಣ ತಿಳಿಯಲಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ವ್ಯಾಕ್ಸಿನ್ ಪಡೆದು ಗ್ರಾಮಕ್ಕೆ ಬಂದಿದ್ದಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ. ಎಂ.ಸತೀಶ್ ತಿಳಿಸಿದ್ದಾರೆ.

ದಾಸನಪುರ ಎ.ಪಿ.ಎಂ.ಸಿ. ವರ್ತಕರ ಪ್ರತಿಭಟನೆ

ಹೆಸರಘಟ್ಟ: 'ಎಪಿಎಂಸಿ ಅಧಿಕಾರಿಗಳು ವಾರಕ್ಕೊಂದು ಆದೇಶವನ್ನು ಜಾರಿ ಮಾಡುತ್ತಿದ್ದಾರೆ' ಎಂದು ದೂರಿ ದಾಸನಪುರ ಎ.ಪಿ.ಎಂ.ಸಿ ವರ್ತಕರ ಸಂಘವು ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿತು.

'ದಾಸನಪುರ ಉಪ ಮಾರುಕಟ್ಟೆಯಲ್ಲಿ ಮಳಿಗೆಯನ್ನು ಪಡೆದಿರುವ ವರ್ತಕರಿಗೆ ಯಶವಂತಪುರ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡುವುದಿಲ್ಲ ಹಾಗೂ ಎರಡು ಕಡೆ ಮಳಿಗೆಯನ್ನು ಪಡೆದವರ ಪರವಾನಗಿಯನ್ನು ರದ್ದು ಪಡಿಸಲಾಗುವುದು ಎಂದು ಆ. 19 ರಂದು ಆದೇಶವನ್ನು ಹೊರಡಿಸಿತ್ತು. ಆದರೆ ಈಗ ಅದನ್ನು ರದ್ದುಪಡಿಸಿ ದಾಸನಪುರ ಉಪ ಮಾರು ಕಟ್ಟೆಯಲ್ಲಿ ಮಳಿಗೆ ಪಡೆದು ಯಶವಂತ ಪುರ ಎ.ಪಿ.ಎಂ.ಸಿ.ಯಲ್ಲಿ ಮಳಿಗೆ ಪಡೆದ ವರಿಗೆ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿ ಕೊಟ್ಟಿದೆ. ಅಧಿಕಾರಿಗಳು ತಾವೇ ಹೊರಡಿಸಿದ ಆದೇಶವನ್ನು 15 ದಿನಗಳಲ್ಲಿಯೇ ವಾಪಸ್ ತೆಗೆದುಕೊಂಡಿದ್ದಾರೆ' ಎಂದು ದಾಸನಪುರ ವರ್ತಕರ ಸಂಘದ ಅಧ್ಯಕ್ಷ ಶ್ರೀರಾಮ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು. 'ಸರ್ಕಾರವು ₹300ಕೋಟಿಯಷ್ಟು ವೆಚ್ಚ ಮಾಡಿ ದಾಸನಪುರ ಎ.ಪಿ.ಎಂ.ಸಿ.ಯನ್ನು ಮಾಡಿದೆ. ಆದರೆ ವ್ಯಾಪಾರ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ' ಎಂದು ವರ್ತಕರ ಸಂಘದ ಪ್ರಸನ್ನ ಕುಮಾರ್ ಹೇಳಿದರು.

ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ಮತ್ತೆ ಏರಿದೆ. ಸೋಂಕಿತರ ಪೈಕಿ ಸೋಮವಾರ 17 ಮಂದಿ ಅಸುನೀಗಿದ್ದಾರೆ. ಮರಣ ಪ್ರಮಾಣ ದರವು ಶೇ 1.74ಕ್ಕೆ ಹೆಚ್ಚಿದೆ.

ಹಿಂದಿನ 24 ಗಂಟೆಗಳಲ್ಲಿ 973 ಮಂದಿಗೆ ಸೋಂಕು ತಗುಲಿದೆ. ಕೋವಿಡ್ ಪೀಡಿತರ ಒಟ್ಟು ಸಂಖ್ಯೆಯು 29.56 ಲಕ್ಷಕ್ಕೆ ಹಿಗ್ಗಿದೆ. ಸೋಂಕು ದೃಢ ಪ್ರಮಾಣವು ಶೇ 0.69ರಷ್ಟಿದೆ.

ಸೋಮವಾರ 1,071 ಜನರಿಗೆ ಕಾಯಿಲೆ ವಾಸಿಯಾಗಿದ್ದು ಗುಣಮುಖರ ಒಟ್ಟು ಸಂಖ್ಯೆ 29.01 ಲಕ್ಷಕ್ಕೆ ಏರಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿದಿವೆ. ಸದ್ಯ 17,386 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಹೊಸದಾಗಿ 243 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಕೇರಳಕ್ಕೆ ಹೊಂದಿಕೊಂಡಂತಿರುವ ಗಡಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡ (258) ಹಾಗೂ ಮೈಸೂರಿನಲ್ಲಿ (78) ಹೊಸ ಪ್ರಕರಣಗಳು ಏರಿವೆ. ಕೊಡಗು ಜಿಲ್ಲೆಯಲ್ಲಿ (52) ಸೋಂಕಿತರ ಸಂಖ್ಯೆ ತುಸು ಇಳಿಕೆ ಕಂಡಿದೆ. ಉಡುಪಿಯಲ್ಲೂ (53) ಐವತ್ತಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾಗಿವೆ.

ಬಾಗಲಕೋಟೆ, ಗದಗ, ಹಾವೇರಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ದಾಖಲಾಗಿಲ್ಲ. 11 ಜಿಲ್ಲೆಗಳಲ್ಲಿ ಪ್ರಕರಣಗಳು ಒಂದಂಕಿಯಷ್ಟಿವೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 8 ಮಂದಿ ಸಾವಿಗೀಡಾಗಿದ್ದಾರೆ. ದಕ್ಷಿಣ ಕನ್ನಡ ಹಾಗೂ ಹಾವೇರಿಯಲ್ಲಿ ತಲಾ ಇಬ್ಬರು ಮೃತರಾಗಿದ್ದಾರೆ. ಬಾಗಲಕೋಟೆ, ಹಾಸನ, ತುಮಕೂರು, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಒಬ್ಬರು ಅಸುನೀಗಿದ್ದಾರೆ. ರಾಜ್ಯದಲ್ಲಿ ಈವರೆಗೆ ಮೃತರಾದವರ ಸಂಖ್ಯೆ 37,426ಕ್ಕೆ ಹೆಚ್ಚಿದೆ.

ಕೋವಿಡ್ ಪರೀಕ್ಷೆ ಇಳಿಮುಖವಾಗಿದ್ದು ಒಂದು ದಿನದಲ್ಲಿ 1.39 ಲಕ್ಷ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

12,39,724 ▲ ಒಟ್ಟು ಪ್ರಕರಣಗಳು
7,180 ▼ ಸಕ್ರಿಯ ಪ್ರಕರಣಗಳು
12,16,511 ▲ ಗುಣಮುಖರಾದವರು
16,032 ▲ ಒಟ್ಟು ಸಾವು

ದಿನದ ಏರಿಕೆ
ಹೊಸ ಪ್ರಕರಣ 243 ▼
ಗುಣಮುಖ 260 ▼
ಸಾವು 8 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

29,56,137 ▲ ಒಟ್ಟು ಸೋಂಕಿತರು (29,55,164 ನಿನ್ನೆಯ ವಿವರ)
17,386 ▼ ಸಕ್ರಿಯ ಪ್ರಕರಣಗಳು
29,01,299 ▲ ಗುಣಮುಖರಾದವರು
37,426 ▲ ಒಟ್ಟು ಸಾವು

ದಿನದ ಏರಿಕೆ
ಹೊಸ ಪ್ರಕರಣ 973 ▼
ಗುಣಮುಖ 1,071 ▼
ಸಾವು 17 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ನವೆಂಬರ್‌ನೊಳಗೆ ಎಲ್ಲರಿಗೂ ಲಸಿಕೆ: ಸಚಿವ ಸುಧಾಕರ್

ಸುಧಾಕರ್

ಬೆಂಗಳೂರು: ರಾಜ್ಯದ ಎಲ್ಲ ವಯಸ್ಕರಿಗೂ ನವೆಂಬರ್ ಅಂತ್ಯದೊಳಗೆ ಎರಡು ಡೋಸ್ ಕೋವಿಡ್ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೋವಿಡ್ ಲಸಿಕೆ ಅಭಿಯಾನದಲ್ಲಿ ಹಿಂದುಳಿದಿರುವ 23 ಜಿಲ್ಲೆಗಳ ಅಧಿಕಾರಿಗಳ ಜತೆ ಸೋಮವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸೆಪ್ಟೆಂಬರ್ ಅಂತ್ಯದೊಳಗೆ ಎಲ್ಲರಿಗೂ ಮೊದಲ ಡೋಸ್ ಲಸಿಕೆ ನೀಡುವಂತೆ ಸೂಚಿಸಲಾಗಿದೆ. ನವೆಂಬರ್ ಅಂತ್ಯದೊಳಗೆ ಎರಡೂ ಡೋಸ್ ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ' ಎಂದರು.

ಕೋವಿಡ್ ಪರೀಕ್ಷೆ, ಆಮ್ಲಜನಕ ಉತ್ಪಾದನಾ ಘಟಕಗಳ ಆರಂಭ, ಆಸ್ಪತ್ರೆಗಳ ಸಿದ್ಧತೆ ಸೇರಿದಂತೆ ಹಲವು ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಕೋವಿಡ್ ನಿಯಂತ್ರಣದ ಉದ್ದೇಶದಿಂದ ಗಣೇಶೋತ್ಸವಕ್ಕೆ ಬಿಗಿಯಾದ ಷರತ್ತುಗಳನ್ನು ವಿಧಿಸಲಾಗಿದೆ. ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರದ ಸರಾಸರಿ ಶೇಕಡ 0.7ರಷ್ಟಿದೆ. ಯಾವುದೇ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಶೇ 2ಕ್ಕಿಂತ ಹೆಚ್ಚಾದರೆ ಆ ಜಿಲ್ಲೆಗೆ ಪ್ರತ್ಯೇಕವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

ಗಡಿಯಲ್ಲಿ ಕಟ್ಟೆಚ್ಚರ: ಕೇರಳದಲ್ಲಿ ನಿಫಾ ವೈರಸ್ ಸೋಂಕಿನಿಂದ ಬಾಲಕ ಮೃತಪಟ್ಟಿದ್ದಾನೆ. ನಿಫಾ ವೈರಸ್ ಸೋಂಕು ರಾಜ್ಯ ಪ್ರವೇಶಿಸದಂತೆ ತಡೆಯಲು ಗಡಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.18 ಕೋಟಿ ▲	3.30 ಕೋಟಿ ▲
ಸಕ್ರಿಯ ಪ್ರಕರಣ	1.87 ಕೋಟಿ ▼	3.85 ಲಕ್ಷ ▼
ಗುಣಮುಖ	19.84 ಕೋಟಿ ▲	3.22 ಕೋಟಿ ▲
ಸಾವು	45.86 ಲಕ್ಷ ▲	4.41 ಲಕ್ಷ ▲
ದಿನದ ಮಾಹಿತಿ – ಹೊಸ ಪ್ರಕರಣ	4.29 ಲಕ್ಷ ▼	30,116 ▼
ದಿನದ ಮಾಹಿತಿ – ಗುಣಮುಖ	4.37 ಲಕ್ಷ ▼	42,879 ▼
ದಿನದ ಮಾಹಿತಿ – ಸಾವು	6,698 ▼	290 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
35,586 ▼ ಅಮೆರಿಕ
25,780 ▲ ಇರಾನ್
41,463 ▲ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
88.23 ▲ ಅಮೆರಿಕ
12.34 ▲ ಬ್ರಿಟನ್
6.55 ▼ ಇರಾನ್
(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.37 ಲಕ್ಷ ಮಹಾರಾಷ್ಟ್ರ
35,018 ▲ ತಮಿಳುನಾಡು
25,082 ▲ ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
64.89 ಮಹಾರಾಷ್ಟ್ರ ▲
42.07 ಕೇರಳ ▲
26.22 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

13ರಂದು ವಿಧಾನಸೌಧ ಮುತ್ತಿಗೆ: ಕೋಡಿಹಳ್ಳಿ ಚಂದ್ರಶೇಖರ್

ಬೆಂಗಳೂರು: 'ಕೇಂದ್ರದ ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಇದೇ 13ರಂದು ವಿಧಾನಸೌಧ ಮುತ್ತಿಗೆ ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ರೈತ ವಿರೋಧಿ ಕಾಯ್ದೆಗಳನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು ಎಂದು ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದೇವೆ. ಅದಕ್ಕೆ ಅವರಿಂದ ಯಾವ ಪ್ರತಿಕ್ರಿಯೆಯೂ ಬಂದಿಲ್ಲ. ಹೀಗಾಗಿ ವಿಧಾನಸೌಧ ಮುತ್ತಿಗೆಗೆ ಮುಂದಾಗಿದ್ದೇವೆ. 13ರಂದು ಬೆಳಿಗ್ಗೆ 10 ಗಂಟೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಪ್ರತಿಭಟನಾ ಮೆರವಣಿಗೆ ಹೊರಡಲಿದೆ. ರಾಜ್ಯದ ವಿವಿಧ ಭಾಗಗಳ ರೈತರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

'ಮಣ್ಣಿನ ಮಕ್ಕಳು ಎಂದು ಹೇಳುತ್ತಿರುವವರು ಸದನದ ಹೊರಗೆ ಕೃಷಿ ಮಸೂದೆಗಳನ್ನು ವಿರೋಧಿಸುವ ಮಾತುಗಳನ್ನು ಆಡಿದ್ದರು. ಮಸೂದೆ ಜಾರಿಯ ವೇಳೆ ಬಿಜೆಪಿಗೆ ಬೆಂಬಲ ಸೂಚಿಸಿದರು. ಆ ಮೂಲಕ ರೈತರಿಗೆ ವಿಷ ಉಣಿಸುವ ಕೆಲಸ ಮಾಡಿದರು. ಇದನ್ನು ಯಾರೂ ಮರೆಯುವುದಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌. ಡಿ.ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಕುಟುಕಿದರು.

'ಕೃಷಿ ತಿದ್ದುಪಡಿ ವಿಧೇಯಕ ಜಾರಿ ನಂತರ ಶೇ 80ರಷ್ಟು ಎಪಿಎಂಸಿಗಳು ಬಾಗಿಲು ಮುಚ್ಚಿವೆ. ಅವುಗಳಿಂದ ಬರುತ್ತಿದ್ದ ಆದಾಯ ಕೂಡ ಕಡಿಮೆಯಾಗಿದೆ' ಎಂದರು.

'ಚನ್ನಪಟ್ಟಣದವರಿಗೆ ಗೊಲ್ಲಹಳ್ಳಿಯಲ್ಲಿ ಲಸಿಕೆ ಏಕೆ?'

ಕೆಂಗೇರಿ: 'ಚನ್ನಪಟ್ಟಣ ಎಲ್ಲಿದೆ? ಅದು ಗೊಲ್ಲಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿದೆಯೇ' ಎಂಬ ವಿಚಾರ ಕೆ.ಗೊಲ್ಲಹಳ್ಳಿ ಪಂಚಾಯಿತಿ ಗ್ರಾಮ ಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು. ಸಭೆಯು ಗೊಂದಲದ ಗೂಡಾಗುವಂತೆ ಮಾಡಿತು.

ಯಶವಂತಪುರ ಕ್ಷೇತ್ರ ವ್ಯಾಪ್ತಿಯ ದೇವಗೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಆಯೋಜಿಸಲಾಗಿದ್ದ ಮೊದಲನೆ ಸುತ್ತಿನ ಗ್ರಾಮಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪರವಾಗಿ ವೈದ್ಯೆ ಶಾಲಿನಿ ಮಾಹಿತಿ ನೀಡಿದರು. 'ಕೊರೊನಾ ಸೋಂಕು ಜಾಸ್ತಿ ಇದ್ದಾಗ ಜನರು ಲಸಿಕೆಗಾಗಿ ಪರದಾಡುವ ಸ್ಥಿತಿ ಇತ್ತು' ಎಂದು ಗ್ರಾಮ ಪಂಚಾಯಿತಿ ಸದಸ್ಯ ರೇವಣ್ಣ ಆಕ್ಷೇಪಿಸಿದರು.

ಇದಕ್ಕೆ ಇತರೆ ಗ್ರಾಮ ಪಂಚಾಯಿತಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ವೈದ್ಯರ ನೆರವಿಗೆ ಧಾವಿಸಿದರು. 'ಪಂಚಾಯಿತಿ ವ್ಯಾಪ್ತಿಯ ಜನರೊಂದಿಗೆ ಇತರೆ ಊರಿನ ಮಂದಿಗೂ ಲಸಿಕೆ ಹಾಕಲಾಗಿದೆ. ಲಸಿಕೆ ನೀಡಿಕೆಯಲ್ಲಿ ಆರೋಗ್ಯ ಇಲಾಖೆಯಿಂದ ಯಾವುದೇ ಹಿನ್ನಡೆಯಾಗಿಲ್ಲ' ಎಂದು ಬೆಂಬಲ ವ್ಯಕ್ತಪಡಿಸಿದರು. ಸದಸ್ಯರ ಹೇಳಿಕೆಗೆ ವಿರೋಧ ವ್ಯಕ್ತ ಪಡಿಸಿದ ಗ್ರಾಮಸ್ಥರು, 'ಲಸಿಕೆ ನೀಡುವಾಗ ಸ್ಥಳೀಯರಿಗೆ ಆದ್ಯತೆ ನೀಡಬೇಕು. ಅದನ್ನು ಬಿಟ್ಟು ಚನ್ನಪಟ್ಟಣ ಸೇರಿದಂತೆ ಇನ್ನಿತರ ಊರಿನವರಿಗೆ ಲಸಿಕೆ ಹಾಕಿದರೆ ಹೇಗೆ' ಎಂದು ಹರಿಹಾಯ್ದರು. ಇದರಿಂದ ಸಭೆಯಲ್ಲಿ ಕೆಲ ಕಾಲ ಗೊಂದಲ ಉಂಟಾಗಿತ್ತು.

'ಆರಂಭದಲ್ಲಿ ನಾವೇ ಮನೆಗೆ ಹೋಗಿ ಲಸಿಕೆ ಹಾಕಿಸಿಕೊಳ್ಳುವಂತೆ ಮನವಿ ಮಾಡಿದರೂ ಆರೋಗ್ಯ ಕೇಂದ್ರಕ್ಕೆ ಬಾರದೆ ಹಿಡಿಶಾಪ ಹಾಕುತ್ತಿದ್ದರು. ಆ ವೇಳೆ ಅನ್ಯ ಗ್ರಾಮಸ್ಥರು ಲಸಿಕೆ ಪಡೆದಿದ್ದಾರೆ. ಪಂಚಾಯಿತಿ ವ್ಯಾಪ್ತಿಯ ಬಹುತೇಕ ಎಲ್ಲರಿಗೂ ಈಗಾಗಲೇ ಮೊದಲನೇ ಡೋಸ್ ನೀಡಲಾಗಿದೆ. ಲಸಿಕೆ ಈಗಲೂ ಲಭ್ಯವಿದೆ' ಎಂದು ಗ್ರಾಮಪಂಚಾಯಿತಿ ಅಧ್ಯಕ್ಷೆ ಕಲಾವತಿ ಮಂಜುನಾಥ್ ಸಮಾಧಾನ ಪಡಿಸಿದರು.

ಜನರ ಮನೆ ಬಾಗಿಲಿಗೆ ಪಾಲಿಕೆ ವೈದ್ಯರು ಕಾರ್ಯಕ್ರಮ

57,528 ಮಂದಿಯಲ್ಲಿ ಗಂಭೀರ ಕಾಯಿಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರ ಮನೆ ಬಾಗಿಲಿಗೆ ಪಾಲಿಕೆ ವೈದ್ಯರು' ಕಾರ್ಯಕ್ರಮದಡಿ ಬಿಬಿಎಂಪಿ ಪಾಲಿಕೆ ವೈದ್ಯರ ನೇತೃತ್ವದ ತಂಡ 21 ದಿನಗಳಲ್ಲಿ ಒಟ್ಟು 2,48,280 ಮನೆಗಳಿಗೆ ಭೇಟಿ ನೀಡಿದೆ. ಇದುವರೆಗೆ 7,11,648 ಮಂದಿಯನ್ನು ಪರೀಕ್ಷೆಗೆ ಒಳಪಡಿಸಿದ್ದು, ಅವರಲ್ಲಿ 57,528 ಮಂದಿ ಅನ್ಯ ಗಂಭೀರ ಕಾಯಿಲೆ ಹೊಂದಿದ್ದಾರೆ.

ಈ ಕುರಿತು ಸುದ್ದಿಗಾರರಿಗೆ ವಿವರ ನೀಡಿದ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವ ಆರ್.ಅಶೋಕ, 'ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿಯ ತಂಡ ನಗರದ ಪ್ರತಿ ಮನೆಗೂ ಭೇಟಿ ನೀಡಿ ಧೈರ್ಯ ತುಂಬುತ್ತಿದೆ. ಯಾವ ಮನೆಯಲ್ಲಿ ಎಷ್ಟು ಜನ ಇದ್ದಾರೆ, ಕುಟುಂಬದ ಸದಸ್ಯರಿಗೆ ಏನೇನು ಕಾಯಿಲೆಗಳಿವೆ ಎಂಬ ಮಾಹಿತಿ ಕಲೆಹಾಕುತ್ತಿದೆ. ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲು ಹಾಗೂ ಔಷಧ ಸಂಗ್ರಹಕ್ಕೆ ಇದು ಪ್ರಮುಖ ದಾಖಲೆಯಾಗಲಿದೆ' ಎಂದರು.

'ದೇಶದಲ್ಲೇ ಮೊದಲ ಬಾರಿ ಬಿಬಿಎಂಪಿ ಕೈಗೊಂಡ ವಿನೂತನ ಕಾರ್ಯಕ್ರಮವಿದು. ಇದುವರೆಗೆ ನಿಗದಿಪಡಿಸಿದ ಗುರಿಯಲ್ಲಿ ಶೇ 90ರಷ್ಟು ಮನೆಗಳ ಸಮೀಕ್ಷೆ ಪೂರ್ಣಗೊಂಡಿದೆ. ಕೆಲವು ಕಡೆ ತಡವಾಗಿ ಸಮೀಕ್ಷೆ ಆರಂಭವಾಗಿದ್ದರಿಂದ ಶೇ 100ರಷ್ಟು ಗುರಿ ಸಾಧನೆ ಸಾಧ್ಯವಾಗಿಲ್ಲ. ಇನ್ನೂ 60 ದಿನ ಕಾಲಾವಕಾಶವಿದ್ದು, ಅಷ್ಟರೊಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗುತ್ತದೆ' ಎಂದರು.

ಆಯ್ದ 54 ವಾರ್ಡ್‌ಗಳಲ್ಲಿ ಈ ಸಮೀಕ್ಷೆ ನಡೆಸಲಾಗುತ್ತಿದೆ.

'ಲಸಿಕೆ: ರಾಜಕೀಯ ದುರ್ಬಳಕೆಗೆ ಅವಕಾಶವಿಲ್ಲ'

'ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಆದ್ಯತೆ ಮೇರೆಗೆ ಕೋವಿಡ್ ಲಸಿಕೆ ಹಾಕಲಾಗುತ್ತಿದೆ' ಎಂಬ ಆರೋಪವನ್ನು ಆರ್. ಅಶೋಕ ಅಲ್ಲಗಳೆದರು.

'ಈ ಆರೋಪ ಸುಳ್ಳು. ಎಲ್ಲ ವಾರ್ಡ್‌ಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಲ್ಲರಿಗೂ ಲಸಿಕೆ ನೀಡಲಾಗುತ್ತಿದೆ. ರಾಜಕೀಯ ಪಕ್ಷದವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಲ್ಲ. ರಾಜಕೀಯ ಪಕ್ಷಗಳು ಸ್ವಂತ ಖರ್ಚಿನಲ್ಲಿ ಲಸಿಕೆ ಖರೀದಿಸಿ ಇಂತಹ ವ್ಯವಸ್ಥೆ ಮಾಡಿದ್ದರೆ ಅಭ್ಯಂತರ ಇಲ್ಲ. ಆದರೆ, ಸರ್ಕಾರದಿಂದ ಉಚಿತವಾಗಿ ಲಸಿಕೆ ನೀಡುವ ಕಾರ್ಯಕ್ರಮವನ್ನು ರಾಜಕೀಯವಾಗಿ ದುರ್ಬಳಕೆ ಮಾಡಲು ಅವಕಾಶ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಮೂರನೇ ಅಲೆ ತಡೆಯಲು ಕಾರ್ಯಪಡೆ'

'ಕೋವಿಡ್ ಮೂರನೇ ಅಲೆ ತಡೆಯಲು ಕಾರ್ಯಪಡೆ ರಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೀರ್ಮಾನ ಕೈಗೊಂಡಿದ್ದಾರೆ. ಅಗತ್ಯ ಔಷಧ ಖರೀದಿಗೆ ₹ 120 ಕೋಟಿ ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿದೆ. ಮೂರನೇ ಅಲೆಯಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ ಸಮಸ್ಯೆ ಇರುವವರಿಗೆ ಕೋವಿಡ್ ಕಾಣಿಸಿಕೊಂಡರೆ ಚಿಕಿತ್ಸೆ ಕೊಡಿಸುವುದು ಸುಲಭವಾಗಲಿದೆ' ಎಂದು ಆರ್.ಅಶೋಕ ತಿಳಿಸಿದರು.

ಸಮೀಕ್ಷೆಯಲ್ಲಿ ಕಂಡು ಬಂದಿದ್ದು

22,313 ಕೋವಿಡ್‌ನಿಂದ ಗುಣಮುಖರಾದವರು
4,39,777 ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡವರು
1,67,081 ಲಸಿಕೆಯ ಎರಡು ಡೋಸ್‌ಗಳನ್ನೂ ಹಾಕಿಸಿಕೊಂಡವರು
50.86% ಮಧುಮೇಹ ಹೊಂದಿರುವವರು
35.82% ಅಧಿಕ ರಕ್ತದೊತ್ತಡ ಸಮಸ್ಯೆ ಹೊಂದಿರುವವರು
2.48% ಹೃದಯ ಸಂಬಂಧಿ ಕಾಯಿಲೆ ಹೊಂದಿರುವವರು
2.99% ಥೈರಾಯ್ಡ್ ಸಮಸ್ಯೆ ಹೊಂದಿರುವವರು

ಜನರ ಮನೆ ಬಾಗಿಲಿಗೆ ಪಾಲಿಕೆ ವೈದ್ಯರು–ವಲಯವಾರು ವಿವರ

ವಲಯ	ಆರಿಸಿಕೊಂಡ ವಾರ್ಡ್‌ಗಳು	ದೈನಂದಿನ ಗುರಿ	ಒಟ್ಟು ಗುರಿ	ಸಾಧನೆ (ಶೇ)
ಬೊಮ್ಮನಹಳ್ಳಿ	4	1000	20,500	166
ದಾಸರಹಳ್ಳಿ	2	500	10,250	152
ಪೂರ್ವ	12	3000	61,500	75
ಮಹದೇವಪುರ	4	1000	20,500	80
ಆರ್.ಆರ್.ನಗರ	4	1000	20,500	91
ದಕ್ಷಿಣ	12	3000	61,500	87
ಪಶ್ಚಿಮ	12	3000	61,500	75
ಯಲಹಂಕ	4	1000	20,500	86

ಎತ್ತಿನಹೊಳೆ ಯೋಜನೆ ಬದಲಿಸದಂತೆ ಆಗ್ರಹ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸೋಮವಾರ ಭೇಟಿ ಮಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ನಿಯೋಗ, ಎತ್ತಿನಹೊಳೆ ಯೋಜನೆಯಲ್ಲಿ ಯಾವುದೇ ಬದಲಾವಣೆ ಇಲ್ಲದೆ ಮೂಲ ಸ್ವರೂಪದಲ್ಲೇ ಅನುಷ್ಠಾನಕ್ಕೆ ತರುವಂತೆ ಆಗ್ರಹಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್‌. ಕೆ. ಕುಮಾರಸ್ವಾಮಿ ಮತ್ತು ಶಾಸಕರ ಜತೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಎಚ್‌.ಡಿ. ಕುಮಾರಸ್ವಾಮಿ, ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದರು. ಎತ್ತಿನಹೊಳೆ ಯೋಜನೆಯ ಅನುಷ್ಠಾನ, ಮೇಕೆದಾಟು, ಮಹದಾಯಿ, ಕೃಷ್ಣಾ ಮೇಲ್ದಂಡೆ ಸೇರಿದಂತೆ ಹಲವು ನೀರಾವರಿ ಯೋಜನೆಗಳ ಕುರಿತು ತ್ವರಿತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಭೇಟಿ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಕುಮಾರಸ್ವಾಮಿ, 'ಎತ್ತಿನಹೊಳೆ ಯೋಜನೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಈಗ ಇರುವ ಯೋಜನೆಯ ಪ್ರಕಾರ ಕಾಮಗಾರಿ ಮುಂದುವರಿದರೆ ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಯಾವ ಜಿಲ್ಲೆಗೂ ನೀರು ಹರಿಸಲು ಆಗುವುದಿಲ್ಲ. ಯೋಜನೆಯಲ್ಲಿ ಮಾಡಿರುವ ಬದಲಾವಣೆಯಿಂದ ಆಗುವ ಸಮಸ್ಯೆ ಕುರಿತು ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಿದ್ದೇನೆ. ಮೂಲ ಸ್ವರೂಪದಲ್ಲೇ ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿದ್ದೇವೆ' ಎಂದರು.

ಮೇಕೆದಾಟು ಮತ್ತು ಮಹದಾಯಿ ಯೋಜನೆಗಳ ಅನುಷ್ಠಾನಕ್ಕೆ ಇರುವ ತೊಡಕುಗಳ ನಿವಾರಣೆಗೂ ಮನವಿ ಮಾಡಲಾಗಿದೆ. ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ನಡುವಿನ ನೀರಿನ ಹಂಚಿಕೆಯ ವ್ಯಾಜ್ಯದಿಂದಾಗಿ ರಾಜ್ಯಕ್ಕೆ ತೊಂದರೆ ಆಗುವ ಅಪಾಯವಿದೆ. ಆದ್ದರಿಂದ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯಮಂಡಳಿಯ ತೀರ್ಪನ್ನು ಅಧಿಸೂಚನೆಯಲ್ಲಿ ಪ್ರಕಟಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಸಲಹೆ ನೀಡಲಾಗಿದೆ ಎಂದು ತಿಳಿಸಿದರು.

ತುರ್ತು ನಿರ್ವಹಣೆ: ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ನಿರ್ವಹಣೆ ಮತ್ತು ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 7ರಂದು ಬೆಳಿಗ್ಗೆ 7ರಿಂದ ಸಂಜೆ 7ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬ್ಯಾಡರಹಳ್ಳಿ, ಅಂಜನಾ ನಗರ, ಬಿಇಎಲ್ ಬಡಾವಣೆ, ಬಿಇಎಲ್ ಬಡಾವಣೆ ಎರಡನೇ ಹಂತ, ಗಿಡ್ಡದಕೋನೇನಹಳ್ಳಿ, ಮುದ್ದಿನ ಪಾಳ್ಯ, ಬಿಡಿಎ 8–9ನೇ ಹಂತ, ರೈಲ್ವೆ ಬಡಾವಣೆ, ಉಪಕಾರ್ ಬಡಾವಣೆ, ಭವಾನಿ ಬಡಾವಣೆ, ಬಾಲಾಜಿ ಬಡಾವಣೆ, ಗೊಲ್ಲರಹಟ್ಟಿ, ರತ್ನ ನಗರ, ಮಾಡ್ರನ್ ಬಡಾವಣೆ, ಬಿಎಂಟಿಸಿ ಡಿಪೊ, ಮಹದೇಶ್ವರ ನಗರ, ಮುನೇಶ್ವರ ನಗರ, ಚನ್ನಪ್ಪ ಬಡಾವಣೆ, ಶ್ರೀನಿವಾಸ ನಗರ, ಹೆಗ್ಗನಹಳ್ಳಿ ಮುಖ್ಯರಸ್ತೆ ಹಾಗೂ ಸುತ್ತ-ಮುತ್ತಲಿನ ಪ್ರದೇಶ.

ಕೊಡಿಗೇಹಳ್ಳಿ, ಸ್ಕಂದನಗರ, ಚಿಕ್ಕಗೊಲ್ಲರಹಟ್ಟಿ, ಪದ್ಮಾವತಿ ಬಡಾವಣೆ, ಸೀಗೇಹಳ್ಳಿ, ಬಿಬಿಎಂಪಿ ಪ್ಲಾಂಟ್, ರಂಗೇಗೌಡ ಬಡಾವಣೆ, ಕನ್ನಹಳ್ಳಿ, ಶಾಂತಿಲಾಲ್ ಬಡಾವಣೆ, ಎನ್‌.ಜಿ.ಎಫ್. ಬಡಾವಣೆ, ಬಾಲಾಜಿ ಬಡಾವಣೆ, ಎಂ.ಪಿ.ಎಂ. ಬಡಾವಣೆ, 9ನೇ ಬ್ಲಾಕ್, ಮಲ್ಲತ್ತಹಳ್ಳಿ, ಕೆಂಗುಂಟೆ, ಜ್ಞಾನಗಂಗೋತ್ರಿ ನಗರ, ಉಲ್ಲಾಳ ಮುಖ್ಯರಸ್ತೆ, ಲಕ್ಷ್ಮಿ ಆಸ್ಪತ್ರೆ, ಚನ್ನಿಗಪ್ಪ ಕೈಗಾರಿಕಾ ಪ್ರದೇಶ, ಕಾವೇರಿ ಡಾಬಾ, ರಂಗಮಂದಿರ, ಈರಣ್ಣಪಾಳ್ಯ, ಲುಲುಬಜಾರ್, ಎಚ್‌. ಎಂ.ವಿ. ಶಾಲೆ, ಆರ್ಚಿಡ್ ಶಾಲೆ, ಜಯಲಕ್ಷ್ಮಮ್ಮ ಬಡಾವಣೆ, ಕೊಟ್ಟಿಗೆಪಾಳ್ಯ, ಸಜ್ಜೆಪಾಳ್ಯ, ಸುಮನಹಳ್ಳಿ, ಸುಂಕದಕಟ್ಟೆ ಮುಖ್ಯರಸ್ತೆ, ನೀಲಗಿರಿ ತೋಪು, ಹೊಯ್ಸಳ ನಗರ, ಮೋಹನ್ ಥಿಯೇಟರ್ ಹತ್ತಿರ, ಸಂಜೀವಿನಿ ನಗರ, ನೀಲಕಂಠೇಶ್ವರ ನಗರ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಜವರಾಯನ ದೊಡ್ಡಿ, ಭೂಮಿಕಾ ಬಡಾವಣೆ, ಪಟ್ಟಣಗೆರೆ, ಬಿಎಚ್‌ಇಎಲ್ ಬಡಾವಣೆ, ತಿಪ್ಪನಹಳ್ಳಿ, ಮಾಳಗಾಳ, ಮಾಗಡಿ ಮುಖ್ಯರಸ್ತೆ, ರಾಜೀವ್ ಗಾಂಧಿ ನಗರ, ಭೈರವೇಶ್ವರ ನಗರ, ಕೆಬ್ಬೆಹಳ್ಳ, ಹನುಮಂತರಾಯನಪಾಳ್ಯ, ಕೆಎಚ್‌ಬಿ ಕಾಲೊನಿ, ದುಬಾಸಿಪಾಳ್ಯ, ಮೆಡ್‌ಸೋಲ್ ಆಸ್ಪತ್ರೆ ರಸ್ತೆ, ಸರ್ ಎಂ.ವಿ. ಬಡಾವಣೆ ಐದನೇ ಹಂತ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ, ಬಿಡಿಎ ಕಾಲೊನಿ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಹನುಮಂತನಗರದಲ್ಲಿ ಮಾರಾಟಕ್ಕಿಟ್ಟಿದ್ದ ಗಣೇಶನ ಮೂರ್ತಿಯೊಂದನ್ನು ಮಕ್ಕಳು ಕುತೂಹಲದಿಂದ ವೀಕ್ಷಿಸಿದರು (ಎಡ ಚಿತ್ರ)ಆರ್‌.ವಿ. ರಸ್ತೆಯ ಮಳಿಗೆಯೊಂದರಲ್ಲಿ ಇಟ್ಟಿದ್ದ ಗೌರಿ ಹಾಗೂ ಗಣೇಶನ ವಿಗ್ರಹಗಳನ್ನು ಮಹಿಳೆಯರು ವೀಕ್ಷಿಸಿದರು
– ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ವಿಘ್ನೇಶ್ವರನ ಮೂರ್ತಿಗಳನ್ನು ಖರೀದಿಸಲು ಗ್ರಾಹಕರ ನಿರಾಸಕ್ತಿ; ವ್ಯಾಪಾರಿಗಳು ಕಂಗಾಲು

ಗಣೇಶೋತ್ಸವಕ್ಕೆ ಗರಿಗೆದರದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಹಲವು ಷರತ್ತುಗಳೊಂದಿಗೆ ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡಿದ್ದರೂ ಕೂಡ ನಗರದಲ್ಲಿ ಹಿಂದಿನಷ್ಟು ಸಂಭ್ರಮ ಕಾಣುತ್ತಿಲ್ಲ.

ಗಣೇಶ ಮೂರ್ತಿಗಳ ಖರೀದಿಗೆ ನಾಗರಿಕರು ನಿರಾಸಕ್ತಿ ತೋರುತ್ತಿರುವುದರಿಂದ ವ್ಯಾಪಾರಿಗಳು ಕಂಗಾಲಾಗಿದ್ದಾರೆ. ಗರಿಷ್ಠ ನಾಲ್ಕು ಅಡಿಯ ವಿಗ್ರಹಗಳನ್ನಷ್ಟೇ ಪ್ರತಿಷ್ಠಾಪಿಸಬೇಕೆಂಬ ಸರ್ಕಾರದ ಷರತ್ತು ಗಣೇಶ ಮೂರ್ತಿ ತಯಾರಿಕೆ ಉದ್ಯಮವನ್ನೇ ನಂಬಿದ್ದವರನ್ನು ಅಡಕತ್ತರಿಗೆ ಸಿಲುಕಿಸಿದೆ. ಕೋವಿಡ್‌ನಿಂದಾಗಿ ಈಗಾಗಲೇ ಸಾಕಷ್ಟು ನಷ್ಟ ಅನುಭವಿಸಿರುವ ಅವರು ಈಗ ದಿಕ್ಕೇ ತೋಚದಾಗಿದ್ದಾರೆ. ಒಂದಷ್ಟು ಮೂರ್ತಿಗಳಾದರೂ ಬಿಕರಿಯಾದರೆ ಸಾಕು ಎಂಬ ಮನಸ್ಥಿತಿಯಲ್ಲಿರುವ ಕೆಲವರು ಗ್ರಾಹಕರು ಕೇಳಿದ ಮೊತ್ತಕ್ಕೆ ವಿಗ್ರಹಗಳನ್ನು ಮಾರುವ ಅನಿವಾರ್ಯತೆಗೂ ಸಿಲುಕಿದ್ದಾರೆ.

'ಸರ್ಕಾರವು ಗಣೇಶೋತ್ಸವಕ್ಕೆ ಅನುಮತಿ ನೀಡುತ್ತದೆಯೊ ಇಲ್ಲವೊ ಎಂಬ ಗೊಂದಲದಲ್ಲೇ ಇದ್ದೆವು. ಹೀಗಾಗಿ ದೊಡ್ಡ ಮೂರ್ತಿಗಳನ್ನು ನಿರ್ಮಿಸಿರಲಿಲ್ಲ. ಹಬ್ಬಕ್ಕೆ ಐದು ದಿನ ಇರುವಾಗ ಸರ್ಕಾರ ಹಸಿರು ನಿಶಾನೆ ತೋರಿದೆ. ಈಗ ಕೆಲವರು ದೊಡ್ಡ ವಿಗ್ರಹಗಳಿಗಾಗಿ ಬೇಡಿಕೆ ಇಡುತ್ತಿದ್ದಾರೆ. ಮೂರು ದಿನಗಳಲ್ಲಿ ಮೂರ್ತಿಗಳ ನಿರ್ಮಾಣ ಅಸಾಧ್ಯ' ಎಂದು ಬಸವನಗುಡಿಯ ದೊಡ್ಡ ಗಣಪತಿ ರಸ್ತೆಯಲ್ಲಿ ಮೂರ್ತಿಗಳನ್ನು ಮಾರಾಟಕ್ಕಿಟ್ಟಿರುವ ಅಂಬುಜಾ ತಿಳಿಸಿದರು.

ಮಾವಳ್ಳಿಯಲ್ಲಿ ಮಾರಾಟಕ್ಕಿಟ್ಟಿದ್ದ ಗಣೇಶನ ವಿಗ್ರಹಗಳನ್ನು ಗ್ರಾಹಕರು ವೀಕ್ಷಿಸಿದರು
–ಪ್ರಜಾವಾಣಿ ಚಿತ್ರ

'ಮೊದಲೆಲ್ಲಾ ಸಣ್ಣ ಮೂರ್ತಿಗಳ ಜೊತೆಗೆ ಒಂದಷ್ಟು ದೊಡ್ಡ ವಿಗ್ರಹಗಳನ್ನು ತಯಾರಿಸುತ್ತಿದ್ದೆವು. ಹಬ್ಬಕ್ಕೆ ಎಂಟು ತಿಂಗಳು ಮುಂಚಿತವಾಗಿಯೇ ಮೂರ್ತಿಗಳ ತಯಾರಿಕೆ ಆರಂಭಿಸಬೇಕಾಗುತ್ತದೆ. ಜೇಡಿಮಣ್ಣಿನಿಂದ ತಯಾರಿಸುವುದರಿಂದ ನೆರಳಲ್ಲೇ ಅವುಗಳನ್ನು ಮೂರು ತಿಂಗಳು ಒಣಗಲು ಬಿಡಬೇಕು. ಕೋವಿಡ್‌ಗೂ ಮುನ್ನ 3,500 ಗಣೇಶ ಹಾಗೂ 2,500 ಗೌರಿ ವಿಗ್ರಹಗಳನ್ನು ತಯಾರಿಸುತ್ತಿದ್ದೆವು. ಈ ಬಾರಿ 2,500 ಗಣೇಶ ಮೂರ್ತಿಗಳನ್ನಷ್ಟೇ ನಿರ್ಮಿಸಿದ್ದೇವೆ. ಬಿಕರಿಯಾಗದೆ ಉಳಿದ ವಿಗ್ರಹಗಳನ್ನು ಕರಗಿಸಿಬಿಡುತ್ತೇವೆ. ಮುಕ್ಕಾಲು ಅಡಿಯ ಗಣೇಶ ಮೂರ್ತಿಗೆ ₹200, 1 ಅಡಿಯ ವಿಗ್ರಹಕ್ಕೆ ₹250 ರಿಂದ ₹300 ದರ ನಿಗದಿಪಡಿಸಲಾಗಿದೆ. ತಾತನ ಕಾಲದಿಂದಲೂ ಈ ಕೆಲಸ ಮಾಡಿಕೊಂಡು ಬಂದಿದ್ದೇವೆ' ಎಂದು ತಲಘಟ್ಟಪುರದ ಭರತ್ ಹೇಳಿದರು.

> **ದಿನಕ್ಕೆ ಸಾವಿರಾರು ರೂಪಾಯಿ ಬಾಡಿಗೆ ಪಾವತಿಸಿ ಮೂರ್ತಿಗಳನ್ನು ಇಟ್ಟಿದ್ದೇವೆ. ಇವುಗಳನ್ನು ಕೊಳ್ಳುವವರೇ ಇಲ್ಲ. ನಮ್ಮಲ್ಲಿ ದೊಡ್ಡ ವಿಗ್ರಹಗಳೇ ಹೆಚ್ಚಿವೆ. ಅವುಗಳನ್ನು ಯಾರೂ ಕೇಳುತ್ತಿಲ್ಲ.**
> **ಲೋಕೇಶ್,** ವ್ಯಾಪಾರಿ, ಮಾವಳ್ಳಿ

ಹನುಮಂತನಗರದಲ್ಲಿ ಗಣೇಶ ಮೂರ್ತಿಗಳನ್ನು ಮಾರಾಟಕ್ಕಿಟ್ಟಿದ್ದ ರಮೇಶ್ 'ಗಣೇಶ ಮೂರ್ತಿಗಳಿಗೆ ಹಿಂದಿನಷ್ಟು ಬೇಡಿಕೆ ಇಲ್ಲ. ಹಬ್ಬಕ್ಕೆ ಅನುಮತಿ ನೀಡುವ ವಿಚಾರದಲ್ಲಿ ಸರ್ಕಾರ ವಿಳಂಬ ನೀತಿ ಅನುಸರಿಸಿದ್ದರಿಂದ ವ್ಯಾಪಾರಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಗ್ರಾಹಕರು ಕೇಳಿದಷ್ಟೇ ದರಕ್ಕೆ ಮೂರ್ತಿಗಳನ್ನು ಮಾರುವ ಅನಿವಾರ್ಯತೆಗೆ ಸಿಲುಕಿದ್ದೇವೆ. ಮನೆಯಲ್ಲಿ ಮೂರ್ತಿ ಪ್ರತಿಷ್ಠಾಪಿಸುವವರ ಪೈಕಿ ಕೆಲವರು ಚಿಕ್ಕ ಮೂರ್ತಿಗಳನ್ನು ಕಾಯ್ದಿರಿಸುತ್ತಿದ್ದಾರೆ. ಅದೇ ಸಮಾಧಾನ' ಎಂದರು.

'ಚುನಾವಣೆ ವೇಳೆ ಜನ ಸೇರಿದರೆ ಸೋಂಕು ಹರಡುವುದಿಲ್ಲವೇ'

'ಗಣೇಶ ಹಬ್ಬದ ಆಚರಣೆಗೆ ಸರ್ಕಾರ ಇಲ್ಲಸಲ್ಲದ ಷರತ್ತುಗಳನ್ನು ವಿಧಿಸುತ್ತದೆ. ಚುನಾವಣೆ ವೇಳೆ ಅಷ್ಟೊಂದು ಜನ ಸೇರುತ್ತಾರಲ್ಲ. ಅಲ್ಲಿ ಸೋಂಕು ಹರಡುವುದಿಲ್ಲವೇ. ಅದು ಸರ್ಕಾರಕ್ಕೆ ಗೊತ್ತಿಲ್ಲವೇ' ಎಂದು ಆರ್‌.ವಿ.ರಸ್ತೆಯ ವ್ಯಾಪಾರಿ ನಂದಕಿಶೋರ್ ಪ್ರಶ್ನಿಸಿದರು.

'ಹಿಂದೆಲ್ಲಾ ಜನ ಗಣೇಶ ಮೂರ್ತಿಗಳ ಖರೀದಿಗೆ ಮುಗಿಬೀಳುತ್ತಿದ್ದರು. ಬೆಳಿಗ್ಗೆಯಿಂದ ಸಂಜೆಯವರೆಗೂ ವ್ಯಾಪಾರ ನಡೆಯುತ್ತಿತ್ತು. ಈಗ ಜನ ಅಂಗಡಿಗಳತ್ತ ಸುಳಿಯುತ್ತಲೇ ಇಲ್ಲ. ಹೀಗಾಗಿ ಕೆಲಸವಿಲ್ಲದೆ ಕೂರಬೇಕಾಗಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಹಬ್ಬಗಳೇ ಮರೆಯಾಗಬಹುದು' ಎಂದು ಬೇಸರ ವ್ಯಕ್ತಪಡಿಸಿದರು.

'ಸಿದ್ಧತೆಗೂ ಸಮಯ ಇಲ್ಲ'

ಶಶಾಂಕ್

'ಪ್ರತಿ ವರ್ಷ ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದೆವು. ಈ ಬಾರಿ ಸರ್ಕಾರ ತಡವಾಗಿ ಅನುಮತಿ ನೀಡಿರುವುದರಿಂದ ಸಿದ್ಧತೆಗೂ ಸಮಯ ಇಲ್ಲದಂತಾಗಿದೆ. ವಾರ್ಡ್‌ಗೊಂದು ಮೂರ್ತಿ ಪ್ರತಿಷ್ಠಾಪಿಸಲು ಅನುಮತಿ ನೀಡಿರುವುದೂ ಸರಿಯಲ್ಲ' ಎಂದು ಜೆ.ಪಿ.ನಗರ ಎರಡನೇ ಹಂತದ ಶಶಾಂಕ್ ತಿಳಿಸಿದರು.

'ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ವಿಗ್ರಹಗಳ ದರ ಕಡಿಮೆ ಇದೆ. ಇದರಿಂದ ವ್ಯಾಪಾರಿಗಳಿಗೆ ದೊಡ್ಡ ಹೊಡೆತ ಬೀಳಬಹುದು' ಎಂದರು.

ಗಣೇಶೋತ್ಸವಕ್ಕೆ ಷರತ್ತು: ಬಜರಂಗದಳ ಆಕ್ಷೇಪ

ಚಿತ್ರದುರ್ಗ: ಗಣೇಶೋತ್ಸವಕ್ಕೆ ರಾಜ್ಯ ಸರ್ಕಾರ ಕೆಲ ಷರತ್ತುಗಳನ್ನು ವಿಧಿಸಿರುವುದಕ್ಕೆ ಬಜರಂಗದಳ ಆಕ್ಷೇಪ ವ್ಯಕ್ತಪಡಿಸಿದೆ. ಧಾರ್ಮಿಕ ವಿಧಿವಿಧಾನಗಳಲ್ಲಿ ಹಸ್ತಕ್ಷೇಪ ಮಾಡಕೂಡದು ಎಂದು ಒತ್ತಾಯಿಸಿದ್ದು, 21 ದಿನ ಉತ್ಸವ ನಡೆಸುವುದಾಗಿ ಘೋಷಿಸಿದೆ.

'ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಹಾಗೂ ಸ್ಯಾನಿಟೈಸರ್ ಬಳಕೆಗೆ ಒತ್ತು ನೀಡುತ್ತೇವೆ. ಇದು ಹೊರತುಪಡಿಸಿದ ಷರತ್ತುಗಳು ಮೂರ್ಖತನದ ಪರಮಾವಧಿ. ಗಣೇಶ ಮೂರ್ತಿ ನಾಲ್ಕು ಅಡಿಗಳಿಗಿಂತ ಕಡಿಮೆ ಇದ್ದರೆ ಕೋವಿಡ್ ಹರಡುವುದಿಲ್ಲವೆಂದು ಆಲೋಚಿಸಿದಂತೆ ಕಾಣುತ್ತಿದೆ. ಅಸಂಬದ್ಧ ಷರತ್ತುಗಳನ್ನು ಪಾಲಿಸಿ ಉತ್ಸವ ನಡೆಸಲು ಸಾಧ್ಯವಿಲ್ಲ' ಎಂದು ಬಜರಂಗದಳ ಶಿವಮೊಗ್ಗ ವಿಭಾಗದ ಸಂಯೋಜಕ ಪ್ರಭಂಜನ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ರಾಜಕೀಯ ಕಾರ್ಯಕ್ರಮಗಳು, ಜನಾಶೀರ್ವಾದ ಯಾತ್ರೆಗೆ ಅವಕಾಶ ಕಲ್ಪಿಸಲಾಗಿದೆ. ಮದುವೆ, ಪ್ರಾರ್ಥನೆ ನಡೆಸಲು ನಿರ್ಬಂಧವೂ ಇಲ್ಲ. ಗಣೇಶೋತ್ಸವದಲ್ಲಿ ಸಾವಿರಾರು ಜನರ ಬದುಕಿದೆ. ಶಾಮಿಯಾನ, ಗಣೇಶ ಮೂರ್ತಿ ತಯಾರಕರ ಜೀವನ ಉತ್ಸವದ ಮೇಲೆ ಅವಲಂಬಿತವಾಗಿದೆ' ಎಂದರು.

ಸುದ್ದಿ 2 ನಿಮಿಷ

ಭಗವದ್ಗೀತೆ ಪಠಣದಲ್ಲಿ ದಾಖಲೆ

ಬೆಂಗಳೂರು: ಐದನೇ ವಯಸ್ಸಿನಲ್ಲಿಯೇ ಭಗವದ್ಗೀತೆಯ 74ಕ್ಕೂ ಹೆಚ್ಚು ಶ್ಲೋಕಗಳನ್ನು ಹೇಳುವ ಮೂಲಕ ಅಕ್ಷೋಭ್ಯ ಕುಲಕರ್ಣಿ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್' ಗೌರವಕ್ಕೆ ಪಾತ್ರನಾಗಿದ್ದಾನೆ.

ನಗರದ ವಿಜಯಕುಮಾರ್ ಕುಲಕರ್ಣಿ ಮತ್ತು ರಂಜಿತಾ ದಂಪತಿಯ ಪುತ್ರನಾದ ಅಕ್ಷೋಭ್ಯ ಆಗಸ್ಟ್ 9ರಂದು ಈ ಗೌರವಕ್ಕೆ ಪಾತ್ರನಾಗಿದ್ದಾನೆ. ಚಿಕ್ಕ ವಯಸ್ಸಿನಲ್ಲಿಯೇ (5 ವರ್ಷ, 6 ತಿಂಗಳು, 29 ದಿನ) ಗರಿಷ್ಠ ಶ್ಲೋಕಗಳನ್ನು ಹೇಳಿದ, ನೆನಪಿಟ್ಟುಕೊಂಡಿರುವ ಸಾಧನೆಗೆ ದಾಖಲೆಯ ಪಟ್ಟ ಸೇರಿದ್ದಾನೆ.

ಎರಡೂವರೆ ವರ್ಷದವನಿದ್ದಾಗಿನಿಂದ ಭಗವದ್ಗೀತೆಯ ಶ್ಲೋಕಗಳನ್ನು ಆಲಿಸುತ್ತಿರುವ ಅಕ್ಷೋಭ್ಯ, ಈಗ (5 ವರ್ಷ 9 ತಿಂಗಳು) ಭಗವದ್ಗೀತೆಯ 330ಕ್ಕೂ ಹೆಚ್ಚು ಶ್ಲೋಕಗಳನ್ನು ಹೇಳುತ್ತಾನೆ. ಸದ್ಯ ಅರುಂಧತಿ ಗುರುಕುಲ ಶಾಲೆಯಲ್ಲಿ ಅಕ್ಷೋಭ್ಯ ಓದುತ್ತಿದ್ದಾನೆ.

ಕ್ಷೇತ್ರ ಶಿಕ್ಷಣಾಧಿಕಾರಿ ಮೇಲೆ ಹಲ್ಲೆ; ಖಾಸಗಿ ಶಿಕ್ಷಕ ಬಂಧನ

ಬೆಂಗಳೂರು: ಸರ್ಕಾರಿ ಶಾಲೆಯ ಜಾಗ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಯಲಹಂಕ ಕ್ಷೇತ್ರ ಶಿಕ್ಷಣಾಧಿಕಾರಿ ಮೇಲೆ ಹಲ್ಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಆರೋಪಿ ರಮೇಶ್ ಎಂಬುವರನ್ನು ರಾಜಾನುಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ರಮೇಶ್, ಬೆಂಗಳೂರಿನ ಖಾಸಗಿ ಶಾಲೆ ಶಿಕ್ಷಕ. ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಡತನಮಲೆಯ ಸರ್ಕಾರಿ ಶಾಲೆಯ ಜಾಗವನ್ನು ಕೆಲ ಸ್ಥಳೀಯರು ಒತ್ತುವರಿ ಮಾಡಿಕೊಂಡಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಕಮಲಾಕರ್, ಒತ್ತುವರಿ ಜಾಗ ತೆರವು ಮಾಡಲು ಸೆಪ್ಟೆಂಬರ್ 4ರಂದು ಬೆಳಿಗ್ಗೆ ಕಾರ್ಯಾಚರಣೆ ಆರಂಭಿಸಿದ್ದರು.'

'ಶಾಲೆ ಬಳಿ ಜಾಗ ಹೊಂದಿದ್ದ ಆರೋಪಿ ರಮೇಶ್, ಕಾರ್ಯಾಚರಣೆಗೆ ಅಡ್ಡಿಪಡಿಸಿದ್ದರು. ಅದನ್ನು ಪ್ರಶ್ನಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದ್ದರು. ಜತೆಗೆ, ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ್ದರು. ಘಟನೆ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ವಂಚನೆ ಆರೋಪ; ಸೊಸೈಟಿ ವಿರುದ್ಧ ಎಫ್‌ಐಆರ್

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರು ಅಡವಿಟ್ಟ ಆಭರಣ ಹಾಗೂ ಠೇವಣಿ ಹಣವನ್ನು ವಾಪಸು ನೀಡದೇ ವಂಚಿಸಿರುವ ಆರೋಪದಡಿ 'ಬೃಹತ್ ಬೆಂಗಳೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ' ವಿರುದ್ಧ ಬಾಗಲಗುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸೊಸೈಟಿ ಕಚೇರಿಗೆ ಬೀಗ ಹಾಕಿಕೊಂಡು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

'ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದ ಸುಮಲತಾ ಎಂಬುವರು ದೂರು ನೀಡಿದ್ದಾರೆ. ಸೊಸೈಟಿಯ ಆರ್. ಲೋಕೇಶ್, ಸೂರ್ಯಕಾಂತ್, ಶಿರಿಷ್ ಹೆಗಡೆ, ರಾಜೇಂದ್ರ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯ ನಿವಾಸಿಯಾದ ಸುಮಲತಾ, ತಮ್ಮ ಪತಿಯ ಚಿಕಿತ್ಸೆಗೆ ಹಣ ಹೊಂದಿಸುವಾಗ ಸ್ನೇಹಿತರೊಬ್ಬರ ಮೂಲಕ ಸೊಸೈಟಿ ಆಡಳಿತ ಮಂಡಳಿ ಸದಸ್ಯನ ಪರಿಚಯವಾಗಿತ್ತು. ಆತನ ಮೂಲಕ ಸೊಸೈಟಿಯಲ್ಲಿ ಫಿಗ್ಮಿ ಸಂಗ್ರಹಿಸುವ ಕೆಲಸಕ್ಕೆ ಸೇರಿದ್ದರು. ತಮಗೆ ಹಣಕಾಸು ತೊಂದರೆ ಎದುರಾದಾಗ ಚಿನ್ನಾಭರಣವನ್ನು ಸೊಸೈಟಿಯಲ್ಲಿ ಅಡವಿಟ್ಟು ಸಾಲ ಪಡೆದಿದ್ದರು. ಪ್ರತಿ ತಿಂಗಳು ಸಂಬಳದಲ್ಲಿ ಸಾಲದ ಕಂತು ಕಡಿತಗೊಳ್ಳುತ್ತಿತ್ತು. ಇತ್ತೀಚೆಗೆ ಸಾಲದ ಕಂತು ಪೂರ್ಣಗೊಂಡಿತ್ತು. ಅಷ್ಟಾದರೂ ಸೊಸೈಟಿಯವರು ಚಿನ್ನಾಭರಣ ವಾಪಸು ನೀಡಿರಲಿಲ್ಲ. ಈ ಸಂಗತಿ ದೂರಿನಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

'ಜಾಲಹಳ್ಳಿ ಬಳಿಯ ಶೆಟ್ಟಿಹಳ್ಳಿಯ ಡಿಫೆನ್ಸ್ ಕಾಲೊನಿ ರಸ್ತೆಯಲ್ಲಿ ಸೊಸೈಟಿ ಕಚೇರಿ ಇದೆ. ಬೀಗ ಹಾಕಿಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ. ನೂರಾರು ಮಂದಿ ಸೊಸೈಟಿಯಲ್ಲಿ ಫಿಗ್ಮಿ ಕಟ್ಟುತ್ತಿದ್ದರು. ಕೆಲವರು ಲಕ್ಷಾಂತರ ರೂಪಾಯಿ ಹಣ ಹೂಡಿಕೆ ಮಾಡಿದ್ದರು. ಅವರೆಲ್ಲರನ್ನೂ ಆರೋಪಿಗಳು ವಂಚಿಸಿದ್ದಾರೆಂದು ದೂರುದಾರ ಮಹಿಳೆ ತಿಳಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

₹ 1.92 ಕೋಟಿ ಮೊತ್ತದ ಹಳೇ ನೋಟುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ರದ್ದು ಮಾಡಿರುವ ಹಳೇ ನೋಟುಗಳನ್ನು ಬದಲಾವಣೆ ಮಾಡುವುದಾಗಿ ಹೇಳಿ ವಂಚಿಸುವ ಜಾಲ ನಗರದಲ್ಲಿ ಸಕ್ರಿಯವಾಗಿದ್ದು, ಜಾಲದ ಮೂವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಇಮ್ರಾನ್ ಷರೀಫ್, ಮೊಹಮ್ಮದ್ ಜಾಹಿದ್ ಹಾಗೂ ಅಜರ್‌ಖಾನ್ ಬಂಧಿತರು. ಅವರಿಂದ ₹ 500 ಹಾಗೂ ₹ 1,000 ಮುಖಬೆಲೆಯ ₹ 1.92 ಕೋಟಿ ಮೊತ್ತದ ಹಳೇ ನೋಟುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಿರುಕುಳ ಖಂಡಿಸಿ ಶುಶ್ರೂಷಕಿಯರ ಪ್ರತಿಭಟನೆ

ಬೆಂಗಳೂರು: ನಿಮ್ಹಾನ್ಸ್ ಆಸ್ಪತ್ರೆಯ ಕ್ಲಿನಿಕಲ್ ನರ್ಸಿಂಗ್ ಸರ್ವಿಸ್ ವಿಭಾಗದ ಮುಖ್ಯಸ್ಥೆ ನಿರ್ಮಲಾ ಎಂ.ಹಟ್ಟಿ ಅವರು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಆಸ್ಪತ್ರೆಯ ಆವರಣದಲ್ಲಿ ಸೋಮವಾರ ಸಿಬ್ಬಂದಿ ಪ್ರತಿಭಟನೆ ನಡೆಸಿದರು.

ಆಗಸ್ಟ್ 30ರಂದು ಅನುಸೂಯಾ ಅವರನ್ನು ರಾತ್ರಿ ಪಾಳಿಗೆ ಕೆಲಸಕ್ಕೆ ಬರುವಂತೆ ಸೂಚಿಸಿದ್ದ ನಿರ್ಮಲಾ, ಅವರ ಮೇಲೆ ಹಲ್ಲೆ ನಡೆಸಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂದು ಪ್ರತಿಭಟನಕಾರರು ಆರೋಪಿಸಿದ್ದಾರೆ.

ಗಾಯಗೊಂಡಿರುವ ಅನುಸೂಯಾ, ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಆಸ್ಪತ್ರೆ ನಿರ್ದೇಶಕರಿಗೂ ಪತ್ರ ಬರೆದಿದ್ದಾರೆ ಎಂದು ತಿಳಿಸಿದ್ದಾರೆ.

'ನಿರ್ಮಲಾ ಅವರ ಕಿರುಕುಳ ತಾಳಲಾರದೆ ಅನೇಕರು ಸ್ವಯಂ ನಿವೃತ್ತಿ ಪಡೆಯುತ್ತಿದ್ದಾರೆ. ಶುಶ್ರೂಷಕಿಯರಿಗೆ ಸ್ಥಳ ಸ್ವಚ್ಛಗೊಳಿಸುವಂತೆ ಒತ್ತಡ ಹೇರುವ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದೂ ಪ್ರತಿಭಟನನಿರತರು ಒತ್ತಾಯಿಸಿದ್ದಾರೆ.

ಸಾರ್ವಜನಿಕ ಗಣೇಶೋತ್ಸವ: ಸಚಿವ ಆರ್‌.ಅಶೋಕ ಸ್ಪಷ್ಟನೆ

ಪೂಜೆಗೆ 5 ದಿನ ಮಾತ್ರವೇ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ದಿನಗಳಿಗಿಂತ ಹೆಚ್ಚು ಕಾಲ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಅವಕಾಶ ನೀಡಲು ಸಾಧ್ಯವೇ ಇಲ್ಲ. ಈ ನಿಯಮ ಉಲ್ಲಂಘಿಸಿದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಸಚಿವ ಆರ್. ಅಶೋಕ ಸ್ಪಷ್ಟಪಡಿಸಿದರು.

ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಐದು ದಿನಗಳಿಗೆ ಸೀಮಿತಗೊಳಿಸಿದ್ದಕ್ಕೆ ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿ ಆಕ್ಷೇಪ ವ್ಯಕ್ತಪಡಿಸಿದ ಕುರಿತು ಪ್ರತಿಕ್ರಿಯಿಸಿದ ಅವರು, 'ಯಾವ ಸಂಘಟನೆಯೂ ನಮ್ಮ ಬಳಿ ಈ ರೀತಿ ಆಕ್ಷೇಪ ವ್ಯಕ್ತಪಡಿಸಿಲ್ಲ. ಈ ನಿರ್ಬಂಧ ಉಲ್ಲಂಘಿಸಿದರೆ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಳ್ಳುವುದು ನಿಶ್ಚಿತ. ಜೀವ ಹಾಗೂ ಜೀವನಗಳೆರಡೂ ಪ್ರಾಮುಖ್ಯ. ಹಾಗಾಗಿ ನಿರ್ಬಂಧಗಳನ್ನು ಎಲ್ಲ ಸಾರ್ವಜನಿಕ ಗಣೇಶೋತ್ಸವ ಸಮಿತಿಗಳೂ ಪಾಲಿಸಬೇಕು. ಪರಿಸರಸ್ನೇಹಿ ಮೂರ್ತಿಗಳನ್ನು ಮಾತ್ರ ಪೂಜಿಸಬೇಕು' ಎಂದು ಕೋರಿದರು.

'ವಾರ್ಡ್‌ಗೊಂದೇ ಗಣೇಶ ಅಧಿಕಾರಿಗಳ ವಿವೇಚನೆಗೆ'

'ಕೋವಿಡ್ ಇರುವುದರಿಂದ ಆದಷ್ಟು ಕಡಿಮೆ ಕಡೆ ಸಾರ್ವಜನಿಕ ಗಣೇಶೋತ್ಸವ ಆಚರಿಸಬೇಕು ಎಂಬುದು ನಮ್ಮ ಆಶಯ. ವಾರ್ಡ್‌ನಲ್ಲಿ ಒಂದೇ ಸಾರ್ವಜನಿಕ ಗಣಪತಿ ಪ್ರತಿಷ್ಠಾಪನೆ ಮಾಡುವಂತೆ ನಿರ್ಬಂಧ ವಿಧಿಸುವ ಚಿಂತನೆ ಇದೆ. ಬಹುತೇಕ ಕಡೆ ಒಂದಕ್ಕಿಂತ ಹೆಚ್ಚು ಗಣಪತಿ ಇಡಲು ಬೇಡಿಕೆ ಬಂದಿಲ್ಲ. ಇಂತಹ ಬೇಡಿಕೆ ಬಂದರೆ ಸ್ಥಳೀಯ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಪಾಲಿಕೆ ಎಇಇ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ' ಎಂದು ಅಶೋಕ ತಿಳಿಸಿದರು.

'ಸಾರ್ವಜನಿಕ ಗಣೇಶೋತ್ಸವದಲ್ಲಿ ಪೂಜೆಗೊಂಡ ಮೂರ್ತಿಗಳ ವಿಸರ್ಜನೆಗೆ ಕೆರೆಗಳಲ್ಲಿ ಕಲ್ಯಾಣಿಗಳನ್ನು ನಿರ್ಮಿಸಲಿದ್ದೇವೆ. ಬೆಳಿಗ್ಗೆಯಿಂದ ರಾತ್ರಿ 9ರವರೆಗೆ ವಿಗ್ರಹ ವಿಸರ್ಜನೆಗೆ ಅವಕಾಶ ಕಲ್ಪಿಸಲಿದ್ದೇವೆ. ಸಮಿತಿಯವರು ಮೂರ್ತಿಗಳನ್ನು ಕಲ್ಯಾಣಿ ಬಳಿಯ ಟೇಬಲ್‌ನಲ್ಲಿ ಇಟ್ಟು ಪೂಜೆ ಮುಗಿಸಿ ಹೊರಡಬೇಕು. ವಿಗ್ರಹ ವಿಸರ್ಜನೆಗಾಗಿ ಈಜುಗಾರರನ್ನು ನೇಮಿಸಲಾಗುತ್ತದೆ' ಎಂದರು.

'ಗಣೇಶ ಚತುರ್ಥಿ ಕಳೆದ ಐದು ದಿನಗಳ ಬಳಿಕ ಕಲ್ಯಾಣಿಗಳಲ್ಲಿ ವಿಗ್ರಹ ವಿಸರ್ಜನೆಗೆ ಅವಕಾಶವಿಲ್ಲ. ಎಸಿಪಿ ದರ್ಜೆಯ ಪೊಲೀಸ್ ಅಧಿಕಾರಿ ಹಾಗೂ ಪಾಲಿಕೆಯ ಎಇಇ ವಿಗ್ರಹ ವಿಸರ್ಜನೆ ಕಾರ್ಯದ ವೇಳೆ ಕೋವಿಡ್ ನಿಯಂತ್ರಣ ನಿಯಮ ಉಲ್ಲಂಘನೆ ಆಗದಂತೆ ನೋಡಿಕೊಳ್ಳಲಿದ್ದಾರೆ' ಎಂದು ಅವರು ಹೇಳಿದರು.

'ಮನೆಯಲ್ಲಿ ಪೂಜಿಸುವ ಗಣೇಶ ವಿಗ್ರಹಗಳ ವಿಸರ್ಜನೆಗೆ ಸಂಚಾರ ತೊಟ್ಟಿಯ ವ್ಯವಸ್ಥೆ ಕಲ್ಪಿಸಲಿದ್ದೇವೆ. ವಾಹನದವರು ಧ್ವನಿವರ್ಧಕದಲ್ಲಿ ಘೋಷಣೆ ಮಾಡಲಿದ್ದಾರೆ. ಜನರು ಅಲ್ಲಿಗೆ ತೆರಳಿ ವಿಗ್ರಹ ವಿಸರ್ಜನೆ ಮಾಡಬೇಕು. ಮನೆಗಳಲ್ಲಿ ವಿಗ್ರಹ ಪ್ರತಿಷ್ಠಾಪನೆ ಮಾಡುವ ಶೇ 80 ಜನ ಗಣೇಶೋತ್ಸವದ ದಿನವೇ ವಿಗ್ರಹ ವಿಸರ್ಜನೆ ಮಾಡಿದರೆ ಬಹಳ ಒಳ್ಳೆಯದು' ಎಂದರು.

'ಮನೆಯಲ್ಲಿ ಗಣೇಶ ಮೂರ್ತಿಯನ್ನು ವರ್ಷಪೂರ್ತಿ ಪೂಜಿಸಬಹುದು. ಆದರೆ, ಅದನ್ನು ಮನೆಯಲ್ಲೇ ವಿಸರ್ಜನೆ ಮಾಡಬೇಕು' ಎಂದರು.

'ಅಪಾರ್ಟ್‌ಮೆಂಟ್: ಆನ್‌ಲೈನ್ ವ್ಯವಸ್ಥೆ'

'ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಗಣೇಶೋತ್ಸವವನ್ನು ಆನ್‌ಲೈನ್ ಮೂಲಕ ವೀಕ್ಷಿಸಲು ವ್ಯವಸ್ಥೆ ಕಲ್ಪಿಸುವುದಾಗಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹೇಳಿವೆ. ಇದಕ್ಕೆ ಅವಕಾಶ ನೀಡಲಾಗುತ್ತದೆ. ಇಲ್ಲಿ ಪೂಜೆ ವೇಳೆ 20ಕ್ಕಿಂತ ಹೆಚ್ಚು ಜನ ಗುಂಪುಗೂಡುವುದಿಲ್ಲ' ಎಂದು ಸಚಿವರು ತಿಳಿಸಿದರು.

ವಿಧಾನಪರಿಷತ್ ಸದಸ್ಯನ ಕಾರು ಅಪಘಾತ

ಬೆಂಗಳೂರು: ವಿಧಾನಪರಿಷತ್ ಸದಸ್ಯ ಬಿ.ಎಂ. ಫಾರೂಕ್ ಅವರಿಗೆ ಸೇರಿದ್ದ 'ಫೆರಾರಿ' ಕಾರು, ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಅಪಘಾತಕ್ಕೀಡಾಗಿದೆ. ಕಾರಿನ ಮುಂಭಾಗ ಜಖಂಗೊಂಡಿದ್ದು, ಕಾರಿನ ಚಾಲಕ ಅಪಾಯದಿಂದ ಪಾರಾಗಿದ್ದಾರೆ

'ಫಾರೂಕ್ ಅವರ ಸಂಬಂಧಿ ಕಾರು (ಎಂಎಚ್ 02 ಎಫ್‌ಎಫ್ 5555) ಚಲಾಯಿಸುತ್ತಿದ್ದರು. ಫಾರೂಕ್ ಅವರು ಕಾರಿನಲ್ಲಿ ಇರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭಾನುವಾರ ರಾತ್ರಿ 7.30ರ ಸುಮಾರಿಗೆ ರಸ್ತೆಯ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದಿತ್ತು. ಮುಂಭಾಗದ ಎಂಜಿನ್ ಭಾಗ ಜಖಂಗೊಂಡಿತ್ತು. ಅಪಘಾತದಿಂದ ಯಾವುದೇ ಹಾನಿಯಾಗಿಲ್ಲ. ಯಾರೊಬ್ಬರೂ ದೂರು ನೀಡಿಲ್ಲ. ಹೀಗಾಗಿ, ಪ್ರಕರಣ ದಾಖಲಿಸಿಕೊಂಡಿಲ್ಲ' ಎಂದೂ ಮೂಲಗಳು ತಿಳಿಸಿವೆ.

'ಕಾರಿನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು, ಚಾಲಕನ ನಿಯಂತ್ರಣ ತಪ್ಪಿದ್ದರಿಂದ ಈ ಅವಘಡ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದೂ ಹೇಳಿವೆ.

ಸಾಂತ್ವನ ಕೇಂದ್ರ ಉಳಿಸಲು ಒತ್ತಾಯ: ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರಗಳನ್ನು ಉಳಿಸಿ' ಆಂದೋಲನದ ಭಾಗವಾಗಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಮಹಿಳಾ ಸಾಂತ್ವನ ಕೇಂದ್ರದ ನೌಕರರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಮಹಿಳಾ ಸಾಂತ್ವನ ಕೇಂದ್ರಗಳ ಒಕ್ಕೂಟ, ಸಾಧನಾ ರಾಷ್ಟ್ರೀಯ ಮಹಿಳಾ ಚಿಂತನಾ ವೇದಿಕೆ, ಗ್ಲೋಬಲ್ ಕನ್ಸರ್ನ್ ಇಂಡಿಯಾ, ಮಹಿಳಾ ಪರ ಸಂಘಟನೆಗಳ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದ ನೌಕರರು ಮತ್ತು ಪ್ರತಿನಿಧಿಗಳು, ಕೇಂದ್ರಗಳನ್ನು ಮುಚ್ಚುವ ಸರ್ಕಾರದ ನಿಲುವು ಖಂಡಿಸಿದರು.

'ಮಹಿಳೆಯರ ಮೇಲಾಗುತ್ತಿರುವ ಎಲ್ಲ ರೀತಿಯ ದೌರ್ಜನ್ಯಗಳನ್ನು ನಿಯಂತ್ರಿಸಲು 2000–01ನೇ ಸಾಲಿನಲ್ಲಿ ರಾಜ್ಯದಾದ್ಯಂತ ಸಾಂತ್ವನ ಕೇಂದ್ರಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭಿಸಿತ್ತು. 2021ರ ಏಪ್ರಿಲ್ 1ರಿಂದ 71 ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗಿದೆ' ಎಂದು ಪ್ರತಿಭಟನಾಕಾರರು ದೂರಿದರು.

'ಕೇಂದ್ರಗಳನ್ನು ಮುಂದುವರಿಸುವಂತೆ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಲಾಗಿತ್ತು. ಈ ಕೇಂದ್ರಗಳನ್ನು ಮುಂದುವರಿಸುವಂತೆ ಅವರು ಸೂಚನೆ ನೀಡಿದ್ದರೂ, ಆರ್ಥಿಕ ಇಲಾಖೆ ಈವರೆಗೆ ಅನುಮೋದನೆ ನೀಡಿಲ್ಲ' ಎಂದು ಅವರು ಆರೋಪಿಸಿದರು.

'194 ಸಾಂತ್ವನ ಕೇಂದ್ರಗಳನ್ನು ಮುಂದುವರಿಸಲು ವರ್ಷಕ್ಕೆ ₹12 ಕೋಟಿ ಮಾತ್ರ ಅನುದಾನ ಅಗತ್ಯವಿದೆ. 5 ವರ್ಷಗಳ ಅಂಕಿ–ಅಂಶ ಗಮನಿಸಿದರೆ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಈ ಯೋಜನೆ ಯಶಸ್ವಿಯಾಗಿ ಕಾರ್ಯಗತಗೊಂಡಿದೆ. ಮಹಿಳೆಯರ ಧ್ವನಿಯಾಗಿ ಈ ಕೇಂದ್ರಗಳು ಕೆಲಸ ಮಾಡಿದೆ. ಆದ್ದರಿಂದ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವ ಎಲ್ಲಾ ಸಾಂತ್ವನ ಕೇಂದ್ರಗಳನ್ನು ಮುಂದುವರಿಸಬೇಕು' ಎಂದು ಒತ್ತಾಯಿಸಿದರು.

ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಮಹಿಳಾ ಸಾಂತ್ವನ ಕೇಂದ್ರದ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪುನರಾರಂಭಕ್ಕೆ ಆಗ್ರಹಿಸಿ ಸಿದ್ದರಾಮಯ್ಯ ಪತ್ರ

ಆರ್ಥಿಕ ಸಂಕಷ್ಟದ ಕಾರಣ ನೀಡಿ ಬಂದ್ ಮಾಡಿರುವ ಸಾಂತ್ವನ ಕೇಂದ್ರಗಳನ್ನು ತಕ್ಷಣ ಪುನರಾರಂಭ ಮಾಡುವಂತೆ ಆಗ್ರಹಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

'ನೊಂದ ಮತ್ತು ತುರ್ತು ಅಗತ್ಯ ಇರುವ ಮಹಿಳೆಯರಿಗೆ ನೆರವು ನೀಡುವುದಕ್ಕಾಗಿ ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೂ, ಆರ್ಥಿಕ ಸಂಕಷ್ಟದ ಕಾರಣ ನೀಡಿ ಸಾಂತ್ವನ ಕೇಂದ್ರಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವುದು ಸರಿಯಲ್ಲ' ಎಂದು ಪತ್ರದಲ್ಲಿ ಆಕ್ಷೇಪಿಸಿದ್ದಾರೆ.

ಈಗಾಗಲೇ ಬಂದ್ ಮಾಡಿರುವ ಸಾಂತ್ವನ ಕೇಂದ್ರಗಳನ್ನು ಪುನರಾರಂಭ ಮಾಡಬೇಕು. ಉಳಿದಿರುವ ಕೇಂದ್ರಗಳನ್ನೂ ಬಂದ್ ಮಾಡುವ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

ಗ್ರಾಮ ಪಂಚಾಯಿತಿ ನೌಕರರ ಪ್ರತಿಭಟನೆ

ಪರೀಕ್ಷೆ ಇಲ್ಲದೆ ನೇರ ಬಡ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ 5 ವರ್ಗಗಳ ನೌಕರರಿಗೆ ಯಾವುದೇ ಪರೀಕ್ಷೆ ನಡೆಸದೆ ಸೇವಾ ಹಿರಿತನವನ್ನಷ್ಟೇ ಆಧರಿಸಿ ಬಡ್ತಿ ನೀಡಬೇಕು ಎಂದು ಆಗ್ರಹಿಸಿ ಗ್ರಾಮ ಪಂಚಾಯಿತಿ ನೌಕರರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದ ಕಡೆಗೆ ಹೊರಟ ನೌಕರರನ್ನು ರೈಲು ನಿಲ್ದಾಣದ ಆವರಣದಲ್ಲೇ ಪೊಲೀಸರು ತಡೆದರು. ಅಲ್ಲಿಯೇ ಧರಣಿ ಮುಂದುವರಿಸಿದ ನೌಕರರು, ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು. ಸೆ.5ರಂದು ಹೊರಡಿಸಿರುವ ಆದೇಶದಲ್ಲಿ ನಿಗದಿಪಡಿಸಿರುವ ಅರ್ಹತಾ ಪರೀಕ್ಷೆ ಕೈಬಿಡಬೇಕು ಎಂದು ಒತ್ತಾಯಿಸಿದರು.

2012 ಮಾ.31ರ ಅಧಿಸೂಚನೆಯಂತೆ 10 ವರ್ಷ ಸೇವೆ ಸಲ್ಲಿಸಿದ ಬಿಲ್ ಕಲೆಕ್ಟರ್, ಬೆರಳಚ್ಚುಗಾರ, ಕ್ಲರ್ಕ್ ಕಂ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಮಾತ್ರ ಒಂದೇ ಜ್ಯೇಷ್ಠತಾ ಪಟ್ಟಿಯಲ್ಲಿ ಸೇರಿಸಬೇಕು. 15ನೇ ಹಣಕಾಸಿನಲ್ಲಿ ಸಂಬಳಕ್ಕೆ ಮೀಸಲಿಟ್ಟ ಮೊತ್ತವನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಲ್ಲ. ಸಂಬಳ ನೀಡಲು ಬೇಕಾದ ಮೊತ್ತವನ್ನು ಅನುದಾನದಿಂದ ಪ್ರತ್ಯೇಕಿಸಿ ಸಿಬ್ಬಂದಿ ಸಂಬಳದ ಖಾತೆಗೆ ಜಮಾ ಮಾಡಬೇಕು ಎಂದು ಮನವಿ ಮಾಡಿದರು.

'ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಕಂಪ್ಯೂಟರ್ ಆಪರೇಟರ್‌ಗಳ ಸೇವಾ ಅವಧಿ ಪರಿಗಣಿಸಿ ನೇರ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಬೇಕು. ತಿದ್ದುಪಡಿ ತರುವಾಗ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್, ಕ್ಲರ್ಕ್, ವಾಟರ್ ಮನ್, ಅಟೆಂಡರ್, ಸ್ವೀಪರ್‌ಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಉತ್ತೀರ್ಣರಾದ ಎಲ್ಲ ನೌಕರರನ್ನು ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'2012ರ ವೃಂದ ಮತ್ತು ನೇಮಕಾತಿ ನಿಯಮದಂತೆ ಗ್ರೇಡ್–2 ಕಾರ್ಯದರ್ಶಿ ಹುದ್ದೆಗಳಿಗೆ ಶೇ 70ರಷ್ಟು, ಲೆಕ್ಕ ಸಹಾಯಕ ಹುದ್ದೆಗಳಿಗೆ ಶೇ 10ರಷ್ಟು ಬಿಲ್ ಕಲೆಕ್ಟರ್‌ಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು. ಕನಿಷ್ಠ ಕೂಲಿ ಪರಿಷ್ಕರಿಸಿ 5 ವರ್ಷಗಳು ಕಳೆದಿದ್ದು, ಬೆಲೆ ಏರಿಕೆ ಆಧರಿಸಿ ಕನಿಷ್ಠ ಕೂಲಿ ಪರಿಷ್ಕರಿಸಿ ಆದೇಶ ಹೊರಡಿಸಬೇಕು. ವೇತನಕ್ಕಾಗಿ ಕೂಡಲೇ ₹700 ಕೋಟಿ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ನಂಜನಗೂಡು, ಚಿಂತಾಮಣಿ, ಬಾದಾಮಿ ತಾಲ್ಲೂಕುಗಳಲ್ಲಿ ಸರಿಯಾಗಿ ವೇತನ ಸಿಗದಿದ್ದರಿಂದ ಬೇಸತ್ತು ಮೂವರು ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪ್ರಕರಣಗಳಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಮೊಕದ್ದಮೆ ದಾಖಲಿಸಿ ಬಂಧಿಸಬೇಕು ಎಂದು ಗ್ರಾಮ ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷ ವಿ.ಪಿ. ಕುಲಕರ್ಣಿ ಮತ್ತು ಪ್ರಧಾನ ಕಾರ್ಯದರ್ಶಿ ಜಿ. ರಾಮಕೃಷ್ಣ ಆಗ್ರಹಿಸಿದರು.

ಬೆಂಗಳೂರಿನ ರೈಲು ನಿಲ್ದಾಣದ ಆವರಣದಲ್ಲಿ ಗ್ರಾಮ ಪಂಚಾಯಿತಿ ನೌಕರರು ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಮತ್ತೊಂದು ಟಿಡಿಆರ್ ಹಗರಣ • ಬಿಬಿಎಂಪಿ ಮುಖ್ಯ ಎಂಜಿನಿಯರ್ ಸೇರಿ ನಾಲ್ವರು ಎಂಜಿನಿಯರ್‌ಗಳು ಶಾಮೀಲು?

ಟಿಡಿಆರ್ ಪಡೆದರು: ಜಾಗವನ್ನೂ ಮಾರಿದರು!

• ಮಂಜುನಾಥ ಹೆಬ್ಬಾರ್

ಬೆಂಗಳೂರು: ಬಿಬಿಎಂಪಿಯಲ್ಲಿ ಅಭಿವೃದ್ಧಿ ಹಕ್ಕು ವರ್ಗಾವಣೆಯ (ಟಿಡಿಆರ್) ಮತ್ತೊಂದು ಅಕ್ರಮ ಬಯಲಿಗೆ ಬಂದಿದೆ. ಪಾಲಿಕೆಯ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಸೇರಿದಂತೆ ನಾಲ್ವರು ಎಂಜಿನಿಯರ್‌ಗಳು ಇದರಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ. ಟಿಡಿಆರ್ ಪಡೆದಿರುವ ಜಾಗವನ್ನೇ ಮಹಿಳೆಯರಿಬ್ಬರು, ₹52 ಲಕ್ಷಕ್ಕೆ ಮಾರಾಟ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.

ಯಲಹಂಕ ವಲಯದ ಯೋಜನಾ ವಿಭಾಗದಲ್ಲಿ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಬಿ.ಎಸ್. ಪ್ರಹ್ಲಾದ್, ಯಲಹಂಕ ವಲಯದ ರಸ್ತೆ ಮೂಲಸೌಕರ್ಯ ವಿಭಾಗದ ಸಹಾಯಕ ಎಂಜಿನಿಯರ್ ವರುಣ್ (ಈ ಹಿಂದೆ ಇದೇ ವಲಯದ ಯೋಜನಾ ವಿಭಾಗದ ಸಹಾಯಕ ಎಂಜಿನಿಯರ್), ಆರ್.ಆರ್.ನಗರ ವಲಯದ ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಜೆ.ಆರ್. ನಂದೀಶ್ (ಈ ಹಿಂದೆ ಯಲಹಂಕ ಯೋಜನಾ ವಿಭಾಗದ ಸಹಾಯಕ ಎಂಜಿನಿಯರ್), ನಿವೃತ್ತ ಎಂಜಿನಿಯರ್ ಜಾಕೀರ್ ಅಲಿ (ಯಲಹಂಕ ಯೋಜನಾ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್) ವಿರುದ್ಧ ತನಿಖೆಗೆ ನಗರಾಭಿವೃದ್ಧಿ ಇಲಾಖೆ ಅನುಮತಿ ನೀಡಿದೆ.

ಟಿಡಿಆರ್ ವಿತರಣೆ ವೇಳೆ ಅಕ್ರಮ ನಡೆದ ಕುರಿತು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ಬಂದಿತ್ತು. ಅಧಿಕಾರಿಗಳು ಅಕ್ರಮ ಎಸಗಿದ್ದು ಮೇಲ್ನೋಟಕ್ಕೆ ಸಾಬೀತಾಗಿದ್ದು, ವಿಚಾರಣೆಗೆ ಪೂರ್ವಾನುಮತಿ ನೀಡುವಂತೆ ಎಸಿಬಿ ಪೊಲೀಸ್ ವರಿಷ್ಠಾಧಿಕಾರಿ (ಕೇಂದ್ರ ಸ್ಥಾನ) ಅವರು ನಗರಾಭಿವೃದ್ಧಿ ಇಲಾಖೆಯನ್ನು ಕೋರಿದ್ದರು.

ಏನಿದು ಪ್ರಕರಣ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ರಸ್ತೆ ನಿರ್ಮಾಣ ಹಾಗೂ ರಸ್ತೆ ವಿಸ್ತರಣೆಗಾಗಿ ಮೈಲನಹಳ್ಳಿ ಗ್ರಾಮದಲ್ಲಿ ಭೂಸ್ವಾಧೀನ ಮಾಡಲು ಪಾಲಿಕೆ ತೀರ್ಮಾನಿಸಿತ್ತು. ಈ ಗ್ರಾಮದ ಸರ್ವೆ ಸಂಖ್ಯೆ 46/4ರ 24 ಗುಂಟೆ ಜಮೀನಿನ ಪೈಕಿ 654 ಚ.ಮೀ. (6.46 ಗುಂಟೆ) ಹಾಗೂ ಅದರಲ್ಲಿದ್ದ ಕಟ್ಟಡವನ್ನು ರಸ್ತೆ ನಿರ್ಮಾಣಕ್ಕಾಗಿ ಪಾಲಿಕೆಗೆ ಬಿಟ್ಟುಕೊಟ್ಟು ಇದಕ್ಕೆ ಪ್ರತಿಯಾಗಿ 1,264.34 ಚ.ಮೀ. ವಿಸ್ತೀರ್ಣಕ್ಕೆ ಅಭಿವೃದ್ಧಿ ಹಕ್ಕು ಪ್ರಮಾಣಪತ್ರ (ಡಿಆರ್‌ಸಿ) ಪಡೆಯುವ ಬಗ್ಗೆ ಪರಿತ್ಯಾಜ್ಯ ಪತ್ರವನ್ನು ಸ್ವತ್ತಿನ ಮಾಲೀಕರಾದ ಶಾಂತಮ್ಮ ಹಾಗೂ ಪಾರ್ವತಮ್ಮ ಅವರು ಪಾಲಿಕೆಗೆ ನೋಂದಣಿ ಮಾಡಿಕೊಟ್ಟಿದ್ದರು. ನಂತರ ಪಾಲಿಕೆಯವರು ಡಿಆರ್‌ಸಿಯನ್ನು ಸ್ವತ್ತಿನ ಮಾಲೀಕರಿಗೆ ವಿತರಿಸಿದ್ದರು. ಮಹಿಳೆಯರಿಬ್ಬರು ಡಿಆರ್‌ಸಿಯನ್ನು ಪ್ರಸಿದ್ಧಿ ವೆಂಚರ್ಸ್‌ಗೆ ₹54.84 ಲಕ್ಷಕ್ಕೆ ಮಾರಿದ್ದರು.

ನಂತರ, ಶಾಂತಮ್ಮ ಹಾಗೂ ಪಾರ್ವತಮ್ಮ ಅವರು ಸರ್ವೆ ಸಂಖ್ಯೆ 46/4ರ 24 ಗುಂಟೆಯನ್ನು ಧನಂಜಯ ಆರ್. ಎಂಬುವರಿಗೆ ₹52 ಲಕ್ಷಕ್ಕೆ ಮಾರಾಟ ಮಾಡಿದ್ದರು. 'ಗ್ರಾಮದ ಸರ್ವೆ ಸಂಖ್ಯೆ 46/1ರಲ್ಲಿ ಹಾದು ಹೋಗಿರುವ ರಸ್ತೆಯನ್ನು ಸರ್ವೆ ಸಂಖ್ಯೆ 46/4ರಲ್ಲಿ ಹಾದು ಹೋಗಿರುವುದಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸ್ವತ್ತಿನ ವಾಸ್ತವ ಮಾಲೀಕತ್ವವನ್ನು ಮರೆ ಮಾಡಿ ಟಿಡಿಆರ್ ವಿತರಿಸಲಾಗಿದೆ. ನಾಲ್ವರು ಎಂಜಿನಿಯರ್‌ಗಳು ಅಧಿಕಾರ ದುರುಪಯೋಗಪಡಿಸಿಕೊಂಡು ಖಾಸಗಿ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ' ಎಂದು ನಗರಾಭಿವೃದ್ಧಿ ಇಲಾಖೆಯು ಆದೇಶದಲ್ಲಿ ತಿಳಿಸಿದೆ.

ಅಕ್ರಮ ನಡೆಸಿದ್ದು ಹೇಗೆ?

- ನಿಯಮಾನುಸಾರವಾಗಿ ಪರಿತ್ಯಾಜ್ಯ ಪತ್ರ ಪಡೆದು ಜಮೀನು ವಶಕ್ಕೆ ತೆಗೆದುಕೊಂಡ ಬಳಿಕವೇ ಟಿಡಿಆರ್ ವಿತರಿಸಬೇಕು. ಆದರೆ, ಬಿಬಿಎಂಪಿ ಅಧಿಕಾರಿಗಳು ಪರಿತ್ಯಾಜ್ಯ ಪತ್ರ (2013ರ ಜನವರಿ) ಪಡೆದುಕೊಳ್ಳುವ ಮುನ್ನವೇ ಟಿಡಿಆರ್ (2012ರ ಡಿ.29) ವಿತರಿಸಿದ್ದಾರೆ.
- ಯೋಜನೆಗೆ ಮೈಲನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 46/1ರ ಜಮೀನು ಅಗತ್ಯವಿತ್ತು. ಆದರೆ, ಪಾಲಿಕೆ ಅಧಿಕಾರಿಗಳು ಸರ್ವೆ ಸಂಖ್ಯೆ 46/4ರ ಜಮೀನಿಗೆ ಟಿಡಿಆರ್ ನೀಡಿದ್ದಾರೆ.
- ಮೈಲನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 46/4ರಲ್ಲಿ 654 ಚ.ಮೀ. ಜಾಗಕ್ಕೆ ಟಿಡಿಆರ್ ನೀಡಿದ್ದರೂ ಈ ಜಾಗವನ್ನು ಪಾಲಿಕೆ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿಲ್ಲ. ರಸ್ತೆ ವಿಸ್ತರಣೆಗೆ ಶಾಂತಮ್ಮ ಹಾಗೂ ಪಾರ್ವತಮ್ಮ ಜಮೀನು ಅಗತ್ಯವಿಲ್ಲದಿದ್ದರೂ ಟಿಡಿಆರ್ ನೀಡಲಾಗಿದೆ. ಶಾಂತಮ್ಮ ಹಾಗೂ ಪಾರ್ವತಮ್ಮ ಅವರು ಟಿಡಿಆರ್ ಮಾರಾಟ ಮಾಡಿ ₹54.84 ಲಕ್ಷ ಲಾಭ ಮಾಡಿಕೊಂಡಿದ್ದಾರೆ. ನಂತರ ಅದೇ ಜಾಗವನ್ನು ₹52 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ.

ಪ್ರಕರಣ ಮುಚ್ಚಿ ಹಾಕುವ ಯತ್ನ?

ಟಿಡಿಆರ್ ಹಗರಣ ಸಂಬಂಧ ಜೆ.ಆರ್. ನಂದೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಪಾಲಿಕೆಯ ಅಂದಿನ ಉಪ ಆಯುಕ್ತರಾದ (ಆಡಳಿತ) ಶಿಲ್ಪಾ 2014ರಲ್ಲಿ ಆದೇಶ ಹೊರಡಿಸಿದ್ದರು. ಬಳಿಕ, ನಂದೀಶ್ ಅವರಿಂದ ಲೋಪವಾಗಿಲ್ಲ ಎಂದು ಶಿಲ್ಪಾ ಅವರೇ ಆರೋಪಮುಕ್ತ ಮಾಡಿದ್ದರು. ಈ ಮೂಲಕ ಭಾರಿ ಮೊತ್ತದ ಟಿಡಿಆರ್ ಹಗರಣವನ್ನು ಮುಚ್ಚಿ ಹಾಕಲು ಯತ್ನಿಸಲಾಗಿತ್ತು. ಬಳಿಕ ನಂದೀಶ್ ಅವರಿಗೆ ದೊಡ್ಡ ದೊಡ್ಡ ಯೋಜನೆಗಳಲ್ಲಿ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡಲಾಗಿತ್ತು ಎಂದು ನಗರಾಭಿವೃದ್ಧಿ ಇಲಾಖೆಯ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಶಿವಾನಂದಸ್ವಾಮಿ, ರಾಮಮೂರ್ತಿಗೆ 'ಕರ್ನಾಟಕ ಕಲಾಶ್ರೀ' ಗೌರವ

ಪ್ರಜಾವಾಣಿ ವಾರ್ತೆ

ಎಸ್.ಎಸ್.ಶಿವಾನಂದಸ್ವಾಮಿ



ಎಂ.ಆರ್.ರಾಮಮೂರ್ತಿ

ಬೆಂಗಳೂರು: ಕಲಾವಿದರಾದ ಎಸ್.ಎಸ್.ಶಿವಾನಂದಸ್ವಾಮಿ ಹಾಗೂ ಎಂ.ಆರ್.ರಾಮಮೂರ್ತಿ ಅವರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನೀಡುವ 2021–22ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಶಿವಮೊಗ್ಗದವರಾದ ಶಿವಾನಂದ ಅವರಿಗೆ ಕಥಾ ಕೀರ್ತನಾ ವಿಭಾಗದಲ್ಲಿ ಹಾಗೂ ಬೆಂಗಳೂರಿನ ರಾಮಮೂರ್ತಿಯವರಿಗೆ ಗಮಕ ವಾಚನ ವಿಭಾಗದಲ್ಲಿ 'ಗೌರವ ಪ್ರಶಸ್ತಿ' ಸಂದಿದೆ. ಇದು ತಲಾ ₹50 ಸಾವಿರ ನಗದು ಹಾಗೂ ನೆನಪಿನ ಕಾಣಿಕೆ ಒಳಗೊಂಡಿದೆ. ವಾರ್ಷಿಕ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹25 ಸಾವಿರ ನಗದು ಹಾಗೂ ನೆನಪಿನ ಕಾಣಿಕೆ ಸಿಗಲಿದೆ.

ಡಿ.ಕೇಶವ್, ಸ್ವಿಟ್ಜರ್‌ಲೆಂಡ್ (ನೃತ್ಯ) ವಿದೇಶಿ ಕನ್ನಡ ಕಲಾವಿದರು

'2020–21ನೇ ಸಾಲಿನ ಪ್ರಶಸ್ತಿಯನ್ನು ಈಗಾಗಲೇ ಪ್ರಕಟಿಸಲಾಗಿದ್ದು, ಕೋವಿಡ್‌ನಿಂದಾಗಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆದಿರಲಿಲ್ಲ. ಹೀಗಾಗಿ 2020–21 ಮತ್ತು 2021–22ನೇ ಸಾಲಿನ ಪ್ರಶಸ್ತಿ ಪುರಸ್ಕೃತರಿಗೆ ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಸಮಾರಂಭ ಏರ್ಪಡಿಸಲು ತೀರ್ಮಾನಿಸಲಾಗಿದೆ' ಎಂದು ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ತಿಳಿಸಿದ್ದಾರೆ.

ಕರ್ನಾಟಕ ಸಂಗೀತ

ಎಚ್.ಕೆ.ಬಾಲಕೃಷ್ಣ ರಾವ್, ಹೊಸನಗರ (ಹಾಡುಗಾರಿಕೆ)

ಎಚ್.ಎಸ್.ನಾಗರಾಜ್ ಶಿವಮೊಗ್ಗ (ಹಾಡುಗಾರಿಕೆ)

ಟಿ.ಎಸ್.ಚಂದ್ರಶೇಖರ್, ಬೆಂಗಳೂರು (ಮೃದಂಗ)

ರಂಗಸ್ವಾಮಿ ಚಾಮರಾಜನಗರ (ನಾದಸ್ವರ)

ಹಿಂದೂಸ್ತಾನಿ ಸಂಗೀತ

ಅಪ್ಪಣ್ಣಾ ರಾಮಚಂದ್ರ ಶಿರೋಳ, ಬಾಗಲಕೋಟೆ (ಗಾಯನ)



ಬಾಲಚಂದ್ರ ನಾಕೋಡ್ ಹುಬ್ಬಳ್ಳಿ (ಗಾಯನ)

ದೇವೇಂದ್ರಕುಮಾರ ಪತ್ತಾರ್ (ಗಾಯನ)

ಡಿ.ಎಸ್.ಬಾಳೇಕರ್ ಬೆಳಗಾವಿ (ಸಿತಾರ)

ಕಮಲಾಕ್ಷ ಆಚಾರ್ ಬೆಳ್ತಂಗಡಿ (ನೃತ್ಯ)

ಪದ್ಮಜಾ ಸುರೇಶ್ ಬೆಂಗಳೂರು (ನೃತ್ಯ)

ವಿದ್ಯಾ ರವಿಶಂಕರ್ ಬೆಂಗಳೂರು (ನೃತ್ಯ)



ಬಾಲಸುಬ್ರಹ್ಮಣ್ಯಂ ಶರ್ಮ (ನೃತ್ಯ ಸಂಗೀತ)

ಇಂದ್ರಾಣಿ ಅನಂತರಾಂ ಮೈಸೂರು (ಸುಗಮ ಸಂಗೀತ)

ವಸಂತಕುಮಾರ ಕುಂಬ್ಳೆ ಕಾಸರಗೋಡು (ಕೀಬೋರ್ಡ್)

ಕೆ.ವಿ.ಚಂದ್ರಮೌಳಿ ಸಖರಾಯಪಟ್ಟಣ (ಗಮಕ ವ್ಯಾಖ್ಯಾನ)

ದೊಡ್ಡಕಲ್ಲಸಂದ್ರ ಮೆಟ್ರೊ ನಿಲ್ದಾಣ ಬಳಿಯ ರಸ್ತೆಯಲ್ಲಿ ನಿಂತಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಗಾಳಿ ಸಹಿತ ಮಳೆ; ಉರುಳಿಬಿದ್ದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಹಲವೆಡೆ ಸೋಮವಾರ ಉತ್ತಮ ಮಳೆಯಾಯಿತು. ಗಾಳಿಯೂ ಜೋರಾಗಿ ಬೀಸಿದ್ದರಿಂದ ನಗರದ ಎರಡು ಕಡೆ ಮರಗಳು ಉರುಳಿಬಿದ್ದಿದ್ದವು.

ಕೆಲದಿನಗಳಿಂದ ನಿತ್ಯವೂ ಸಂಜೆ–ರಾತ್ರಿ ನಗರದಲ್ಲಿ ಮಳೆ ಆಗುತ್ತಿದೆ. ಭಾನುವಾರವೂ ಸಂಜೆ ಜೋರು ಮಳೆಯಾಗಿತ್ತು. ಹೀಗಾಗಿ, ನಗರದಲ್ಲಿ ತಂಪಿನ ವಾತಾವರಣ ಮುಂದುವರಿದಿದೆ.

ಸೋಮವಾರವೂ ಬೆಳಿಗ್ಗೆ ಕೆಲ ನಿಮಿಷ ಬಿಸಿಲು ಕಾಣಿಸಿಕೊಂಡಿತ್ತು. ನಂತರ, ಮೋಡ ಕವಿದ ವಾತಾವರಣ ಕಂಡುಬಂತು. ಮಧ್ಯಾಹ್ನವೇ ಹಲವೆಡೆ ಜೋರು ಶುರುವಾಯಿತು. ರಾತ್ರಿಯೂ ಕೆಲವೆಡೆ ಮಳೆ ಸುರಿಯಿತು.

ಎಂ.ಜಿ. ರಸ್ತೆಯ ಮೆಯೊಹಾಲ್ ಬಳಿ ಮರವೊಂದು ಉರುಳಿ, ಕಾರಿನ ಮೇಲೆ ಬಿದ್ದಿತ್ತು. ಕಾರಿನ ಚಾವಣಿ ಭಾಗ ಜಖಂಗೊಂಡಿತು. ಅಗ್ನಿಶಾಮಕ ದಳದ ಸಿಬ್ಬಂದಿ, ಮರ ತೆರವು ಮಾಡಿದರು.

ಗೊರಗುಂಟೆಪಾಳ್ಯ ಬಳಿಯೂ ರಸ್ತೆ ಮೇಲೆಯೇ ಮರವೊಂದು ಬಿದ್ದಿತ್ತು. ವಾಹನಗಳ ಸಂಚಾರಕ್ಕೆ ಕೆಲ ಹೊತ್ತು ತೊಂದರೆ ಉಂಟಾಯಿತು. ಮರ ತೆರವುಗೊಳಿಸಿದ ಮೇಲೆ ವಾಹನಗಳ ಸಂಚಾರ ಸುಗಮಗೊಂಡಿತು.

ಬಹುತೇಕ ರಸ್ತೆಗಳ ಮೇಲೆಯೇ ನೀರು ಹರಿಯಿತು. ಹರಿಯುವ ನೀರಿನಲ್ಲೇ ವಾಹನಗಳು ಸಂಚರಿಸಿದವು. ಮೆಜೆಸ್ಟಿಕ್ ಹಾಗೂ ಶಿವಾನಂದ ವೃತ್ತ ಬಳಿಯ ಕೆಳಸೇತುವೆಯಲ್ಲೂ ಕೆಲ ಹೊತ್ತು ನೀರು ಹರಿಯಿತು.

ಶಿವಾಜಿನಗರ, ಅಶೋಕನಗರ, ಎಂ.ಜಿ.ರಸ್ತೆ, ಎಚ್‌ಎಎಲ್, ಕೋರಮಂಗಲ, ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಬನಶಂಕರಿ, ಬಸವನಗುಡಿ, ಹನುಮಂತನಗರ, ಗಿರಿನಗರ, ರಾಜರಾಜೇಶ್ವರಿನಗರ, ವಿಜಯನಗರ, ಬಸವೇಶ್ವರ ನಗರ, ಯಶವಂತಪುರ, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ಮಹಾಲಕ್ಷ್ಮಿ ಲೇಔಟ್, ಪೀಣ್ಯ, ಮಲ್ಲೇಶ್ವರ, ಶ್ರೀರಾಮಪುರ, ಗಾಯತ್ರಿನಗರ, ಶೇಷಾದ್ರಿಪುರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಜೋರು ಮಳೆ ಇತ್ತು.

'ನಗರದಲ್ಲಿ ಕೆಲದಿನಗಳಿಂದ ಉತ್ತಮ ಮಳೆಯಾಗುತ್ತಿದೆ. ಕೆಲವೊಮ್ಮೆ ಗಾಳಿ ಜೋರಾಗಿ ಬೀಸಿದಾಗ ಮರಗಳು ಉರುಳುತ್ತಿದ್ದು, ಮರದ ಕೊಂಬೆಗಳು ರಸ್ತೆಯಲ್ಲೆಲ್ಲ ಬೀಳುತ್ತಿವೆ. ಈ ಬಗ್ಗೆ ದೂರುಗಳು ಬರುತ್ತಿದ್ದಂತೆ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿ ತೆರವು ಮಾಡಿಸಲಾಗುತ್ತಿದೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಕೇಂದ್ರ ತಂಡಕ್ಕೆ ರೈತರ ತಡೆ

ಬಾಗಲಕೋಟೆ: 'ನಮ್ಮ ಅಹವಾಲು ಕೇಳಿ ಮುಂದಕ್ಕೆ ತೆರಳಿ' ಎಂದು ಆಗ್ರಹಿಸಿ ಮುಧೋಳ ಸಮೀಪದ ಚಿಚಖಂಡಿ ಗ್ರಾಮದ ರೈತರು, ಸೋಮವಾರ ಪ್ರವಾಹ ಹಾನಿ ಅಧ್ಯಯನಕ್ಕೆ ಬಂದಿದ್ದ ಕೇಂದ್ರದ ತಂಡದ ವಾಹನಕ್ಕೆ ಅಡ್ಡ ಹಾಕಿದರು. ಮನವೊಲಿಸಲು ಮಧ್ಯಪ್ರವೇಶಿಸಿದ ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ. ರಾಜೇಂದ್ರ ಅವರೊಂದಿಗೆ ವಾಗ್ವಾದ ನಡೆಸಿದರು.

'ನೀವು (ಕೇಂದ್ರ ತಂಡ) ಬಂದು ಹೋಗುವ ಖರ್ಚಿನಷ್ಟು ಮೊತ್ತದ ಪರಿಹಾರವೂ ನಮಗೆ ಸಿಗುವುದಿಲ್ಲ. 2019ರಲ್ಲಿ ಘಟಪ್ರಭಾ ನದಿ ಪ್ರವಾಹದಿಂದ ಆಗಿದ್ದ ಹಾನಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ.' ಎಂದು ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದರು.

ಐಐಎಸ್‌ಸಿ ವಿಜ್ಞಾನಿಗಳಿಂದ ಸಾಧನ ಅಭಿವೃದ್ಧಿ

ಅನ್ಯಗ್ರಹಕ್ಕೆ ಸೂಕ್ಷ್ಮಜೀವಿ ಒಯ್ಯುವ 'ಚಿಪ್'

ಪ್ರಜಾವಾಣಿ ವಾರ್ತೆ



ಲ್ಯಾಬ್ ಆನ್ ಚಿಪ್

ಬೆಂಗಳೂರು: ಭೂಮಿಯಿಂದ ಲಕ್ಷಾಂತರ ಕಿ.ಮೀ ದೂರದಲ್ಲಿರುವ ಮಂಗಳಗ್ರಹಕ್ಕೆ ಬ್ಯಾಕ್ಟೀರಿಯಾದಂತಹ ಸೂಕ್ಷ್ಮಜೀವಿಗಳನ್ನು ಒಯ್ದು ಅಲ್ಲಿ ಅವುಗಳನ್ನು ಬಿಟ್ಟು ಅಧ್ಯಯನ ಮಾಡಲು ಸಾಧ್ಯವಾಗುವ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) 'ಲ್ಯಾಬ್ ಆನ್ ಚಿಪ್' ಎಂಬ ಪುಟ್ಟ ಉಪಕರಣವನ್ನು ಸಿದ್ಧಪಡಿಸಿದೆ.

ಇಸ್ರೊ ಕೈಗೊಳ್ಳಲಿರುವ ಎರಡನೇ ಮಂಗಳಯಾನದಲ್ಲಿ ಈ ರೀತಿಯ ಸೂಕ್ಷ್ಮಜೀವಿಗಳನ್ನು ಮಂಗಳ ಗ್ರಹಕ್ಕೆ ಕಳುಹಿಸಲು ಸಿದ್ಧತೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

'ಬಾಹ್ಯಾಕಾಶ ಯಾನದ ವೇಳೆ ನೌಕೆಯಲ್ಲೇ ಬ್ಯಾಕ್ಟೀರಿಯಾಗಳನ್ನು 'ಲ್ಯಾಬ್ ಆನ್ ಚಿಪ್'ನಲ್ಲಿ ಬೆಳೆಸಲಾಗುತ್ತದೆ. ಬ್ಯಾಕ್ಟೀರಿಯಾ ಬೆಳವಣಿಗೆಯನ್ನು ಭೂಮಿಯಿಂದಲೇ ನಿಯಂತ್ರಿಸಲಾಗುತ್ತದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಕೌಶಿಕ್ ವಿಶ್ವನಾಥನ್ ತಿಳಿಸಿದ್ದಾರೆ.

'ಬ್ಯಾಕ್ಟೀರಿಯಾಗಳನ್ನು ಬೆಳೆಸಲು ಬೆಚ್ಚಗಿನ ವಾತಾವರಣ ಇರಬೇಕಾಗುತ್ತದೆ. ಬಾಹ್ಯಾಕಾಶ ಯಾನದಲ್ಲಿ ಪುಟ್ಟ ಗಾತ್ರದ ಲ್ಯಾಬ್ ಆನ್ ಚಿಪ್ ಈ ಅಗತ್ಯವನ್ನು ಪೂರೈಸಬಲ್ಲದು' ಎಂದಿದ್ದಾರೆ.

ಈ ಉಪಕರಣದಲ್ಲಿ (ಲ್ಯಾಬ್ ಆನ್ ಚಿಪ್) ಒಮ್ಮೆಗೇ 12 ವಿಭಿನ್ನ ರೀತಿಯ ಬ್ಯಾಕ್ಟೀರಿಯಾಗಳನ್ನು ಬೆಳೆಸಬಹುದಾಗಿದೆ. ಇದಕ್ಕೆ ಒಂದು ವಾಟ್ ವಿದ್ಯುತ್ ಸಾಕಾಗುತ್ತದೆ.

ಪುಟ್ಟ, ಪುಟ್ಟ ಕೆಲವೇ ಮಿಲಿ ಮೀಟರ್ ಅಗಲದ ಪ್ಲಾಸ್ಟಿಕ್ ಕೋಣೆಗಳನ್ನು ಲ್ಯಾಬ್ ಆನ್ ಚಿಪ್ ಒಳಗೊಂಡಿರುತ್ತದೆ. ಇದರ ತಳದಲ್ಲಿ ಎಲ್‌ಇಡಿ ದೀಪವನ್ನೂ, ಮೇಲ್ಭಾಗದಲ್ಲಿ ಬೆಳಕು ತಗುಲಿದಾಗ ಅದರ ಪ್ರಖರತೆಗೆ ತಕ್ಕಂತೆ ವಿದ್ಯುತ್ ಉತ್ಪಾದಿಸಬಲ್ಲ ಫೋಟೋಡಯೋಡ್ ಸಂವೇದಕವನ್ನೂ ಜೋಡಿಸಲಾಗಿದೆ. ಇವೆರಡರ ನಡುವೆ ಇರುವ ಕೋಣೆಯಲ್ಲಿ ಬ್ಯಾಕ್ಟೀರಿಯಾಗಳು ಬೆಳೆಯಲು ಬೇಕಾದ ಸಕ್ಕರೆ ದ್ರಾವಣವನ್ನು ಇಡಬಹುದು. ಈ ದ್ರಾವಣಕ್ಕೆ ಬೇಕಾದ ಬ್ಯಾಕ್ಟೀರಿಯಾಗಳನ್ನು ಸೇರಿಸುವ ವ್ಯವಸ್ಥೆಯೂ ಇದೆ.

ಬ್ಯಾಕ್ಟೀರಿಯಾಗಳು ಬೆಳೆದಂತೆ ಎಲ್‌ಇಡಿ ದೀಪದಿಂದ ಹರಿಯುವ ಬೆಳಕಿನ ಪ್ರಖರತೆ ಕುಂದುತ್ತದೆ. ಇದನ್ನು ವಿಶ್ಲೇಷಿಸುವ ಮೂಲಕ ಅವುಗಳ ಬೆಳವಣಿಗೆ ಹೇಗಿದೆ ಎಂದು ಅರ್ಥ ಮಾಡಿಕೊಳ್ಳಬಹುದು. ಹೀಗೆ ದೂರನಿಯಂತ್ರಕದಿಂದಲೇ ಬೇಕೆಂದ ಬ್ಯಾಕ್ಟೀರಿಯಾವನ್ನು ಅಗತ್ಯ ಪೋಷಕಾಂಶಗಳನ್ನು ನೀಡಿ ಬೆಳೆಸಿ, ಪರೀಕ್ಷಿಸುವ ವ್ಯವಸ್ಥೆ ಈ ಸಾಧನದಲ್ಲಿದೆ.

ಕೋಣೆಗಳಲ್ಲಿಟ್ಟ ಬ್ಯಾಕ್ಟೀರಿಯಾ ಸೋರದಂತೆ ಭದ್ರವಾಗಿಯೂ, ಎಲ್‌ಇಡಿ ದೀಪದ ಪ್ರಖರತೆಯಿಂದಾಗಿ ಹೆಚ್ಚು ಬಿಸಿಯಾಗದಂತೆಯೂ, ಇದರಿಂದಾಗಿ ಬ್ಯಾಕ್ಟೀರಿಯಾಗಳ ಬೆಳವಣಿಗೆಗೆ ಅಡ್ಡಿಯಾಗದಂತೆ ಎಚ್ಚರ ವಹಿಸಲಾಗಿದೆ. ಈ ಸಾಧನದಲ್ಲಿ ಸ್ಪೋರೋಸಾರ್ಸಿನಾ ಪ್ಯಾಶ್ಚುರೈ ಎನ್ನುವ ಬ್ಯಾಕ್ಟೀರಿಯಾ ಬೆಳೆಸಿ ಪರೀಕ್ಷಿಸಿ ನೋಡಲಾಗಿದೆ ಎಂದು ಕೌಶಿಕ್ ವಿಶ್ವನಾಥನ್ ತಿಳಿಸಿದ್ದಾರೆ.

ವ್ಯೋಮದಲ್ಲಿರುವ ಒತ್ತಡಗಳ ವ್ಯತ್ಯಾಸ, ವ್ಯೋಮನೌಕೆಯ ಅಲುಗಾಟ ಸಹಿಸಿಕೊಳ್ಳುವಂತೆ ಮಾಡಿದರೆ ಮುಂದಿನ ಮಂಗಳಯಾನ ಅಥವಾ ಇತರ ಬಾಹ್ಯಾಕಾಶ ಯಾನದಲ್ಲಿ ಈ ಜೀವಿಗಳ ಪರೀಕ್ಷೆ ನಡೆಸಬಹುದು. ಅಲ್ಲದೆ, ಬೇರೆ ಜಂತುಗಳನ್ನೂ ಬೆಳೆಸಲು ಸಹಾಯಕವಾಗುತ್ತದೆ ಎನ್ನುತ್ತಾರೆ.

'ಲ್ಯಾಬ್ ಆನ್ ಚಿಪ್' ಅನ್ನು ಭಾರತೀಯ ವಿಜ್ಞಾನ ಸಂಸ್ಥೆಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಕೌಶಿಕ್ ವಿಶ್ವನಾಥನ್ ಮತ್ತು ಅಲೋಕ್ ಕುಮಾರ್ ಅಭಿವೃದ್ಧಿಪಡಿಸಿದ್ದಾರೆ.

ಆನ್‌ಲೈನ್ ಜೂಜು ನಿಷೇಧಕ್ಕೆ ತಿದ್ದುಪಡಿ ಮಸೂದೆ

ಜೂಜು: ಜಾಮೀನುರಹಿತ ಅಪರಾಧ

ಬೆಂಗಳೂರು: ಹಣವನ್ನು ಪಣವಾಗಿರಿಸಿ ಆಡುವ ಆನ್‌ಲೈನ್ ಗೇಮ್‌ಗಳೂ ಸೇರಿದಂತೆ ಎಲ್ಲ ಬಗೆಯ ಜೂಜಾಟವನ್ನೂ ಜಾಮೀನುರಹಿತ ಅಪರಾಧ ಎಂದು ಪರಿಗಣಿಸುವ ಪ್ರಸ್ತಾವ ಕರ್ನಾಟಕ ಪೊಲೀಸ್ ಕಾಯ್ದೆಯ ತಿದ್ದುಪಡಿ ಮಸೂದೆಯಲ್ಲಿದೆ. ಜೂಜಾಟದಲ್ಲಿ ಭಾಗಿಯಾದವರಿಗೆ ವಿಧಿಸುವ ಶಿಕ್ಷೆ ಮತ್ತು ದಂಡವನ್ನು ಹಲವು ಪಟ್ಟು ಹೆಚ್ಚಿಸುವ ಪ್ರಸ್ತಾವವೂ ಇದೆ.

ಆನ್‌ಲೈನ್ ಜೂಜಾಟ ನಿಷೇಧಿಸುವುದಕ್ಕಾಗಿ 'ಕರ್ನಾಟಕ ಪೊಲೀಸ್ ಕಾಯ್ದೆ –1963'ಕ್ಕೆ ತಿದ್ದುಪಡಿ ತರಲಾಗುತ್ತಿದೆ. ತಿದ್ದುಪಡಿ ಮಸೂದೆಗೆ ಸಚಿವ ಸಂಪುಟ ಸಭೆ ಶನಿವಾರ ಒಪ್ಪಿಗೆ ನೀಡಿದೆ. ಹಣವನ್ನು ಪಣವಾಗಿರಿಸಿ ಆಡುವ ಆನ್‌ಲೈನ್ ಗೇಮ್‌ಗಳನ್ನೂ ನಿಷೇಧಿತ ಜೂಜು ಚಟುವಟಿಕೆಯ ವ್ಯಾಪ್ತಿಯಲ್ಲಿ ಸೇರಿಸುವ ಉಲ್ಲೇಖ ಮಸೂದೆಯಲ್ಲಿದೆ. 'ಸ್ಕಿಲ್ ಗೇಮ್'ಗಳ ಹೆಸರಿನಲ್ಲಿ ಜೂಜಾಡುವುದನ್ನೂ ಅಪರಾಧ ಎಂದು ಪರಿಗಣಿಸಲು ಉದ್ದೇಶಿಸಲಾಗಿದೆ.

ಕಂಪ್ಯೂಟರ್, ಮೊಬೈಲ್ ಅಪ್ಲಿಕೇಷನ್ ಸೇರಿದಂತೆ ಯಾವುದೇ ಸಾಧನವನ್ನು ಬಳಸಿಕೊಂಡು ಆನ್‌ಲೈನ್ ಮೂಲಕ ಜೂಜಾಡುವುದನ್ನೂ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಮನರಂಜನಾ ಕ್ಲಬ್‌ಗಳು, ಗೇಮಿಂಗ್ ಹೌಸ್‌ಗಳಲ್ಲಿ ಈ ಚಟುವಟಿಕೆ ನಡೆಸುವುದನ್ನೂ ಅಪರಾಧ ಎಂದು ಪರಿಗಣಿಸುವ ಪ್ರಸ್ತಾವ ತಿದ್ದುಪಡಿ ಮಸೂದೆಯಲ್ಲಿದೆ.

ನೇರವಾಗಿ ನಗದು ಹೂಡಿಕೆ ಮಾಡಿ, ಆನ್‌ಲೈನ್ ಮೂಲಕ ಹಣ ವರ್ಗಾಯಿಸಿ, ಹಣವನ್ನು ಪಾವತಿಸಿ ಪಡೆದ ಟೋಕನ್ ಬಳಸಿ, ಡಿಜಿಟಲ್ ಅಥವಾ ವರ್ಚ್ಯುಯಲ್ ಕರೆನ್ಸಿ ಬಳಸಿಕೊಂಡು ಜೂಜಾಡುವುದೂ ನಿಷೇಧಿತ ಚಟುವಟಿಕೆಗಳ ವ್ಯಾಪ್ತಿಯಲ್ಲಿ ಬರಲಿದೆ. ರಾಜ್ಯದ ಒಳಗೆ ಅಥವಾ ಹೊರಗಿನಿಂದ ನಡೆಯುವ ಆನ್‌ಲೈನ್ ಜೂಜಾಟವನ್ನೂ ಕಾಯ್ದೆಯ ವ್ಯಾಪ್ತಿಗೆ ತರುವ ಪ್ರಸ್ತಾವವಿದೆ.

ಯಾವುದೇ ಬಗೆಯ ಜೂಜಾಟದಲ್ಲಿ ಭಾಗಿಯಾಗುವುದು, ಜೂಜು ಕೇಂದ್ರ ತೆರೆಯುವುದು, ಅದಕ್ಕೆ ಸಹಾಯ ಮಾಡುವುದು, ಸಾರ್ವಜನಿಕ ಸ್ಥಳದಲ್ಲಿ ಜೂಜಾಟ ನಡೆಸುವುದು, ಜೂಜಾಟದ ಆರೋಪದಲ್ಲಿ ಗಡೀಪಾರು ಮಾಡಲಾದ ಆರೋಪಿ ಪುನಃ ಮರಳಿ ಬರುವುದು ಮತ್ತಿತರ ಅಪರಾಧ ಕೃತ್ಯಗಳಿಗೆ ವಿಧಿಸುತ್ತಿದ್ದ ಶಿಕ್ಷೆ ಮತ್ತು ದಂಡವನ್ನು ಹಲವು ಪಟ್ಟು ಹೆಚ್ಚಿಸುವ ಪ್ರಸ್ತಾವವುಳ್ಳ ತಿದ್ದುಪಡಿ ಮಸೂದೆಯ ಕರಡಿಗೆ ಸಂಪುಟ ಸಭೆ ಅನುಮೋದನೆ ನೀಡಿದೆ.

ಕುದುರೆ ರೇಸ್‌ಗೆ ವಿನಾಯಿತಿ

ಕುದುರೆ ರೇಸ್‌ನ ಮೇಲೆ ಹಣವನ್ನು ಪಣವಾಗಿಟ್ಟು ನಡೆಸುವ ಬಾಜಿ, ಬೆಟ್ಟಿಂಗ್ ಮತ್ತು ಲಾಟರಿ ಚಟುವಟಿಕೆಗಳನ್ನು ನಿಷೇಧಿತ ಜೂಜಾಟದ ವ್ಯಾಪ್ತಿಯಿಂದ ಹೊರಗಿಡುವ ಪ್ರಸ್ತಾವ ಕರ್ನಾಟಕ ಪೊಲೀಸ್ ಕಾಯ್ದೆಯ ತಿದ್ದುಪಡಿ ಮಸೂದೆಯಲ್ಲಿದೆ.

ಯಾವ ಅಪರಾಧಕ್ಕೆ ಏನು ಶಿಕ್ಷೆ?

- ಜೂಜು ಕೇಂದ್ರ ತೆರೆಯುವುದು, ಅದಕ್ಕಾಗಿ ಕಟ್ಟಡ ಬಾಡಿಗೆಗೆ ನೀಡುವುದು, ಜೂಜು ಕೇಂದ್ರದ ಮೇಲ್ವಿಚಾರಣೆ ನಡೆಸುವವರು, ಜೂಜಾಟಕ್ಕೆ ಸಾಲ ನೀಡುವವರಿಗೆ ಮೂರು ವರ್ಷಗಳವರೆಗೆ ಜೈಲು ಮತ್ತು ₹ 1 ಲಕ್ಷದವರೆಗೆ ದಂಡ.
- ಮೇಲಿನ ಆರೋಪಗಳ ಅಡಿಯಲ್ಲಿ ವಿಚಾರಣೆಗೆ ಗುರಿಪಡಿಸಲೇಬೇಕಾದ ವಿಶೇಷ ಕಾರಣಗಳು ಇಲ್ಲದಿರುವ ಸಂದರ್ಭದಲ್ಲಿ ಅಪರಾಧ ಸಾಬೀತಾದರೆ ಆರು ತಿಂಗಳವರೆಗೆ ಜೈಲು ಮತ್ತು ₹ 10,000 ದಂಡ.
- ಯಾವುದೇ ಬಗೆಯ ಜೂಜು ಕೇಂದ್ರಗಳಲ್ಲಿ ಜೂಜಾಟದಲ್ಲಿ ತೊಡಗಿರುವವರಿಗೆ ಆರು ತಿಂಗಳ ಜೈಲು ಶಿಕ್ಷೆ ಮತ್ತು ₹ 10,000 ದಂಡ.
- ಸಾರ್ವಜನಿಕ ಸ್ಥಳದಲ್ಲಿ ಜೂಜಾಡುತ್ತಿದ್ದವರಿಗೆ ಒಂದು ವರ್ಷ ಜೈಲು ಮತ್ತು ₹ 20,000 ದಂಡ.
- ಜೂಜಾಡುವವರಿಗೆ ಸಾಲ ಸೇರಿದಂತೆ ಎಲ್ಲ ರೀತಿಯ ನೆರವು ನೀಡುವವರಿಗೆ ಮೊದಲ ಬಾರಿಯ ಅಪರಾಧಕ್ಕೆ ಕನಿಷ್ಠ ಆರು ತಿಂಗಳ ಜೈಲು ಮತ್ತು ₹ 10,000 ದಂಡ. ಎರಡನೇ ಅಪರಾಧಕ್ಕೆ ಕನಿಷ್ಠ ಒಂದು ವರ್ಷ ಜೈಲು ಮತ್ತು ₹ 15,000 ದಂಡ. ಮೂರನೇ ಅಪರಾಧಕ್ಕೆ ಕನಿಷ್ಠ 18 ತಿಂಗಳ ಜೈಲು ಮತ್ತು ₹ 20,000 ದಂಡ.
- ಜೂಜಾಡುವ ಉದ್ದೇಶಕ್ಕಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸೇರಿರುವ ಅಪರಾಧಕ್ಕೆ ಆರು ತಿಂಗಳ ಜೈಲು ಮತ್ತು ₹ 10,000 ದಂಡ.
- ಜೂಜಾಟದ ಅಪರಾಧ ಸಾಬೀತಾಗಿ ಗಡೀಪಾರು ಮಾಡಿದ ಆದೇಶ ಉಲ್ಲಂಘಿಸಿ ಆ ಪ್ರದೇಶವನ್ನು ಮರು ಪ್ರವೇಶ ಮಾಡಿದರೆ ₹ 25,000ದಿಂದ ₹ 1 ಲಕ್ಷದವರೆಗೆ ದಂಡ.

ಅಕ್ರಮ: 13 ಪೊಲೀಸರ ಎತ್ತಂಗಡಿ

ಬೆಂಗಳೂರು: ಠಾಣೆ ವ್ಯಾಪ್ತಿಯಲ್ಲಿ ತಮಗೆ ವಹಿಸಿದ್ದ ಕೆಲಸವನ್ನು ಮಾಡದ ಹಾಗೂ ಕೆಲ ಅಕ್ರಮಗಳಲ್ಲಿ ಆರೋಪಿಗಳ ಜೊತೆ ಕೈ ಜೋಡಿಸಿ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಪಶ್ಚಿಮ ವಿಭಾಗದ 13 ಪೊಲೀಸರನ್ನು ಎತ್ತಂಗಡಿ ಮಾಡಲಾಗಿದೆ.

ಕಾಟನ್‌ಪೇಟೆ ಠಾಣೆಯ ಮೂವರು ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ), ಹೆಡ್ ಕಾನ್‌ಸ್ಟೆಬಲ್ ಹಾಗೂ ಚಾಮರಾಜಪೇಟೆ ಠಾಣೆಯ ಏಳು ಹೆಡ್ ಕಾನ್‌ಸ್ಟೆಬಲ್, ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ನಗರದ ಬೇರೆ ವಿಭಾಗಗಳ ಠಾಣೆಗಳಿಗೆ ವರ್ಗಾಯಿಸಲಾಗಿದೆ.

'ಪಶ್ಚಿಮ ವಿಭಾಗದ ಪೊಲೀಸರು ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಆದರೆ, ಕೆಲ ಪೊಲೀಸರು ಆರೋಪಿಗಳ ಜೊತೆ ಸಂಪರ್ಕವಿಟ್ಟುಕೊಂಡು ಮಾಹಿತಿ ಸೋರಿಕೆ ಮಾಡುತ್ತಿದ್ದರು. ಮತ್ತಷ್ಟು ಪೊಲೀಸರು, ಆರೋಪಿಗಳ ಅಕ್ರಮಕ್ಕೆ ಕೈ ಜೋಡಿಸಿದ್ದರು ಎನ್ನಲಾಗಿದೆ. ಅಂಥವರ ಮೇಲೆ ಕಣ್ಣಿಟ್ಟಿದ್ದ ಹಿರಿಯ ಅಧಿಕಾರಿಗಳು, ಕರ್ತವ್ಯಲೋಪ ಪತ್ತೆ ಮಾಡಿ ಎಲ್ಲರನ್ನೂ ವರ್ಗಾವಣೆ ಮಾಡಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕರ್ತವ್ಯ ನಿರ್ವಹಿಸದ ಪೊಲೀಸರು; 'ಸದ್ಯ ವರ್ಗಾವಣೆ ಮಾಡಲಾಗಿರುವ ಪೊಲೀಸರು, ತಮಗೆ ವಹಿಸಿದ್ದ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರಲಿಲ್ಲ. ಪ್ರತಿಭಟನೆ, ಬಂದೋಬಸ್ತ್ ಹಾಗೂ ಇತರೆ ಕರ್ತವ್ಯಕ್ಕೆ ನಿಯೋಜಿಸಿದಾಗ, ಸ್ಥಳದಿಂದ ಹೊರಟು ಹೋಗುತ್ತಿದ್ದರು. ಈ ಬಗ್ಗೆ ಸಾರ್ವಜನಿಕರೂ ಅಸಮಾಧಾನ ವ್ಯಕ್ತಪಡಿಸಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಮಾನವ ಕಳ್ಳಸಾಗಾಣಿಕೆ; ಆರೋಪ ಪಟ್ಟಿ ಸಲ್ಲಿಕೆ

ಬೆಂಗಳೂರು: ಬಾಂಗ್ಲಾದೇಶದಿಂದ ಜನರನ್ನು ಕಳ್ಳಸಾಗಾಣಿಕೆ ಮೂಲಕ ನಗರಕ್ಕೆ ಕರೆತಂದು ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದ ಬಗ್ಗೆ ರಾಮಮೂರ್ತಿನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 13 ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ.

ಪ್ರಕರಣದ ತನಿಖೆ ನಡೆಸಿದ್ದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು, ನಗರದಲ್ಲಿರುವ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಆರೋಪ ಪಟ್ಟಿ ಸಲ್ಲಿಸಿದ್ದಾರೆ.

ಬಾಂಗ್ಲಾದೇಶದ ಯುವತಿ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಎನ್‌ಐಎ ಅಧಿಕಾರಿಗಳು, ಆರೋಪಿಗಳ ಮಾನವ ಕಳ್ಳಸಾಗಾಣಿಕೆ ಜಾಲವನ್ನು ಪುರಾವೆ ಸಮೇತ ಭೇದಿಸಿದ್ದರು.

20 ಚಿನ್ನದ ಪದಕ, 4 ಬಹುಮಾನ- ಶಿರಸಿ ತಾಲ್ಲೂಕಿನ ಶೀಗೆಹಳ್ಳಿಯ ಚೈತ್ರಾ

ಬಸ್ ಕೊರತೆ ಊರಿನ 'ಚಿನ್ನದ ಹುಡುಗಿ'

• ಕೆ.ಓಂಕಾರ ಮೂರ್ತಿ

ಮೈಸೂರು: 'ನಮ್ಮೂರು ಶೀಗೆಹಳ್ಳಿಗೆ ಸರಿಯಾಗಿ ಬಸ್ ಬರುವುದಿಲ್ಲ. ಕಾಲೇಜು ಕೂಡಾ ದೂರ. ಹೀಗಾಗಿ, ಬೇರೆ ಊರಿನಲ್ಲಿ ಇದ್ದುಕೊಂಡೇ ವ್ಯಾಸಂಗ ಮಾಡಿದೆ. ಅಡಿಕೆ ಕೃಷಿಕರಾದ ಅಪ್ಪ-ಅಮ್ಮ ನೀಡಿದ ಉತ್ತೇಜನವೂ ಕೈಹಿಡಿಯಿತು'.

-ಮಂಗಳವಾರ ನಡೆಯುವ ಮೈಸೂರು ವಿಶ್ವವಿದ್ಯಾಲಯದ 101ನೇ ಘಟಿಕೋತ್ಸವದಲ್ಲಿ 20 ಚಿನ್ನದ ಪದಕ ಹಾಗೂ 4 ದತ್ತಿ ಬಹುಮಾನ ಪಡೆಯಲಿರುವ, ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಚೈತ್ರಾ ನಾರಾಯಣ ಹೆಗಡೆ ಹೆಮ್ಮೆಯಿಂದ ಹೀಗೆ ಹೇಳಿದರು. ಈ ಬಾರಿ ಅತಿ ಹೆಚ್ಚು ಚಿನ್ನದ ಪದಕ ಪಡೆಯುವ ಶ್ರೇಯ ಅವರದು.

ಎಂ.ಎಸ್ಸಿ ರಸಾಯನ ವಿಜ್ಞಾನ ವಿಷಯದಲ್ಲಿ ಸಾಧನೆ ಮಾಡಿರುವ ಅವರಿಗೆ ಇಲ್ಲಿನ ಕ್ರಾಫರ್ಡ್ ಭವನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದಕ ಪ್ರದಾನ ಮಾಡಲಿದ್ದಾರೆ.

ಸೌಲಭ್ಯವಿಲ್ಲದ ಊರಿನಿಂದ ಬಂದಿರುವ ಹುಡುಗಿ ನಾನು. ಏನಾದರೂ ಸಾಧನೆ ಮಾಡಿ ತೋರಿಸಬೇಕೆಂಬ ಛಲ, ಹಟದಿಂದ ಓದಿದೆ. ಈಗ ಖುಷಿಯಾಗುತ್ತಿದೆ

ಚೈತ್ರಾ ನಾರಾಯಣ ಹೆಗಡೆ

20 ಪದಕ ವಿಜೇತೆ, ಎಂ.ಎಸ್ಸಿ (ರಸಾಯನ ವಿಜ್ಞಾನ), ಮೈಸೂರು ವಿ.ವಿ

ಯುವರಾಜ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿರುವ ಅವರಿಗೆ ಮೆಡಿಸಿನ್ ಕೆಮಿಸ್ಟ್ರಿಯಲ್ಲಿ ಸಂಶೋಧನೆ ಮಾಡುವ ಆಸಕ್ತಿ ಇದೆ.

'ಪಿಜಿಯಲ್ಲಿ ಇದ್ದುಕೊಂಡೇ ಓದಿದೆ. ಹೆಚ್ಚು ಪದಕಗಳನ್ನು ಪಡೆಯಬೇಕೆಂಬ ಮಹದಾಸೆಯೂ ಇತ್ತು. ಆದರೆ, ಇಪ್ಪತ್ತು ಪದಕಗಳನ್ನು ಗಳಿಸುವೆ ಎಂದುಕೊಂಡಿರಲಿಲ್ಲ. ಈಗ ಅನಿರೀಕ್ಷಿತ ಫಲಿತಾಂಶದಿಂದ ಏಕಕಾಲಕ್ಕೆ ಅಚ್ಚರಿಯೂ ಸಂತೋಷವೂ ಆಗಿದೆ' ಎಂದರು.

'ಅಪ್ಪ ನಾರಾಯಣ ಹೆಗಡೆ ಹಾಗೂ ಅಮ್ಮ ಸುಮಂಗಳಾ ಹೆಗಡೆ ಅವರಿಗೆ ಈ ಎಲ್ಲ ಪದಕಗಳು ಸಮರ್ಪಿತ. ಅವರು ಯಾವತ್ತೂ ನನ್ನ ಮೇಲೆ ಒತ್ತಡ ಹಾಕಲಿಲ್ಲ. ಬದಲಾಗಿ ನಾನು ಇಷ್ಟಪಟ್ಟ ವಿಷಯ ಆಯ್ಕೆ ಮಾಡಿಕೊಂಡು ಓದಲು ಅವಕಾಶ ಮಾಡಿಕೊಟ್ಟರು. ಬೋಧಕರಿಗೂ ಧನ್ಯವಾದ ಅರ್ಪಿಸುವೆ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಪಿಯು ಓದುತ್ತಿದ್ದಾಗ ನಮ್ಮೂರಿಗೆ ಬೆಳಿಗ್ಗೆ, ಸಂಜೆ ಮಾತ್ರ ಬಸ್ ಬರುತಿತ್ತು. ಅದು ತಪ್ಪಿದರೆ ಪೋಷಕರೇ ಕರೆದುಕೊಂಡು ಹೋಗಬೇಕಿತ್ತು. ಈಗಲೂ ಈ ಪರಿಸ್ಥಿತಿ ಸುಧಾರಿಸಿಲ್ಲ. ವರ್ಕ್ ಫ್ರಂ ಹೋಂಗೆ ಸರಿಯಾಗಿ ನೆಟ್‌ವರ್ಕ್ ಸಿಗುವುದಿಲ್ಲ' ಎಂದು ನುಡಿದರು.

'ಶಿರಸಿಯ ಚೈತನ್ಯ ಕಾಲೇಜಿನಲ್ಲಿ ಪಿಯುಸಿ ಓದಿದೆ. ಬಳಿಕ ಮೈಸೂರಿಗೆ ಬಂದು ಯುವರಾಜ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಪೂರೈಸಿದೆ' ಎಂದರು.

ಮುಖ್ಯಾಂಶಗಳು

- ಯುವರಾಜ ಕಾಲೇಜಿನ ಅತಿಥಿ ಉಪನ್ಯಾಸಕಿ
- ಸಂಶೋಧನಾ ಕ್ಷೇತ್ರದಲ್ಲಿ ಆಸಕ್ತಿ
- ಪೋಷಕರಿಗೆ ಪದಕ ಸಮರ್ಪಣೆ

ಪ್ರಜಾವಾಣಿ ವಿಶೇಷ

ಗ್ಯಾಸ್ ಗೀಸರ್ ಅನಿಲ ಸೋರಿಕೆ; ವಿದ್ಯಾರ್ಥಿನಿ ಸಾವು

ಬೆಂಗಳೂರು: ಸ್ನಾನದ ಕೊಠಡಿಯಲ್ಲಿ ಗ್ಯಾಸ್ ಗೀಸರ್‌ನಿಂದ ಕಾರ್ಬನ್ ಮೋನಾಕ್ಸೈಡ್ ಸೋರಿಕೆಯಾಗಿ ಸಂಪದಾ (23) ಉಸಿರುಗಟ್ಟಿ ಮೃತಪಟ್ಟಿದ್ದಾರೆ.

'ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಈ ಅವಘಡ ಸಂಭವಿಸಿದೆ. ಸಂಪದಾ ಪೋಷಕರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೃತ ಸಂಪದಾ, ಎಂಬಿಬಿಎಸ್ ವಿದ್ಯಾರ್ಥಿನಿ. ದೇವನಹಳ್ಳಿಯ ಆಕಾಶ್ ವೈದ್ಯಕೀಯ ಕಾಲೇಜಿನಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದರು.

'ಸೆ. 4ರಂದು ಮಧ್ಯಾಹ್ನ ಸಂಪದಾ ಗ್ಯಾಸ್ ಗೀಸರ್ ಆನ್ ಮಾಡಿ ಬಿಸಿನೀರಿನಿಂದ ಸ್ನಾನ ಮಾಡುತ್ತಿದ್ದರು. ಇದೇ ಸಂದರ್ಭದಲ್ಲೇ ಗೀಸರ್‌ನಿಂದ ಕಾರ್ಬನ್ ಮೋನಾಕ್ಸೈಡ್ ಸೋರಿಕೆಯಾಗಿ, ಉಸಿರಾಡಲು ಸಾಧ್ಯವಾಗದೇ ಸಂಪದಾ ಪ್ರಜ್ಞೆ ತಪ್ಪಿ ಬಿದ್ದಿದ್ದರು'

'ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಸ್ಥಳದಲ್ಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದೂ ಮೂಲಗಳು ಮಾಹಿತಿ ನೀಡಿವೆ.

ಸರ ಕಳವು; ಆರೋಪಿಗಳ ಹಿಡಿದ ಜನ

ಬೆಂಗಳೂರು: ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಲು ಯತ್ನಿಸಿದ್ದ ಆರೋಪಿಗಳನ್ನು ಸಾರ್ವಜನಿಕರೇ ಬೆನ್ನಟ್ಟಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ವಿಜಿ, ಸಂಜಯ್ ಹಾಗೂ ಸಲ್ಮಾನ್ ಬಂಧಿತರು. ಅವರಿಂದ ₹ 2.80 ಲಕ್ಷ ಮೌಲ್ಯದ 32 ಗ್ರಾಂ ಚಿನ್ನಾಭರಣ ಹಾಗೂ 12 ಮೊಬೈಲ್ ಜಪ್ತಿ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆಗಸ್ಟ್ 21ರಂದು ನಾಲ್ವರು ಆರೋಪಿಗಳು ಸಿಟಿ ಮಾರ್ಕೆಟ್ ಬಳಿಯ ಪಾಂಡುರಂಗ ದೇವಸ್ಥಾನ ಹಿಂಭಾಗದಲ್ಲಿ ಮಹಿಳೆಯೊಬ್ಬರ ಚಿನ್ನದ ಸರ ಕಿತ್ತೊಯ್ಯಲು ಯತ್ನಿಸಿದ್ದರು. ಅದೇ ವೇಳೆ ಮಹಿಳೆ, ಸಹಾಯಕ್ಕಾಗಿ ಕೂಗಾಡಿದ್ದರು. ಸ್ಥಳದಲ್ಲಿದ್ದ ಸಾರ್ವಜನಿಕರು ಇಬ್ಬರು ಆರೋಪಿಗಳನ್ನು ಬೆನ್ನಟ್ಟಿ ಹಿಡಿದು ಹೊಯ್ಸಳ ಗಸ್ತು ಸಿಬ್ಬಂದಿ ವಶಕ್ಕೆ ಒಪ್ಪಿಸಿದ್ದರು.'

'ವಿಜಿ ಹಾಗೂ ಸಂಜಯ್‌ನನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು. ಅವರ ಮಾಹಿತಿ ಆಧರಿಸಿ ಇನ್ನೊಬ್ಬ ಆರೋಪಿ ಸಲ್ಮಾನ್‌ನನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದೂ ತಿಳಿಸಿದರು.

'ದ್ವಿಚಕ್ರ ವಾಹನದಲ್ಲಿ ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ವೃದ್ಧರು ಹಾಗೂ ಮಹಿಳೆಯರ ಚಿನ್ನದ ಸರ ಕದಿಯುತ್ತಿದ್ದರು. ಕೆಲವೆಡೆ ಸಾರ್ವಜನಿಕರನ್ನು ಅಡ್ಡಗಟ್ಟಿ ಮೊಬೈಲ್ ಸುಲಿಗೆ ಸಹ ಮಾಡಿದ್ದರು.'

'ಜಗಜೀವನ್‌ರಾಮ್ ನಗರ, ಬ್ಯಾಟರಾಯನಪುರ, ತಿಲಕ ನಗರ, ಸಿಟಿ ಮಾರ್ಕೆಟ್, ಬಸವನಗುಡಿ ಹಾಗೂ ಹಲಸೂರು ಗೇಟ್ ಠಾಣೆ ವ್ಯಾಪ್ತಿಗಳಲ್ಲೂ ಆರೋಪಿಗಳು ಕೃತ್ಯ ಎಸಗಿದ್ದಾರೆ' ಎಂದೂ ಹೇಳಿದರು.

ಚಿನ್ನಾಭರಣ ಜಪ್ತಿ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳವು ಮಾಡಿದ್ದ ಆರೋಪದಡಿ ಮನೋಜ್ ಕುಮಾರ್ ಎಂಬಾತನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. 'ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಆಗಸ್ಟ್ 12ರಂದು ಕಳ್ಳತನ ನಡೆದಿತ್ತು. ಆ ಬಗ್ಗೆ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಯಿತು. ಆತನಿಂದ ₹ 11.05 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

₹ 60 ಸಾವಿರ ದಾಟಿದ ಅಡಿಕೆ ಧಾರಣೆ

ಶಿವಮೊಗ್ಗ: ಅಡಿಕೆ ಧಾರಣೆ 10 ದಿನದಲ್ಲಿ ₹ 10 ಸಾವಿರ ಹೆಚ್ಚಳವಾಗಿದೆ. ಸೋಮವಾರ ಮಾರುಕಟ್ಟೆಯಲ್ಲಿ ರಾಶಿ ಇಡಿ ವರ್ಗದ ಗರಿಷ್ಠ ಧಾರಣೆ ₹ 60 ಸಾವಿರ ದಾಟಿ ದಾಖಲೆ ಬರೆದಿದೆ.

ರಾಶಿ ಪ್ರಕಾರದ ಅಡಿಕೆ ಧಾರಣೆ 2010ರವರೆಗೆ ಕ್ವಿಂಟಲ್‌ಗೆ ₹ 10 ಸಾವಿರದಿಂದ ₹ 15 ಸಾವಿರದ ಆಸುಪಾಸು ಇತ್ತು. 2014–15ರಲ್ಲಿ ₹ 1 ಲಕ್ಷದ ಗಡಿ ಮುಟ್ಟಿ ಸಾರ್ವಕಾಲಿಕ ದಾಖಲೆ ಸೃಷ್ಟಿಸಿತ್ತು. ನಂತರ ಮತ್ತೆ ಕುಸಿದಿತ್ತು. 2020ರಲ್ಲಿ ಗರಿಷ್ಠ ಧಾರಣೆ ₹ 42 ಸಾವಿರ ಇತ್ತು. ಈಗ ಮತ್ತೆ ಧಾರಣೆ ಏರಿಕೆಯಾಗುತ್ತಿದೆ.

ನಿಧನ ವಾರ್ತೆ

ಜನಾರ್ದನ ರೆಡ್ಡಿ

ಬೆಂಗಳೂರು: ಮಾರುತಿನಗರದ ಪತ್ರಿಕಾ ವಿತರಕ ಜನಾರ್ದನ ರೆಡ್ಡಿ (44) ಅವರು ಅನಾರೋಗ್ಯದಿಂದಾಗಿ ಸೋಮವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಮಗ ಇದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಹು–ಧಾ, ಬೆಳಗಾವಿ ಪಾಲಿಕೆ: ಬಿಜೆಪಿ ಮಡಿಲಿಗೆ • ಕಲಬುರ್ಗಿ ಪಾಲಿಕೆ: ಜೆಡಿಎಸ್ ನಿರ್ಣಾಯಕ

ಎಂಇಎಸ್ ಭಾಷಾ ರಾಜಕಾರಣ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಬೆಳಗಾವಿ: ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 39 ಸ್ಥಾನ ಗೆದ್ದಿದ್ದು, ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ 35 ಸ್ಥಾನ ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಗಳಿಸಿದೆ.

ಹು–ಧಾ ಮಹಾನಗರ ಪಾಲಿಕೆಯ ಸದಸ್ಯ ಬಲ 82 ಆಗಿದ್ದು, ಸರಳ ಬಹುಮತಕ್ಕೆ 42 ಸ್ಥಾನ ಬೇಕಿತ್ತು. ಬಿಜೆಪಿ 39 ಸ್ಥಾನ ಗಳಿಸಿದೆ. ಜತೆಗೆ ಮೂವರು ಶಾಸಕರು, ಇಬ್ಬರು ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸದರ ಮತ ಸೇರಿ 45 ಸದಸ್ಯರಾಗಲಿದ್ದು ಮೂರನೇ ಬಾರಿಗೆ ಅಧಿಕಾರಕ್ಕೇರಲು ಸಜ್ಜಾಗಿದೆ.

ಮೊದಲ ಬಾರಿಗೆ ಸ್ಪರ್ಧೆಗೆ ಇಳಿದಿದ್ದ ಎಐಎಂಐಎಂ ಮೂರು ಸ್ಥಾನ ಗೆದ್ದಿದ್ದು, ಖಾತೆ ತೆರೆದಿದೆ. ಕಳೆದ ಬಾರಿ ಪಾಲಿಕೆಯಲ್ಲಿ 67 ವಾರ್ಡ್‌ಗಳಿದ್ದವು. ಬಿಜೆಪಿ 33, ಕಾಂಗ್ರೆಸ್ 22, ಜೆಡಿಎಸ್ 9, ಮೂವರು ಪಕ್ಷೇತರರು ಆಯ್ಕೆಯಾಗಿದ್ದರು. ಈ ಬಾರಿ ಜೆಡಿಎಸ್‌ಗೆ ತೀವ್ರ ಹಿನ್ನಡೆಯಾಗಿದೆ.

ಬೆಳಗಾವಿ-ಚಿಹ್ನೆಯಡಿ ಪ್ರಥಮ ಬಾರಿ ಚುನಾವಣೆ: ಕನ್ನಡ, ಮರಾಠಿ ಹಾಗೂ ಉರ್ದು ಭಾಷೆಗಳ ಆಧಾರದಲ್ಲಿ ಈವರೆಗೆ ಬೆಳಗಾವಿ ಮಹಾನಗರ ಪಾಲಿಕೆಗೆ ಚುನಾವಣೆ ನಡೆಯುತ್ತಿತ್ತು. ಇದೇ ಮೊದಲ ಬಾರಿಗೆ ರಾಜಕೀಯ ಪಕ್ಷಗಳ ಚಿಹ್ನೆಯಡಿ ಕಣಕ್ಕಿಳಿದಿದ್ದವು.

ಭಾಷೆ ಮತ್ತು ಗಡಿ ವಿಷಯವನ್ನು ಅಸ್ತ್ರವಾಗಿಸಿಕೊಂಡಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮತ್ತು ಶಿವಸೇನೆ ಬೆಂಬಲಿತರು 23 ವಾರ್ಡ್‌ಗಳಲ್ಲಿ ಸ್ಪರ್ಧಿಸಿದ್ದರು. ಎರಡು ಕಡೆಗಳಲ್ಲಿ ಅವರಿಗೆ ಗೆಲುವು ಸಿಕ್ಕಿದೆ. 7 ವಾರ್ಡ್‌ಗಳಲ್ಲಿ ಸ್ಪರ್ಧಿಸಿದ್ದ ಎಐಎಂಐಎಂ ಖಾತೆ ತೆರೆದಿದೆ. 27ರಲ್ಲಿ ಸ್ಪರ್ಧಿಸಿದ್ದ ಆಮ್ ಆದ್ಮಿ ಪಕ್ಷ (ಎಎಪಿ) ಸೋಲುಂಡಿದೆ.

ಈ ಬಾರಿ ಮತದಾರರು ಭಾಷಾ ರಾಜಕಾರಣವನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಮರಾಠಿ ಭಾಷಿಗರ ಮತ ಸೆಳೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಎಂಇಎಸ್‌ನವರು ಪ್ರಯೋಗಿಸಿದ್ದ 'ಎಂ ಪ್ಲಸ್ ಎಂ' (ಮರಾಠಿ ಮತ್ತು ಮುಸ್ಲಿಂ) ಸೂತ್ರಕ್ಕೆ ಮತದಾರರು ಮನ್ನಣೆ ನೀಡಿಲ್ಲ.

ಕಲಬುರ್ಗಿಯ ಎನ್‌.ವಿ.ಕಾಲೇಜಿನಲ್ಲಿ ಸೋಮವಾರ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳ ಬೆಂಬಲಿಗರು ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ದೊಡ್ಡಬಳ್ಳಾಪುರ ನಗರಸಭೆ ಅತಂತ್ರ

ದೊಡ್ಡಬಳ್ಳಾಪುರ: ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆಯದ ಕಾರಣ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ನಗರ ಸಭೆಯ ಸದಸ್ಯ ಬಲ 31 ಆಗಿದ್ದು, 12 ವಾರ್ಡ್‌ಗಳಲ್ಲಿ ಗೆದ್ದಿರುವ ಬಿಜೆಪಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಕಾಂಗ್ರೆಸ್ 9, ಜೆಡಿಎಸ್ 7 ಹಾಗೂ ಮೂವರು ಪಕ್ಷೇತರರು ಜಯಗಳಿಸಿದ್ದಾರೆ. ಅಧಿಕಾರ ಹಿಡಿಯಲು 16 ಸದಸ್ಯ ಬಲದ ಅಗತ್ಯವಿದೆ. ಇದನ್ನು ಪಡೆಯುವಲ್ಲಿ ಯಾವುದೇ ಪಕ್ಷ ಯಶಸ್ವಿಯಾಗಿಲ್ಲ. ಅಧಿಕಾರದ ಚುಕ್ಕಾಣಿ ಯಾರಿಗೆ ಎಂಬ ಕುತೂಹಲ ಮೂಡಿದೆ.

ಕಲಬುರ್ಗಿ: ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನ

ಕಲಬುರ್ಗಿ: 55 ಸದಸ್ಯ ಬಲದ ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆಸ್ 27 ಸ್ಥಾನ ಗೆದ್ದಿದ್ದು, ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಬಿಜೆಪಿ 23 ಸ್ಥಾನಗಳಿಗಷ್ಟೇ ತೃಪ್ತಿ ಪಟ್ಟುಕೊಂಡಿದೆ. ಆದರೂ ಬಿಜೆಪಿ ಪಾಲಿಕೆಯಲ್ಲಿ ಅಧಿಕಾರಕ್ಕೆ ಬರುವ ಆಸೆಯನ್ನು ಜೀವಂತವಾಗಿಸಿಕೊಂಡಿದೆ.

55 ಸದಸ್ಯರ ಜೊತೆಗೆ ಮೇಯರ್ ಆಯ್ಕೆಯಲ್ಲಿ ಶಾಸಕರು, ಸಂಸದರಿಗೂ ಮತದಾನದ ಹಕ್ಕಿದೆ. ಪಕ್ಷದ ಶಾಸಕರು, ಸಂಸದರನ್ನು ಸೇರಿ ಬಿಜೆಪಿ ಬಲ 29 ಆಗುತ್ತದೆ. ಕಾಂಗ್ರೆಸ್‌ನ ಶಾಸಕರು, ರಾಜ್ಯಸಭೆ ಸದಸ್ಯರ ಮತ ಸೇರಿ ಆ ಪಕ್ಷದ ಬಲ 30 ಆಗುತ್ತದೆ. ಮತದಾನದ ಹಕ್ಕಿರುವ ಸಂಸದರು–ಶಾಸಕರು ಸೇರಿ ಒಟ್ಟು ಒಟ್ಟು ಸದಸ್ಯ ಬಲ 64 ಆಗುತ್ತಿದ್ದು, ಬಹುಮತಕ್ಕೆ 33 ಮತಗಳ ಅಗತ್ಯವಿದೆ.

ಜೆಡಿಎಸ್‌ನ ನಾಲ್ವರು ಹಾಗೂ ಒಬ್ಬ ಪಕ್ಷೇತರ ಸದಸ್ಯರ ಬೆಂಬಲದಲ್ಲಿ ಸಾರಥ್ಯ ಹಿಡಿಯಲು ಬಿಜೆಪಿ ಹಾಗೂ ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಯತ್ನ ಆರಂಭಿಸಿವೆ. ಹಿಂದಿನ ಚುನಾವಣೆಯಲ್ಲಿಯೂ ಯಾವುದೇ ಪಕ್ಷಗಳಿಗೆ ಬಹುಮತ ಇರಲಿಲ್ಲ. ಆಗ 23 ಸ್ಥಾನ ಗೆದ್ದಿದ್ದ ಕಾಂಗ್ರೆಸ್ ಪಕ್ಷೇತರರ ನೆರವಿನಿಂದ ಅಧಿಕಾರ ನಡೆಸಿತ್ತು . ಜೆಡಿಎಸ್–10, ಬಿಜೆಪಿ–7, ಕೆಜೆಪಿ–7, ಪಕ್ಷೇತರರು–7, ಆರ್‌ಪಿಐ–1 ಸದಸ್ಯರು ಇದ್ದರು.

ಉಪ ಚುನಾವಣೆ: ಗೆಲುವು ಯಾರಿಗೆ?

- ರಾಮನಗರ ನಗರಸಭೆಯ ನಾಲ್ಕನೇ ವಾರ್ಡಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ತೇಜಸ್ವಿನಿ ಸುರೇಶ್ 899 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದಾರೆ. ಕಳೆದ ಬಾರಿ ಚುನಾವಣಾ ಫಲಿತಾಂಶ ಪ್ರಕಟಣೆಗೆ ಮೊದಲೇ ಅಭ್ಯರ್ಥಿ ಮೃತಪಟ್ಟಿದ್ದರಿಂದ ಈಗ ಉಪಚುನಾವಣೆ ನಡೆದಿತ್ತು.
- ಮೈಸೂರು ಮಹಾನಗರ ಪಾಲಿಕೆ 36ನೇ ವಾರ್ಡ್ (ಯರಗನಹಳ್ಳಿ) ಉಪಚುನಾವಣೆಯಲ್ಲಿ ಕಾಂಗ್ರೆಸ್ 1,997 ಮತಗಳಿಂದ ಜಯ ಸಾಧಿಸಿದೆ. ಕಾಂಗ್ರೆಸ್‌ನ ರಜನಿ ಅಣ್ಣಯ್ಯ ಗೆದ್ದಿದ್ದಾರೆ. ಈ ಸ್ಥಾನವನ್ನು ಜೆಡಿಎಸ್‌ನಿಂದ ಕಸಿದುಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ.
- ಬೀದರ್ ನಗರಸಭೆಯ ಎರಡು ವಾರ್ಡ್‌ಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್ ತಲಾ ಒಂದು ಸ್ಥಾನ ಗೆದ್ದಿವೆ.
- ಬಸವಕಲ್ಯಾಣ ನಗರಸಭೆಯ ಎರಡು ವಾರ್ಡ್‌ಗಳಿಗೆ ಚುನಾವಣೆ ನಡೆದಿದ್ದು, ಬಿಜೆಪಿ, ಕಾಂಗ್ರೆಸ್ ತಲಾ ಒಂದು ಸ್ಥಾನ ಗೆದ್ದಿದೆ.
- ವಾಡಿ ಪುರಸಭೆಯ 2, ಕುಷ್ಟಗಿ ಪುರಸಭೆಯ 1 ಸ್ಥಾನಗಳಿಗೆ ಉಪಚುನಾವಣೆ ನಡೆದಿದ್ದು, ಬಿಜೆಪಿ ಮೂರು ಸ್ಥಾನಗಳನ್ನು ಗೆದ್ದುಕೊಂಡಿದೆ.
- ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಹಾಗೂ ದಾವಣಗೆರೆ ಜಿಲ್ಲೆಯ ಹರಿಹರ ನಗರಸಭೆಯ ತಲಾ ಒಂದು ವಾರ್ಡ್‌ಗಳಿಗೆ ನಡೆದ ಉಪಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳು ಗೆದ್ದಿದ್ದಾರೆ.

ತರೀಕೆರೆ ಪುರಸಭೆ: ಕಾಂಗ್ರೆಸ್ ಪಾರಮ್ಯ

ಚಿಕ್ಕಮಗಳೂರು: ತರೀಕೆರೆ ಪುರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಾರಮ್ಯ ಸಾಧಿಸಿದೆ. ಪಕ್ಷೇತರರೂ ಗಣನೀಯ ಸಾಧನೆ ಮಾಡಿದ್ದಾರೆ. 15 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಜಯಗಳಿಸಿದ್ದು, ಸ್ಪಷ್ಟ ಬಹುಮತ ಪಡೆದಿದೆ. ಪಕ್ಷೇತರರು ಏಳು ಸ್ಥಾನ ಗೆದ್ದಿದ್ದಾರೆ.ಬಿಜೆಪಿಒಂದುಸ್ಥಾನಪಡೆದಿದೆ, ಜೆಡಿಎಸ್‌ನದು ಶೂನ್ಯ ಸಾಧನೆ.

ಬಿಜೆಪಿ ಶಾಸಕ ಡಿ.ಎಸ್.ಸುರೇಶ್ ಅವರ ಚುನಾವಣಾ ತಂತ್ರಗಾರಿಕೆ ಫಲ ನೀಡಿಲ್ಲ. ಎರಡನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕುಮಾರ್ ಹಳಿಯೂರು ಅವರು ಒಂದು ಮತದಿಂದ ಗೆಲುವಿನ ನಗೆ ಬೀರಿದರು.

ತೃತೀಯ ಲಿಂಗಿ ಸ್ಪರ್ಧೆಯಿಂದಾಗಿ 23ನೇ ವಾರ್ಡ್ ಗಮನ ಸೆಳೆದಿತ್ತು. ಇಲ್ಲಿ ಪಕ್ಷೇತರ ಅಭ್ಯರ್ಥಿ ಗೆದ್ದಿದ್ದು, ಬಿಜೆಪಿಯಿಂದ ಕಣಕ್ಕಿಳಿದಿದ್ದ ತೃತೀಯ ಲಿಂಗಿ ಅರುಂಧತಿ ಜಿ.ಹೆಗ್ಗಡೆ ಪರಾಭವಗೊಂಡಿದ್ದಾರೆ.

'ಬೆಲೆ ಏರಿಕೆಯಾಗಿದೆ ಅಂತ ಊಟ ಬಿಟ್ಟಿಲ್ಲ'

ಕಲಬುರ್ಗಿ: 'ಬೆಲೆ ಏರಿಕೆಯಾಗಿದೆ ಎಂದು ಜನರು ಊಟ ಮಾಡುವುದು, ಪೂಜೆ ಮಾಡುವುದನ್ನು ಬಿಟ್ಟಿದ್ದಾರೆಯೇ? ಮೊನ್ನೆ ಚುನಾವಣೆ ದಿನ ಶ್ರಾವಣ ಶುಕ್ರವಾರವನ್ನು ಅದ್ಧೂರಿಯಾಗಿಯೇ ಆಚರಿಸಿದರಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಪ್ರಶ್ನಿಸಿದರು.

ಬೆಲೆ ಏರಿಕೆ ಕಾರಣಕ್ಕೆ ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆಯೇ ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಎದುರಾದ ಪ್ರಶ್ನೆಗೆ ಅವರು, 'ಜನರು ಊಟ ಬಿಟ್ಟಿಲ್ಲ. ಪೂಜೆಯನ್ನೂ ಬಿಟ್ಟಿಲ್ಲ. ಪೂಜೆ ಮಾಡುವುದನ್ನು ಬಿಟ್ಟು ಮತಗಟ್ಟೆಗೆ ಬಂದಿದ್ದರೆ ಬಿಜೆಪಿಗೆ ಇನ್ನಷ್ಟು ಸೀಟುಗಳು ಬರುತ್ತಿದ್ದವು. ಬೆಲೆ ಏರಿಕೆ ತಾತ್ಕಾಲಿಕ. ಅಲ್ಲದೇ, ಈ ವಿಚಾರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹೆಚ್ಚಿನ ಪರಿಣಾಮ ಬೀರುವುದಿಲ್ಲ' ಎಂದು ಸಮರ್ಥಿಸಿಕೊಂಡರು.

ತಿದ್ದುಪಡಿ

ಮೈಸೂರು: ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಬಯೊಕೆಮಿಸ್ಟ್ರಿ ವಿಭಾಗದ ಗೌರವ ಪ್ರಾಧ್ಯಾಪಕ ಗೋವಿಂದರಾಜನ್ ಪದ್ಮನಾಭನ್ ಅವರಿಗೆ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರಕಟಿಸಿದೆ.

ಸೆ.6ರ ಸಂಚಿಕೆಯಲ್ಲಿ ಪ್ರೊ. ಗೋವಿಂದರಾಜನ್‌ಗೆ ಡಾಕ್ಟರೇಟ್ ಎಂದು ತಪ್ಪಾಗಿ ಪ್ರಕಟವಾಗಿತ್ತು

ಶಾಸಕ ಎನ್.ಮಹೇಶ್‌ಗೆ ಪತ್ನಿ ವಿಯೋಗ



ವಿಜಯಾ

ಕೊಳ್ಳೇಗಾಲ: ಶಾಸಕ ಎನ್.ಮಹೇಶ್ ಅವರ ಪತ್ನಿ ವಿಜಯಾ (64) ಭಾನುವಾರ ರಾತ್ರಿ ಬೆಂಗಳೂರಿನ ಮನೆಯಲ್ಲಿ ನಿಧನರಾದರು.

ಪತಿ ಮಹೇಶ್, ಪುತ್ರ ಅರ್ಜುನ್ ಇದ್ದಾರೆ. ಬೆಂಗಳೂರು ಸಮೀಪದ ಕಾನ್ಶಿ ಫೌಂಡೇಷನ್‌ನಲ್ಲಿ ಸೋಮವಾರ ಬೌದ್ಧ ಧರ್ಮದ ವಿಧಿವಿಧಾನಗಳ ಪ್ರಕಾರ ಅಂತ್ಯಕ್ರಿಯೆ ನಡೆಯಿತು.

ಅಂಬೇಡ್ಕರ್‌ವಾದಿಯಾಗಿ, ಬಹುಜನ ಚಳವಳಿಯಲ್ಲಿ ಸಕ್ರಿಯವಾಗಿದ್ದರು. ಮಂಡ್ಯ ಅಪೆಕ್ಸ್ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಅವರು ಮೂರು ವರ್ಷಗಳ ಹಿಂದೆ ನಿವೃತ್ತರಾಗಿದ್ದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯಾಲಯ : ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂ:1
ಕೆಂಭಾವಿ, ತಾ: ಸುರಪುರ, ಜಿ: ಯಾದಗಿರಿ, Phone: 08443-278674
E-Mail: ee_ibcdiv1kembhavi@yahoo.com
No.: KBJNL/IBC/DN-1/PB/Tender/2021-22/532 Dated: 02-09-2021
ಟೆಂಡರ ಪ್ರಕಟಣೆ (ಇ–ಪ್ರಾಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ.1 ಕೆಂಭಾವಿ ಇವರು ಕರ್ನಾಟಕ ಸರಕಾರದ ಇ–ಪ್ರಾಕ್ಯೂರಮೆಂಟ್ ಪೋರ್ಟಲ್‌ನಲ್ಲಿ Ame of canal networks ಅಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 11 ಕಾಮಗಾರಿಗಳಿಗೆ ರೂ: 51.00 ಲಕ್ಷಗಳಿಗೆ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ಏಕಮಾತ್ರ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್ ಸೈಟ್ http://eproc.karnataka.gov.in/eportal/index.seam link ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.
1) ಇ–ಪ್ರಾಕ್ಯೂರಮೆಂಟ್ http://eproc.karnataka.gov.in/eportal/index.seam link ವೆಬ್ ಸೈಟ್ ನಿಂದ ಖಾಲಿ ಟೆಂಡರ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡಿಕೊಳ್ಳುವದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 07–09–2021 ರಿಂದ 16–09–2021 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವದು. 2) ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ಸಲ್ಲಿಸಲು ಕೊನೆ ದಿನಾಂಕ: 16–09–2021 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು. 3) ಆರ್ಥಿಕ ಬಿಡ್ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ 1 ಕೆಂಬವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 18–09–2021ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 4) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ http://eproc.karnataka.gov.in/eportal/index.seam link ವೆಬ್ ಸೈಟ್ ನಿಂದ ಪಡೆಯಬಹುದು. 5) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವದು. 6) ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ಯಾದಗಿರಿ/182/ಎಂಸಿ&ಎ/2021–22 ಕೃಭಾಜನಿನಿ. ಐಬಿಸಿ ವಿಭಾಗ ಸಂ 1 ಕೆಂಭಾವಿ–585216

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ದಾವಣಗೆರೆ.
ಜಿಲ್ಲಾ ಆರ್.ಸಿ.ಹೆಚ್. ವಿಭಾಗ, ಕೊಠಡಿ ಸಂಖ್ಯೆ: 1, ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆ ಹಿಂಬಾಗ, ಎನ್.ಸಿ.ಸಿ.ಕ್ಯಾಂಪ್ ಹತ್ತಿರ, ಶ್ರೀ ರಾಮ ನಗರರಸ್ತೆ, ಶ್ರೀರಾಮ ನಗರ, ದಾವಣಗೆರೆ–577005, , ಈ ಮೇಲ್–rchodavangere@gmail.com
ಸಂ:ಜಿಟಿನಿಫ/ದಾಗೆರೆ/ಎನ್‌ಹೆಚ್‌ಎಂ/ ನೇಮಕ/33/2021–22 ದಿನಾಂಕ:03/09/2021
ಸಂಕ್ಷಿಪ್ತ ನೇಮಕಾತಿ ಅಧಿಸೂಚನೆ
ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಉಪ ಕಾರ್ಯಕ್ರಮಗಳಡಿ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಅಧಾರದಲ್ಲಿ 31/03/2022 ರವರೆಗೆ ಹಾಗೂ 2022–23 ನೇ ಸಾಲಿನ ಹುದ್ದೆಗಳ ಮುಂದುವರಿಕೆ ಪಿಐಪಿ ಅನುಮೋದನೆ ಷರತ್ತಿಗೊಳಪಟ್ಟಿರುತ್ತದೆ. ಎನ್.ಹೆಚ್.ಎಂ ನಿಯಾಮನುಸಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ಆಯ್ಕೆ ಮಾಡುವ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಾಮನುಸಾರ "ರೋಸ್ಟರ್ ಕಂಮೆರಿಟ್" ಅಧಾರದಲ್ಲಿ ನೇಮಕ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಕ್ರ. ಸಂ.	ಪದನಾಮ	ಹುದ್ದೆಗಳ ಸಂಖ್ಯೆ	ಕಾರ್ಯಕ್ರಮ	ವಿದ್ಯಾರ್ಹತೆ
1	ಜಿಲ್ಲಾ ಸಲಹೆಗಾರರು ಗುಣಮಟ್ಟ ಖಾತರಿ ವಿಭಾಗ	01	ಜಿಲ್ಲಾ ಗುಣಮಟ್ಟ ಖಾತರಿ ಘಟಕ	UGqualification-MBBS/BDS/AYUSH/Nursing Graduate(Regular Full time from Recognized University)and PG Qualification–Masters in Hospital Administration/Health Management (MHA regular Full time from Recognized University) 2 with experience in Public Health or Hospital Administration .Previous experience inthe field of Health quality would be an added advantage
2	ಆಪ್ಟೋಮೆಟ್ರಿಸ್ಟ್	01	ಡಿಇಐಸಿ ಕೇಂದ್ರ	Bachelor in Optometry or Master in optometry from any recognized university
3	ಆಡಿಯೋಮೆಟ್ರಿಕ್ ಅಸಿಸ್ಟೆಂಟ್	01	ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಪಿಪಿಸಿಡಿ.)	Diploma in Hearing Language and speech (DHLS) From a RCI Recognized Institute
4	ಇನ್‌ಸ್ಟ್ರಕ್ಟರ್ ಫಾರ್ ಹೀಯರಿಂಗ್ ಇಂಪೇರಡ್‌ಚಿಲ್ಡ್ರರ್ನ್.	01		Diploma in Training Young Deaf & Hearing Handicapped (DTYDHH) From a RCI Recognized Institute
5	ಪಂಚಕರ್ಮ ತಜ್ಞವೈದ್ಯರು	01	ಆಯುಷ್ ಕಾರ್ಯಕ್ರಮ	ಪಂಚಕರ್ಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಸದರಿ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಕಾಯ ಚಿಕಿತ್ಸಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಆಯ್ಕೆ ಮಾಡಲಾಗುವುದು. (ಪರಿಶಿಷ್ಟ ಪಂಗಡಕ್ಕೆ ಮೀಸಾಲಾತಿ)
6	ಥೆರಾಪಿಸ್ಟ್	01		ಸರ್ಕಾರದ ಅಂಗೀಕೃತ ವಿಶ್ವ ವಿದ್ಯಾಲಯದಿಂದ ಬಿಎಸ್‌ಸಿ ಪದವಿ (ಯೋಗ ಮತ್ತು ಪ್ರಕೃತಿ ಚಿಕಿತ್ಸೆ) ಪದವಿ ಹೊಂದಿರಬೇಕು. ಅಥವಾ ಮೇಲ್ಕಂಡ ಪದವಿ ಹೊಂದಿದ ಚಿಕಿತ್ಸಾ ಸಹಾಯಕರು ಲಭ್ಯವಿಲ್ಲದಿದ್ದಲ್ಲಿ ಮಸಾಜಿಸ್ಟ್ ತರಬೇತಿ ಪಡೆದ ಕೆಳಕಂಡ ವಿದ್ಯಾರ್ಹತೆ ಹೊಂದಿದ ಶುಶ್ರೂಷಕರು, ಎಸ್‌ಎಸ್‌ಎಲ್‌ಸಿ/ಪಿಯುಸಿತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಮೂರು ವರ್ಷಗಳ ಜನರಲ್ ನರ್ಸಿಂಗ್ ಕೋರ್ಸ್/ಡಿಪ್ಲೋಮೊ ನರ್ಸಿಂಗ್/ಬಿಎಸ್ಸಿ ನರ್ಸಿಂಗ್‌ನಲ್ಲಿ ಉತ್ತೀರ್ಣರಾಗಿರಬೇಕು (ಪರಿಶಿಷ್ಟ ಪಂಗಡಕ್ಕೆಮೀಸಾಲಾತಿ)
7	ಶುಶ್ರೂಷಕಿಯರು	11	ಮಕ್ಕಳ ಆರೋಗ್ಯ ಕಾರ್ಯಕ್ರಮ	ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಎಂಎಸ್‌ಸಿ/ ಬಿಎಸ್‌ಸಿ/ ಡಿಪ್ಲೋಮೊ ಜಿಎನ್‌ಎಂ ನರ್ಸಿಂಗ್ ಪದವಿ ಹೊಂದಿರಬೇಕು. ಕರ್ನಾಟಕ ಕೌನ್ಸಲಿಂಗ್‌ನಲ್ಲಿ ನೊಂದಾವಣೆ/ಮರು ನಮೀಕರಣ ಹೊಂದಿರಬೇಕು.
8	ಶುಶ್ರೂಷಕಿಯರು	09	ತಾಯಿ ಆರೋಗ್ಯ ಕಾರ್ಯಕ್ರಮ	ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಎಂಎಸ್‌ಸಿ/ ಬಿಎಸ್‌ಸಿ/ಡಿಪ್ಲೋಮೊ ಜಿಎನ್‌ಎಂ ನರ್ಸಿಂಗ್ ಪದವಿ ಹೊಂದಿರಬೇಕು. ಕರ್ನಾಟಕ ಕೌನ್ಸಲಿಂಗ್‌ನಲ್ಲಿ ನೊಂದಾವಣೆ/ ಮರು ನಮೀಕರಣ ಹೊಂದಿರಬೇಕು. ಈ ಹಿಂದೆ ಎನ್‌ಹೆಚ್‌ಎಂ ಯೋಜನೆಯಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವ ಮಹಿಳಾ ಶುಶ್ರೂಷಕಿಯರಿಗೆ ಮೊದಲ ಆದ್ಯತೆ
9	ಶುಶ್ರೂಷಕಿಯರು	14	ಲಕ್ಷ್ಯಕಾರ್ಯಕ್ರಮ + Obstetric HDU/ICU	ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಎಂಎಸ್‌ಸಿ/ ಬಿಎಸ್‌ಸಿ/ಡಿಪ್ಲೋಮೊ ಜಿಎನ್‌ಎಂ ನರ್ಸಿಂಗ್ ಪದವಿ ಹೊಂದಿರಬೇಕು. ಕರ್ನಾಟಕಕೌನ್ಸಲಿಂಗ್‌ನಲ್ಲಿ ನೊಂದಾವಣೆ/ ಮರು ನಮೀಕರಣ ಹೊಂದಿರಬೇಕು. ಈ ಹಿಂದೆ ಎನ್‌ಹೆಚ್‌ಎಂ ಯೋಜನೆಯಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವ ಮಹಿಳಾ ಶುಶ್ರೂಷಕಿಯರಿಗೆ ಮೊದಲ ಆದ್ಯತೆ
10	ಶುಶ್ರೂಷಕಿಯರು ಶಾಲಾ	30	ICU /HDU at DH & TH	MSc/BSc/Diploma in Nursing ,Preference will be given MSc/BSc Graduates. Essential Experience 2 Years in Public/Govt Health Programmes, Preference for Experience in NHM
11	ಆರೋಗ್ಯತಂಡದ ವೈದ್ಯಾಧಿಕಾರಿಗಳು	01	ರಾಷ್ಟ್ರೀಯ ಬಾಲ ಸ್ವಾಸ್ಥ್ಯಕಾರ್ಯಕ್ರಮ	MBBS /BAMS 2 Years Experience in Public Health/ Govt Health Programma .
12	OT Technician	01	ICU /HDU	Diploma in OT Technician from Recognized Institution
13	Engineer-I (civil)	01		B.E/B.Tech in Civil /Electrical /Mechanical Engineering, Preference will be given B.E/B.Tech Graduates. Essential 2 Years Experience in hospital or hospital Maintenance work , Preference for Experience in NHM
14	Engineer-II (Bio medical)	01		B.E/B.Tech in Bio medical Engineering /Medical Electronics MSc in Bio medical Instrumentation Preference will be given B.E/B.Tech Graduates. Essential 2 Years Experience in hospital or hospital Maintenance work, Preference for Experience in NHM
15	ಎಂಬಿಬಿಎಸ್ ವೈದ್ಯರು/ಆಯುಷ್ ವೈದ್ಯರು	01	ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ	ಎಂ.ಬಿ.ಬಿ.ಎಸ್. ಉತ್ತೀರ್ಣರಾಗಿರಬೇಕು, ಕಡ್ಡಾಯವಾಗಿ Internship ಪೂರೈಸಿರಬೇಕು ಹಾಗೂ ಕೆ.ಎಮ್.ಸಿ.ಯ ನೊಂದಣಿಯನ್ನು ಹೊಂದಿರತಕ್ಕದು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ Convocation/ Degree certificate ಅನ್ನು ಹೊಂದಿರಬೇಕು. ಎಂಬಿಬಿಎಸ್ ವೈದ್ಯರು ಲಭ್ಯವಿಲ್ಲದಿದ್ದಲ್ಲಿ, ದ್ವಿತಿಯ ಆಧ್ಯತೆಯಲ್ಲಿ ಆಯುಷ್ ವೈದ್ಯರನ್ನು ಪರಿಗಣಿಸಲಾಗುವುದು.
16	ಕಿರಿಯಾ ಮಹಿಳಾ ಆರೋಗ್ಯ ಸಹಾಯಕಿಯರು	01	ರಾಷ್ಟ್ರೀಯ ನಗರಆರೋಗ್ಯ ಅಭಿಯಾನ	ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಿರಿಯಾ ಮಹಿಳಾ ಆರೋಗ್ಯ ಸಹಾಯಕಿ ತರಬೇತಿ ಹೊಂದಿರಬೇಕು. ಕರ್ನಾಟಕ ನರ್ಸಿಂಗ್ ಕೌನ್ಸಲಿಂಗ್‌ನಲ್ಲಿ ನೊಂದಾವಣೆಯಾಗಿರಬೇಕು.
17	ಫಾರ್ಮಸಿಸ್ಟ್	01	ರಾಷ್ಟ್ರೀಯ ನಗರಆರೋಗ್ಯ ಅಭಿಯಾನ	ಬಿ–ಫಾರ್ಮ ಅಥವಾ ಡಿ–ಫಾರ್ಮ ತರಬೇತಿಯನ್ನು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ/ಶಾಲೆಯಲ್ಲಿ ಮಾತ್ರ ಪಡೆದಿರಬೇಕು.
18	ಕಿರಿಯ ಪುರುಷ ಆರೋಗ್ಯ ಸಹಾಯಕರು	11	ರಾಷ್ಟ್ರೀಯನಗರ ಆರೋಗ್ಯ ಅಭಿಯಾನ	01.ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆಯೋಗ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿದೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಪಡೆದಿರಬೇಕು. 02. ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. 03. ಪಿ.ಯು.ಸಿ(ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು.

ಅಸಕ್ತರು ಅರ್ಜಿಗಳನ್ನು ದಿನಾಂಕ: 17/09/2021 ರಂದು ಬೆಳಗ್ಗೆ 10–30 ರಿಂದ 2–00 ಗಂಟೆವರೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ಶ್ರೀರಾಮನಗರ ರಸ್ತೆ, ದಾವಣಗೆರೆ ಎಸ್.ಎಸ್.ಆಸ್ಪತ್ರೆ ಹಿಂಭಾಗ, ಎನ್.ಸಿ.ಸಿ. ಕ್ಯಾಂಪ್ ಪಕ್ಕ, ದಾವಣಗೆರೆ ಇಲ್ಲಿ ಅರ್ಜಿಗಳನ್ನು ವಿತರಿಸಿ ಪಡೆಯಲಾಗುವುದು. ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸರಿಯಾದ ವಿವರಗಳನ್ನು ತುಂಬಿ, ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಪರಿಶೀಲನೆಗೆ ಹಾಜರು ಪಡಿಸುವುದು. ಭರ್ತಿ ಮಾಡಿದ ಅರ್ಜಿಯೊಂದಿಗೆ ಇತ್ತೀಚಿನ ಭಾವಚಿತ್ರ ಹಾಗೂ ಒಂದು ಸೆಟ್ ಸ್ವಯಂಧೃಡಿಕೃತ ದಾಖಾಲಾತಿಗಳನ್ನು ಲಗತ್ತಿಸಿ ಅದೇ ದಿನ ಸಂಜೆ 5–00 ಗಂಟೆಗೆಯೊಳಗೆ ಅರ್ಜಿಗಳನ್ನು ಹಿಂದಿರುಗಿಸತಕ್ಕದು ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ಥಾನಿಕರಿಗೆ ಆದ್ಯತೆ ಹಾಗೂ ಸರ್ಕಾರದ /ಇಲಾಖೆಯ ನಿಯಾಮವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಮೇಲೆ ನಮೂದಿಸಿದ ಹುದ್ದೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು ಯಾವುದೇಕಾರಣ ನೀಡದೇ ಈ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ತೀರ್ಮಾನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಾಗಿರುತ್ತದೆ.
ಸಹಿ/– ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ. ವಾಸಾಇ/ದಾವಣಗೆರೆ/367/ಎಂಸಿಎ/2021–22 ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದಾವಣಗೆರೆ ಜಿಲ್ಲೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
C/o ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ರಾಜೇನಹಳ್ಳಿ, ಮಾಲೂರು ತಾ॥, ಕೋಲಾರ ಜಿಲ್ಲೆ
ಸಂ.: ಕವಶಿಸಸ/ಸಕಾಅ/ಟೆಂಡರ್–07/2021–22 ದಿನಾಂಕ: 06.09.2021
ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೋಲಾರ ಜಿಲ್ಲೆಯಲ್ಲಿನ ವಸತಿ ಶಾಲೆಗಳಿಗೆ ಕೊಳವೆ ಬಾವಿ ಕೊರೆಯುವ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 2907 ಪ. ಜಾತಿಯ ಗುತ್ತಿಗೆದಾರರಿಗೆ ಮೀಸಲು, 2908 ಪ. ವರ್ಗದ ಗುತ್ತಿಗೆದಾರರಿಗೆ ಮೀಸಲು, 2909, 2910 & 2911)
ಇ–ಪೋರ್ಟಲ್ ಮುಖಾಂತರ ದಿನಾಂಕ: 06.09.2021ರಂದು ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 21.09.2021ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ನೋಡಬಹುದಾಗಿದೆ. ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ಉನಿನ/ಎಲ್‌ಸಿ/1437/2021–22 ಕ.ವ.ಶಿ.ಸ.ಸ., ಕೋಲಾರ ಜಿಲ್ಲೆ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ತಿದ್ದುಪಡಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 1) 2021–22 ನೇ ಸಾಲಿನ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೆ ಸಂಬಂಧಿಸಿದ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಕಾಮಗಾರಿಗಳಿಗೆ 2) 2019–20ನೇ ಸಾಲಿನ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೆ ಸಂಬಂಧಿಸಿದ 2ನೇ ಕರೆಯ ಎಸ್.ಸಿ.ಪಿ ಕಾಮಗಾರಿ ಹಾಗೂ 3) Supply of electronic items to MD office, CE office, SE office and EE office ,VJNL,Tumkur for the year 2021–22 ಕಾಮಗಾರಿಗೆ "ಶೇಕಡಾವಾರು ದರಗಳಲ್ಲಿ" ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರರಿಂದ, ಟೆಂಡರ್‌ಗಿಟ್ಟ ಮೊತ್ತ ರೂ.5.70 ಲಕ್ಷಗಳಿಂದ ರೂ.200.00 ಲಕ್ಷಗಳ ವರೆಗೆ ಟೆಂಡರ್ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರ್‌ನ ದಾಖಲೆಗಳನ್ನು. ಇ–ಪ್ರೊಕ್ಯೂರ್‌ಮೆಂಟ್‌ನ https://eproc.karnataka.gov.in ವೆಬ್‌ಸೈಟ್‌ನಿಂದ ದಿನಾಂಕ: 07.09.2021 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 14.09.2021 ರಂದು ಘಂಟೆ 17:00ರವರೆಗೆ ಟೆಂಡರ್‌ಗಳನ್ನು ಸಲ್ಲಿಸಲು ಮುಂದೂಡಲಾಗಿದೆ. ಇತರೆ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು. ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ದೂರವಾಣಿ: 080-23407011-25, ಫ್ಯಾಕ್ಸ್:91-080-23208970, ವೆಬ್‌ಸೈಟ್:www.kssidc.co.in
ಸಂಖ್ಯೆ: ವಾಣಿಜ್ಯ/ಕಸಾ:/ಸಾಗಣೆ/3ನೇ ಕರೆ ಟೆಂಡರ್/2021–23 ದಿನಾಂಕ : 07.09.2021
ಇ–ಪೋರ್ಟಲ್ ಮುಖಾಂತರ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ಸಾಗಣೆಗಾಗಿ 3ನೇ ಕರೆ ಟೆಂಡರ್ ಪ್ರಕಟಣೆ.
ಹ್ಯಾಂಡಲಿಂಗ್ / ನಿರ್ವಹಣೆ, ಲೋಡಿಂಗ್, ಅನ್‌ಲೋಡಿಂಗ್ ಮತ್ತು ಸ್ಟಾಕಿಂಗ್ ಒಳಗೊಂಡಂತೆ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ರಸ್ತೆ ಮೂಲಕ ಸಾಗಣೆ ಮಾಡುವ ಸಲುವಾಗಿ ಎರಡು (2) ವರ್ಷಕ್ಕೆ ಅರ್ಹ ಗುತ್ತಿಗೆದಾರರನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಆಹ್ವಾನಿಸಲಾಗಿದೆ. ವರ್ಷಕ್ಕೆ ಅಂದಾಜು 1500 ರಿಂದ 2000 ಮೆ.ಟನ್ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿ ಮತ್ತು ಸುರುಳಿಗಳು, ಇಚ್ಛೆಯುಳ್ಳ ಅರ್ಹ ಸಾಗಣೆ ಗುತ್ತಿಗೆದಾರರು ತಮ್ಮ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಅಪಲೋಡ್ ಮಾಡಬಹುದಾಗಿದೆ. ನಿಗಮದ ವೆಬ್‌ಸೈಟ್ www.kssidc.co.in ಮೂಲಕ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್ ಸಂಖ್ಯೆ 8884415756, 8884415758, ಹಾಗೂ 9113033505 ಸಂಪರ್ಕಿಸಬಹುದಾಗಿದೆ.
ಇ–ಪೋರ್ಟಲ್‌ನಲ್ಲಿ ನೋಂದಾಯಿಸಲು ಹಾಗೂ ಹೆಚ್ಚಿನ ವಿವರಗಳನ್ನು (ಟೆಂಡರ್ ಷರತ್ತು ಮತ್ತು ನಿಬಂಧನೆಗಳಿಗಾಗಿ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ https://eproc.karnataka.gov.in ದಿನಾಂಕ 07.09.2021 ರ ನಂತರ ಪಡೆಯಬಹುದಾಗಿದೆ ಮತ್ತು ಟೆಲಿಫೋನ್ ಸಂಖ್ಯೆ 080 46010000/ 080 68948777 ಸಂಪರ್ಕಿಸಬಹುದಾಗಿದೆ ಹಾಗೂ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 05.10.2021 ಸಂಜೆ 4.00.ಗಂಟೆಯವರೆಗೆ.
ಸಹಿ/– ಪ್ರಧಾನ ವ್ಯವಸ್ಥಾಪಕರು(ವಾ)
ವಾಸಾಸಂಇ/ಬೆಂ.ನ/ಜಿಎ/1430/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೊದಲನೇ ಮಹಡಿ 'ಎ' ಬ್ಲಾಕ್ "ರಜತಾದ್ರಿ" ಮಣಿಪಾಲ, ಉಡುಪಿ–576104
ಇ–ಮೇಲ್: sgdmgudupi@gmail.com, ದೂರವಾಣಿ: 0820–2572333
ಸಂಖ್ಯೆ:ಗಭೂಇ/ಹಿಭೂ(ಉಡುಪಿ)/ಇ–ಟೆಂಡರ್/2021–22/ ದಿನಾಂಕ: 04.09.2021
ಅಧಿಸೂಚನೆ
ಉಡುಪಿ ಜಿಲ್ಲೆಯ, ಬ್ರಹ್ಮಾವರ ತಾಲ್ಲೂಕಿನ ಬಾಳ್ಕುದ್ರು ವ್ಯಾಪ್ತಿಯ ಹಂಗಾರಕಟ್ಟೆ ಪರಿಸರದಲ್ಲಿನ ವಾಟರ್ ವೇಸ್ ಶಿಪ್‌ಯಾರ್ಡ್ ಬಳಿ ಅನಧಿಕೃತವಾಗಿ ದಾಸ್ತಾನಿರಿಸಿದ 5,414 ಮೆ.ಟನ್ ಸಿಲಿಕಾ ಮರಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ 1994ರ ನಿಯಮ 47(1) ರಂತೆ ಹರಾಜು ಮೂಲಕ ವಿಲೇವರಿ ಮಾಡಲು ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರಿಂದ ದಿನಾಂಕ: 30.03.2021ರಂದು ಅನುಮೋದನೆ ಪಡೆಯಲಾಗಿರುತ್ತದೆ.
ಅದರಂತೆ ಸಿಲಿಕಾ ಮರಳು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ರಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.09.2021 ಆಗಿರುತ್ತದೆ. ಇ–ಹರಾಜು ಲೈವ್ ಬಿಡ್ಡಿಂಗ್ ದಿನಾಂಕ: 12.09.2021ರಂದು ಸಾಯಂಕಾಲ 5.00 ರಿಂದ ದಿನಾಂಕ: 13.09.2021ರಂದು ಸಾಯಂಕಾಲ 5.00 ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಅರ್ಜಿಯನ್ನು ಹಾಗೂ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಜತಾದ್ರಿ, ಮಣಿಪಾಲ, ಉಡುಪಿ (ದೂರವಾಣಿ ಸಂಖ್ಯೆ: 0820–2572333) ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
ಸಹಿ/– ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಆಯುಕ್ತರವರ ಕಛೇರಿ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ : 080 – 22253783, 22254071
ಸಂಖ್ಯೆ : ಸಕಇ/ಪ.ಪೂ.ತ.ಕೇ/ಎಸ್–7/ಸಿಆರ್–10/2021–22 ದಿನಾಂಕ : 06.09.2021
ಪ್ರಕಟಣೆ
2021–22ನೇ ಸಾಲಿಗೆ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಯು.ಪಿ.ಎಸ್.ಸಿ/ಕೆ.ಎ.ಎಸ್/ ಬ್ಯಾಂಕಿಂಗ್/ ಗ್ರೂಪ್–ಸಿ/ ಆರ್‌ಆರ್‌ಬಿ ಮತ್ತು ಎಸ್‌ಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಹ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 15 ದಿನಗಳ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ಪ್ರಕಟಣೆ ಸಂಖ್ಯೆಗಳು ಕೆಳಗಿನಂತಿವೆ. (1) U.P.S.C. examination Coaching: SWD/ PETC/S7/CR-10/UPSC/2021-22. (2) K.A.S. examination Coaching: SWD/PETC/S7/CR-10/ KAS/ 2021-22. (3) Banking, examination Coaching: SWD/ PETC/S7/CR-10/Banking/2021-22. (4) R.R.B. examination Coaching: SWD/PETC/S7/CR-10/ RRB/2021-22. (5) S.S.C examination Coaching: SWD/PETC/S7/CR-10/SSC/2021-22. (6) Group-C, examination Coaching: SWD/PETC/S7/CR-10/Group-C/2021-22. ವಿವರಗಳಿಗೆ http//:eproc.karnataka.gov.in ವೆಬ್‌ಸೈಟ್ ನೋಡಬಹುದಾಗಿದೆ. "ಟೆಂಡರ್ ಸ್ವೀಕರಿಸುವ ಪ್ರಾರಂಭ ದಿನಾಂಕ: 06.09.2021 ಹಾಗೂ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 24.09.2021 ರಂದು ಸಂಜೆ 5.30 ಗಂಟೆ".
ಸಹಿ/– ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
ವಾಸಾಸಂಇ/ಬೆಂ.ನ./ಶಿರಡಿ ಸಾಯಿ/1440/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಬೊಮ್ಮನಹಳ್ಳಿ ವಿಭಾಗ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು-560068.
ಸಂಖ್ಯೆ:ಬೃಬೆಂಮಪಾ/ಕಾಪಾಅ/ಬೋವಿ/ಟೆಂಡರ್/06/2021-22 ದಿನಾಂಕ: 04-09-2021
ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ) ಕೆಡಬ್ಲ್ಯೂ: 3 ಮತ್ತು 4
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ ಸಿ.ಪಿ.ಡಬ್ಲ್ಯೂ.ಡಿ / ಬಿಡಬ್ಲ್ಯೂಎಸ್‌ಎಸ್‌ಬಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ನ ಅಂದಾಜು ಮೊತ್ತ ರೂ. ಲಕ್ಷಗಳು
1)	ವಾರ್ಡ್ ನಂ.189ರ ಹೊಂಗಸಂದ್ರದ ಮುನಿಯಪ್ಪ ಬಡಾವಣೆಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಹಾಗೂ 7ನೇ ಮುಖ್ಯರಸ್ತೆ 4ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಯುಜಿಡಿ ಕಾಮಗಾರಿಗಳು (4ನೇ ಕರೆ).	55.00
2)	ವಾರ್ಡ್ ನಂ.193ರ ಅರಕೆರೆಯ ಹುಳಿಮಾವಿನಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ (6ನೇ ಕರೆ).	60.00
3)	ಪ್ಯಾಕೇಜ್–1–ಬಿಜಡ್–ಬಿಡಿ–(ಡಬ್ಲ್ಯೂ–189) • ಓಂಶಕ್ತಿ ಬಡಾವಣೆಯ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳ ಸುಧಾರಣಾ ಕಾಮಗಾರಿ, • ಎಪಿಆರ್ ಕಲ್ಯಾಣ ಮಂಟಪ ರಸ್ತೆ ಹಾಗೂ ಸುತ್ತಲಿನ ಪ್ರದೇಶದ ರಸ್ತೆಯ ಡಾಂಬರೀಕರಣ ಹಾಗೂ ಒಳಚರಂಡಿಗಳ ಸುಧಾರಣಾ ಕಾಮಗಾರಿ, • ಶಾಂತಿನಗರ ರಸ್ತೆ ಮತ್ತು ಸುತ್ತಲಿನ ಪ್ರದೇಶಗಳ ಸಿಸಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ, • ಎಂಎಸ್‌ಆರ್ ಬಡಾವಣೆ ಮತ್ತು ಸುತ್ತಲಿನ ಪ್ರದೇಶದ ಒಳಚರಂಡಿಗಳ ಸುಧಾರಣಾ ಕಾಮಗಾರಿ.	280.00
4)	ಪ್ಯಾಕೇಜ್–2–ಬಿಜಡ್–ಬಿಡಿ–(ಡಬ್ಲ್ಯೂ–174, 189, 193) ವಾರ್ಡ್ ನಂ.174ರ ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ನಾಮಫಲಕಗಳು ಮತ್ತು ಸಿಸಿ ಕ್ಯಾಮರ ಒದಗಿಸುವುದು, ವಾರ್ಡ್ 189ರ ಹೊಂಗಸಂದ್ರದಲ್ಲಿ ಸಿಸಿ ಕ್ಯಾಮರ ಒದಗಿಸಿ ಅಳವಡಿಸುವುದು, ವಾರ್ಡ್ 193ರ ಅರಕೆರೆಯಲ್ಲಿ ಸಿಸಿ ಕ್ಯಾಮರ ಮತ್ತು ಎಲ್ಲಾ ಭಾಗಗಳನ್ನು ಒದಗಿಸಿ ಸರಬರಾಜು ಮಾಡುವುದು ಮತ್ತು ಅಳವಡಿಸುವುದು (3ನೇ ಕರೆ).	299.00
5)	ಪ್ಯಾಕೇಜ್–3–ಬಿಜಡ್–ಬಿಡಿ–(ಡಬ್ಲ್ಯೂ–186, 189, 193) ವಾರ್ಡ್ ನಂ.186ರ ಜರಗನಹಳ್ಳಿಯಲ್ಲಿ ಸ್ಟೈನ್‌ಲೆಸ್ ಸ್ಟೀಲ್ ರಸ್ತೆ ಸಂಕೇತ ಫಲಕಗಳನ್ನು ಒದಗಿಸುವುದು, ವಾರ್ಡ್ 189ರ ಹೊಂಗಸಂದ್ರದಲ್ಲಿ ಸ್ಟೈನ್‌ಲೆಸ್ ಸ್ಟೀಲ್ ರಸ್ತೆ ಸಂಕೇತ ಫಲಕಗಳನ್ನು ಒದಗಿಸುವುದು, ವಾರ್ಡ್ 193ರ ಅರಕೆರೆಯಲ್ಲಿ ರಸ್ತೆ ನಾಮಫಲಕಗಳನ್ನು ಒದಗಿಸಿ ಸರಬರಾಜು ಮಾಡುವುದು ಮತ್ತು ಅಳವಡಿಸುವುದು (3ನೇ ಕರೆ).	310.00
6)	ಪ್ಯಾಕೇಜ್–4–ಬಿಜಡ್–ಬಿಡಿ–(ಡಬ್ಲ್ಯೂ–174) ವಾರ್ಡ್ ನಂ.174ರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹೆಚ್‌ಎಸ್‌ಆರ್ ಬಡಾವಣೆ 1ನೇ ವಲಯದಲ್ಲಿ ಉದ್ಯಾನವನದ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.174ರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಹೆಚ್‌ಎಸ್‌ಆರ್ ಬಡಾವಣೆ 3ನೇ ವಲಯದಲ್ಲಿ ಉದ್ಯಾನವನದ ಅಭಿವೃದ್ಧಿ ಕಾಮಗಾರಿ.	400.00

ಇಎಂಡಿ ಮೊತ್ತ (ಲಕ್ಷಗಳಲ್ಲಿ) : ಇಎಂಡಿಗೆ ಬದಲಾಗಿ ಟೆಂಡರ್ ಮಾಡುವವರು ಸರ್ಕಾರಿ ಆದೇಶ ಸಂಖ್ಯೆ ಆಇ 675 ವೆಚ್ಚ 12/2020, ಆಯುಕ್ತರು/ಪಿಆರ್/ಇ-9251/2020-21 ದಿನಾಂಕಃ 30-01-2021 ರಿತ್ಯಾ ಗುತ್ತಿಗೆದಾರರು ಇಎಂಡಿ ವಿನಾಯಿತಿ ಪಡೆಯಲು ಅನುಭಂದ-ಎ ರಂತೆ ಪ್ರಮಾಣಪತ್ರವನ್ನು ಸ್ವಯಂ ದೃಢೀಕರಣದೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿ ಸಲ್ಲಿಸುವುದು. ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 07-09-2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಪೂರ್ವ ಬಿಡ್ ಸಭೆಯ ದಿನಾಂಕ: 14-09-2021ರ ಬೆಳಗ್ಗೆ 11:00 ಗಂಟೆಗೆ. 3. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 21-09-2021 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 22-09-2021ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೋಪಕ್ಕೊಂದು ಕಡಿವಾಣ

ಕೋಪವೂ ಉಳಿದ ಭಾವನೆಗಳಂತೆಯೇ ಶಕ್ತಿಯ ಒಂದು ರೂಪ; ಒಂದೇ ಶಕ್ತಿ, ವಿವಿಧ ಸಂದರ್ಭಗಳಿಗನುಗುಣವಾಗಿ ಸಂತೋಷ, ಆನಂದ, ಆಸೆ, ದುಃಖ ಭಯ ಕ್ರೋಧ - ಹೀಗೆ ಹಲವು ರೂಪಗಳಲ್ಲಿ ವ್ಯಕ್ತಗೊಳ್ಳುತ್ತವೆ.

ಮಂಜುನಾಥ ಕೊಳ್ಳೇಗಾಲ

ಕೋಪ ಯಾರಿಗೆ ಬರುವುದಿಲ್ಲ? ಸಾಕ್ಷಾತ್ ಪರಮಾತ್ಮನೇ ಪ್ರಳಯರುದ್ರನಾಗುತ್ತಾನೆ ಎಂದಮೇಲೆ ಹುಲುಮಾನವರ ಪಾಡೇನು? ಕೋಪದ ಪರಿಣಾಮವಂತೂ ಒಂದು ಮಟ್ಟಿನ ನಾಶವೇ ಸರಿ, ಮಿತಿಮೀರಿದಲ್ಲಿ ಸರ್ವನಾಶವೂ ಆದೀತು - 'ಕೋಪವೆಂಬುದನರ್ಥಸಾಧನ' ಎಂದು ದಾಸರೂ ಹೇಳಿದ್ದಾರಷ್ಟೇ. ಈ 'ಅನರ್ಥ' ಹೇಗಾಗುತ್ತದೆಂಬುದನ್ನು ಭಗವದ್ಗೀತೆಯ ಶ್ಲೋಕವೊಂದು ಬಹುಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ:

ಧ್ಯಾಯತೋ ವಿಷಯಾನ್ ಪುಂಸಃ
ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ ಕಾಮಾತ್
ಕ್ರೋಧೋಭಿಜಾಯತೇ
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್
ಸ್ಮೃತಿವಿಭ್ರಮಃ
ಸ್ಮೃತಿಭ್ರಂಶಾತ್ ಬುದ್ಧಿನಾಶಃ ಬುದ್ಧಿನಾಶಾತ್ ಪ್ರಣಶ್ಯತಿ



ಪ್ರಾಪಂಚಿಕ ವಿಷಯಗಳನ್ನೇ ನೆನೆಯುತ್ತಿದ್ದರೆ (indulgence ಎನ್ನುತ್ತೇವಲ್ಲ, ಅದು), ಆ ವಿಷಯಗಳೊಡನೆ ನಂಟು ಬೆಳೆಯುತ್ತದೆ. ಆ ನಂಟಿನಿಂದ ಬಯಕೆ, ಬಯಕೆಯಿಂದ (ಅದು ಕೈಗೂಡದಿದ್ದರೆ) ಕ್ರೋಧ, ಕ್ರೋಧದಿಂದ ಬುದ್ಧಿ ಮಸುಕಾಗುತ್ತದೆ, ಬುದ್ಧಿ ಮಸುಕಾಗುವುದರಿಂದ ವಿವೇಕ ಕದಡುತ್ತದೆ, ಅದರಿಂದ ಬುದ್ಧಿ ನಾಶವಾಗುತ್ತದೆ, ಬುದ್ಧಿ ನಾಶವಾದ ಮೇಲೆ ಉಳಿಯುವುದೇನಿದೆ? ಸರ್ವನಾಶ.

ಹಾಗಿದ್ದರೆ ಆಶೆಯನ್ನೇ ಬಿಟ್ಟುಬಿಟ್ಟರೆ ಸರ್ವನಾಶವನ್ನು ತಪ್ಪಿಸಬಹುದೇ (ಆಸೆಯೇ ದುಃಖಕ್ಕೆ ಮೂಲಕಾರಣವೆಂದು ಬುದ್ಧನೂ ಹೇಳಿದ್ದಾನಲ್ಲ)? ಆದರೆ ಇದು ಹೇಳಿದಷ್ಟು ಸುಲಭವಲ್ಲ. ಇಡೀ ಪ್ರಪಂಚವೇ ಬದುಕಿನಲ್ಲಿ ಆಸಕ್ತಿಯನ್ನು ಕಳೆದುಕೊಂಡು ಬಿಟ್ಟರೆ ಪ್ರಪಂಚ ನಡೆಯುವುದಾದರೂ ಹೇಗೆ? ಎಂದಮೇಲೆ ಆಶೆಯನ್ನು ಬಿಟ್ಟುಬಿಡುವುದು ಪ್ರಕೃತಿಯ ನಿಯಮಕ್ಕೇ ವಿರುದ್ಧವಾಯಿತಲ್ಲ. ಹಾಗಿದ್ದರೆ ಆಶೆಯೂ, ಅದರಿಂದುಂಟಾಗುವ ವೈಫಲ್ಯವೂ, ಅದರಿಂದುಂಟಾಗುವ ಕೋಪವೂ, ಅದರಿಂದುಂಟಾಗುವ ನಾಶವೂ ಸಹಜವಾದದ್ದೇ ಎನ್ನಬೇಕಷ್ಟೇ. ಆದ್ದರಿಂದ ನಮಗುಳಿವ ದಾರಿ, ಕೋಪದೊಡನೆ ಬದುಕುವುದನ್ನು ಕಲಿಯುವುದಷ್ಟೇ.

ಕೋಪವೂ ಉಳಿದ ಭಾವನೆಗಳಂತೆಯೇ ಶಕ್ತಿಯ ಒಂದು ರೂಪ; ಒಂದೇ ಶಕ್ತಿ, ವಿವಿಧ ಸಂದರ್ಭಗಳಿಗನುಗುಣವಾಗಿ ಸಂತೋಷ, ಆನಂದ, ಆಶೆ, ದುಃಖ, ಭಯ, ಕ್ರೋಧ - ಹೀಗೆ ಹಲವು ರೂಪಗಳಲ್ಲಿ ವ್ಯಕ್ತಗೊಳ್ಳುತ್ತವೆ. ನೀವು ಗಮನಿಸಿರಬಹುದು. ಭಾವೋದ್ವೇಗಕ್ಕೊಳಗಾದಾಗ ಎದೆಬಡಿತ ಹೆಚ್ಚಾಗುತ್ತದೆ, ಮೈ ಬಿಸಿಯೇರುತ್ತದೆ, ಭಾವನೆಯನ್ನು ಕಾರ್ಯರೂಪಕ್ಕಿಳಿಸಲು ಅಂಗಾಂಗಗಳು ತುಡಿಯುತ್ತವೆ. ಇವೆಲ್ಲಾ ಭಾವನೆಯೆಂಬ ಶಕ್ತಿಯ ಕೆಲಸವೇ. ನೆಮ್ಮದಿ, ಆನಂದ, ಬೇಸರ, ವಿಷಾದ ಇವು ಮೃದುಭಾವನೆಗಳು. ಮನಸ್ಸಿನ ಮಟ್ಟದಲ್ಲೇ ಇರುವಂಥವು. ಇವು ದೇಹದ ಮಟ್ಟಕ್ಕೆ ಬಂದು ಕಾರ್ಯರೂಪಕ್ಕಿಳಿಯುವ ಮೊದಲು ಚಿಂತಿಸಲು ಬೇಕಾದಷ್ಟು ಅವಕಾಶವಿರುತ್ತದೆ. ಉದ್ವೇಗ, ಸಂತೋಷ, ಆತಂಕ, ದುಃಖ - ಇವು ಸ್ವಲ್ಪ ತೀವ್ರಭಾವನೆಗಳು - ಬಹುಬೇಗ ಮುಂದಿನ ಸ್ತರಕ್ಕೆ ಜಿಗಿಯಲೆಳಸುತ್ತವೆ. ಮುಂದಿನ ಹಂತದಲ್ಲಿ ಉನ್ಮಾದ, ಭಯ, ಕೋಪ ಇವು ಇನ್ನೂ ತೀವ್ರ. ಇವುಗಳಿಗೆ ದೇಹ, ದೇಹದ ಕಾರ್ಯಾಂಗಗಳು ತೀವ್ರವಾಗಿ ಸ್ಪಂದಿಸತೊಡಗುತ್ತವೆ. ಇವುಗಳನ್ನು ನಿಯಂತ್ರಿಸಲು ಹೆಣಗಬೇಕಾಗುತ್ತದೆ. ಮುಂದಿನ, ಅತ್ಯುತ್ಕಟ ಹಂತದಲ್ಲಿ ಭಯವೂ ಅಡಗಿ, ಕೋಪೋನ್ಮಾದಗಳು ತೀವ್ರಗೊಳ್ಳುತ್ತವೆ. ನಿಯಂತ್ರಿಸಲು ಇದು ನಿಜಕ್ಕೂ ಸವಾಲಾಗಿಬಿಡುತ್ತದೆ.

ಚಿಂತನಶಕ್ತಿ ಕಡಿಮೆಯಿರುವ ಪ್ರಾಣಿಗಳಲ್ಲಿ ಭಾವೋದ್ವೇಗದ ಕ್ರಿಯೆ ಪ್ರತಿಕ್ರಿಯೆಗಳು ಸರಳ. ಸಾಮಾನ್ಯವಾಗಿ ಪ್ರಾಣಿಗಳಲ್ಲಿ ಭಯವೆನ್ನುವುದು ಎರಡು ರೀತಿಯ ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತದೆ - ಆಕ್ರಮಣ ಮಾಡು ಅಥವಾ ಓಡು - ಇದನ್ನು fight or flight instinct ಎನ್ನುತ್ತಾರೆ. ಬಹುಮಟ್ಟಿಗೆ ವಿವೇಕವಿನ್ನೂ ಬೆಳೆದಿರದ ಸಣ್ಣ ಮಕ್ಕಳಲ್ಲೂ ಈ ಸ್ವಭಾವವನ್ನು ಕಾಣುತ್ತೇವೆ. ಆದರೆ ಮನುಷ್ಯ ಬೆಳೆಯುತ್ತಾ ಭಾವನೆಗಳ ಮೇಲೆ ನಿಯಂತ್ರಣವನ್ನು ಸಾಧಿಸುತ್ತಾನೆ; ಸಮಸ್ಯೆಗಳನ್ನು ಬೌದ್ಧಿಕವಾಗಿ ಪರಿಗಣಿಸುತ್ತಾನೆ, ಚಿಂತಿಸುತ್ತಾನೆ, ಹೇಗೆ ಪ್ರತಿಕ್ರಿಯಿಸಬೇಕೆಂದು ಚಿಂತಿಸಿ ಪ್ರತಿಕ್ರಿಯಿಸುತ್ತಾನೆ. ಸಮಸ್ಯೆ ನಿಭಾಯಿಸಲು ಕೇವಲ ಕೈಕಾಲುಗಳನ್ನಲ್ಲದೇ ತನ್ನಲ್ಲಿರುವ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಳ್ಳುತ್ತಾನೆ, ಹಾಗೆಯೇ ಅನುಭವದ ಮೇಲೆ ಅಂತಹ ಹಲವು ಸೌಲಭ್ಯಗಳನ್ನು ಬೆಳೆಸಿಕೊಳ್ಳುತ್ತಾನೆ. ಆದರೂ ಈ ಪ್ರಬುದ್ಧತೆಯ ಮಟ್ಟವನ್ನೂ ಮೀರಿದ ಸನ್ನಿವೇಶಗಳು ಏರ್ಪಟ್ಟರೆ ಮನುಷ್ಯನ ವಿವೇಕ ಹಾರಿಹೋಗಿ ಆತನ ಮೂಲಭೂತ ಪ್ರತಿಕ್ರಿಯೆಯಾದ fight or flight ಮುನ್ನೆಲೆಗೆ ಬರುವ ಸಾಧ್ಯತೆಯಿದೆ. ನಿಜಕ್ಕೂ ಎಚ್ಚರವಿರಬೇಕಾದ್ದು ಇಂತಹ ಸಂದರ್ಭಗಳ ಬಗೆಗೆ.

ಕೋಪವು ವ್ಯಕ್ತಿಯ ಸ್ವಭಾವ ಮತ್ತು ಸಂದರ್ಭಗಳ ಉತ್ಪನ್ನವಾದುದರಿಂದ ಅದನ್ನು ನಿಯಂತ್ರಿಸಲು ಇಂಥದ್ದೇ ದಾರಿಯೆಂಬುದಿಲ್ಲ. ಕೋಪ ಬಂದಾಗ ಹತ್ತೆಣಿಸುವುದರಿಂದ ಹಿಡಿದು, ಮೂಗಿನ ತುದಿಯನ್ನು ಕೇಂದ್ರೀಕರಿಸಿ ಧ್ಯಾನ ಮಾಡುವವರೆಗೂ ಪ್ರಾಚೀನ ಕಾಲದಿಂದ ಹಲವು ವಿಧಾನಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ನೀರುಕುಡಿಯುವುದು, ತಂಗಾಳಿಯಲ್ಲಿ ಅಡ್ಡಾಡಿ ಬರುವುದು ಅಥವಾ ಫ್ಯಾನಿನ ಕೆಳಗೆ ಕೂರುವುದು ಇವೂ ಸಹಾಯಕವಾಗಬಲ್ಲುದು. ಅದೇನೇ ಇರಲಿ, ಇವೆಲ್ಲ ತಾತ್ಕಾಲಿಕವಾಗಿ ಕೋಪದ ಭೌತಿಕಪರಿಣಾಮವನ್ನು ತಗ್ಗಿಸಬಲ್ಲವೇ ಹೊರತು ಕೋಪವನ್ನೇ ನಿಭಾಯಿಸಲಾರವು. ಆದರೂ ಆ ಕ್ಷಣಕ್ಕೆ ಕೋಪವು ತಹಬಂದಿಗೆ ಬಂದರೆ, ಸ್ವಲ್ಪ ತಣ್ಣಗೆ ಯೋಚಿಸಲಾದರೂ ಅವಕಾಶವಾಗುವುದಲ್ಲ, ಅಷ್ಟುಮಟ್ಟಿಗೆ ಈ ಕ್ರಮಗಳೆಲ್ಲವೂ ಪರಿಣಾಮಕಾರಿಯೇ. ಯೋಗ, ಪ್ರಾಣಾಯಾಮ, ಧ್ಯಾನ ಮೊದಲಾದುವು ದೀರ್ಘಕಾಲದಲ್ಲಿ ದೇಹದ ಮತ್ತು ಮನಸ್ಸಿನ ದೃಢತೆಯನ್ನು ಹೆಚ್ಚಿಸುವುದರ ಮೂಲಕ ಕೋಪವನ್ನು ನಿಭಾಯಿಸಲು ಕೆಲಮಟ್ಟಿಗೆ ಸಹಾಯಮಾಡಬಲ್ಲುವು. ಕೋಪವೆಂಬುದು ಪಾಶವೀಶಕ್ತಿಯಷ್ಟೇ? ಸದಭಿರುಚಿಯ ಸಂಗೀತ, ಸಾಹಿತ್ಯ, ಸತ್ಸಂಗಗಳು, ಒಂದಷ್ಟು ಅಧ್ಯಾತ್ಮ ಇವು ಖಂಡಿತ ಮನಸ್ಸನ್ನು ಹದಗೊಳಿಸಿ ಮನಸ್ಸನ್ನು ಮೃಗತ್ವದಿಂದ ಮಾನವತೆಯ ಎತ್ತರಕ್ಕೊಯ್ಯಬಲ್ಲುವು, ಕೋಪದ ನಿಯಂತ್ರಣಕ್ಕೆ ಸಹಾಯ ಮಾಡಬಲ್ಲುವು.

ಎದೆಯುರಿತ ಇಂದು ಬಹುಪಾಲು ಜನರನ್ನು ಕಾಡುತ್ತಿರುವ ಸಮಸ್ಯೆ. ಇದಕ್ಕೆ ಕಾರಣಗಳೇನು? ಪರಿಹಾರಗಳೇನು? ಇಲ್ಲಿದೆ ಮಾಹಿತಿ...

ಎದೆಯುರಿಗೆ ಅವಕಾಶ ಕೊಡದಿರಿ

ಡಾ. ವಿನಯ ಶ್ರೀನಿವಾಸ್

ನಮ್ಮೆಲ್ಲರನ್ನೂ ಒಮ್ಮೆಯಾದರೂ ಕಾಡಿರಬಹುದಾದಂತಹ ಸಮಸ್ಯೆಯೆಂದರೆ ಎದೆಯುರಿ ಅಥವಾ ಗ್ಯಾಸ್ಟ್ರಿಕ್ ಸಮಸ್ಯೆ. ಕೆಲವರನ್ನು ಇದು ಮೇಲಿಂದ ಮೇಲೆ ಕಾಡಿದರೆ, ಇನ್ನು ಕೆಲವರನ್ನು ಯಾವಾಗಲಾದರೊಮ್ಮೆ ಕಾಡುತ್ತದೆ. ಕೆಲವರಲ್ಲಂತೂ ಆಹಾರಕ್ರಮದಲ್ಲಿ ಸ್ವಲ್ಪವೇ ವ್ಯತ್ಯಾಸವಾದರೂ ತುಸು ಹೊತ್ತಿನಲ್ಲೇ ಎದೆಯುರಿಯ ಸಮಸ್ಯೆ ಬಾಧಿಸಲು ಶುರು ಮಾಡುತ್ತದೆ.

ಜಠರದ ಒಳಪದರಗಳಲ್ಲಿ ಉರಿಯೂತವೇ ಈ ಸಮಸ್ಯೆಗೆ ಮೂಲಕಾರಣ. ಸಾಮಾನ್ಯವಾಗಿ ಜಠರವು ಆಹಾರಚೀಲದಂತೆ ಕೆಲಸ ಮಾಡುವುದರ ಜೊತೆಯಲ್ಲಿಯೇ ಜೀರ್ಣಕ್ರಿಯೆಗೂ ಸಹಕರಿಸುತ್ತದೆ. ಜಠರದ ಒಳಪದರಗಳ ಜೀವಕೋಶಗಳು ಹೈಡ್ರೋಕ್ಲೋರಿಕ್ ಆಮ್ಲ ಹಾಗೂ ಪೆಪ್ಸಿನ್ ಎಂಬ ಕಿಣ್ವವನ್ನೂ ಉತ್ಪಾದಿಸುತ್ತವೆ. ಪೆಪ್ಸಿನ್ ಆಹಾರದಲ್ಲಿನ ಪ್ರೊಟೀನ್‌ಗಳನ್ನು ವಿಭಜನೆ ಮಾಡುವಲ್ಲಿ ಸಹಕರಿಸುತ್ತದೆ. ಆದರೆ, ಹೈಡ್ರೋಕ್ಲೋರಿಕ್ ಆಮ್ಲವು ಜಠರದ ಒಳಪದರಗಳ ಮೇಲೆ ಮತ್ತೊಂದು ಪದರವಾಗಿ ನಿಂತು, ಜಠರದ ಜೀವಕೋಶಗಳನ್ನು ರಕ್ಷಿಸುತ್ತದೆ. ಈ ಜೀವಕೋಶಗಳ ಉತ್ಪಾದನಾ ಕಾರ್ಯವೈಖರಿಯಲ್ಲಿ ವ್ಯತ್ಯಾಸವಾದಾಗ ಜಠರದ ಉರಿಯೂತ ಉಂಟಾಗುತ್ತದೆ.

ಕಾರಣಗಳೇನು?

- **ದೋಷಪೂರಿತ ಆಹಾರಪದ್ಧತಿ:** ಅತಿಯಾದ ಹುಳಿ, ಖಾರ ಮತ್ತು ಮಸಾಲೆಯುಕ್ತ ಆಹಾರದ ಸೇವನೆ. ಅತಿಯಾದ ಕಾಫಿ, ಟೀ ಸೇವನೆ. ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆಯಲ್ಲಿನ ದೋಷ. ಕೆಲವರಲ್ಲಿ ರೋಗನಿರೋಧಕ ವ್ಯವಸ್ಥೆಯೇ ಜಠರದ ಜೀವಕೋಶಗಳನ್ನು ನಾಶ ಮಾಡುವ ವಸ್ತುಗಳನ್ನು ಉತ್ಪಾದಿಸುತ್ತದೆ.
- **ದೋಷಪೂರಿತ ಜೀವನಶೈಲಿ:** ಜಡ ಜೀವನಶೈಲಿ. ಅತಿಯಾದ ಮದ್ಯಸೇವನೆ. ಅತಿಯಾದ ಧೂಮಪಾನ.
- **ಸೋಂಕು:** ಹೆಲಿಕೋ ಬ್ಯಾಕ್ಟರ್ ಪೈಲೋರಿ, ಸಾಲ್‌ಮೊನೆಲ್ಲಾ ಮುಂತಾದ ಸೂಕ್ಷ್ಮಾಣು, ಕೆಲವು ವೈರಾಣುಗಳು ಕಾರಣವಾಗಬಹುದು.
- **ಅಪೌಷ್ಟಿಕತೆ:** ಆಹಾರದಲ್ಲಿ ಪ್ರೊಟೀನ್ ಮತ್ತು ಇತರ ಸೂಕ್ಷ್ಮ ಪೋಷಕಾಂಶಗಳ ಕೊರತೆ.
- **ಕೆಲವು ಔಷಧಗಳ ಸೇವನೆ:** ಆ್ಯಸ್ಪಿರಿನ್, ಐಬುಪ್ರೋಫಿನ್ ಮುಂತಾದುವು
- **ಕೆಲವು ರಾಸಾಯನಿಕಗಳು:** ಶಕ್ತಿಯುತವಾದ ಆಮ್ಲಗಳು, ವಿಕಿರಣಗಳು. ಅತಿ ತಂಪಾದ ವಸ್ತುಗಳು.
- ಗರ್ಭಿಣಿಯರಲ್ಲಿ ಹಾರ್ಮೋನ್‌ಗಳ ವ್ಯತ್ಯಾಸದ ಪರಿಣಾಮ.
- **ಒತ್ತಡಯುತ ಜೀವನ:** ಯಾವುದೇ ಬಗೆಯ ಮಾನಸಿಕ / ದೈಹಿಕ ಆಘಾತ ಮತ್ತು ಒತ್ತಡ. ವ್ಯಕ್ತಿ ಶಸ್ತ್ರಚಿಕಿತ್ಸೆಗಳಿಗೆ ಒಳಗಾದಾಗ. ಶರೀರಕ್ಕೆ ಸುಟ್ಟ ಗಾಯಗಳಾದಾಗ.

ಕೆಲವು ಗುಣಲಕ್ಷಣಗಳು

ಮೇಲುಹೊಟ್ಟೆಯಲ್ಲಿ ಹಾಗೂ ಎದೆಯ ಭಾಗದಲ್ಲಿ ನೋವು/ಉರಿ, ಅಜೀರ್ಣ, ಹೊಟ್ಟೆ ಉಬ್ಬರಿಸಿದಂತಾಗುವುದು, ವಾಕರಿಕೆ, ವಾಂತಿ, ತೇಗು ಬರುವುದು, ಹಸಿವಾಗದಿರುವುದು, ಶರೀರದ ತೂಕ ಕಡಿಮೆಯಾಗುವುದು – ಇವೇ ಮುಂತಾದುವು ಜಠರದ ಉರಿಯೂತದ ಲಕ್ಷಣಗಳು.

ಸಲಹೆ–ಸೂಚನೆಗಳು

- ಅವಸರದಲ್ಲಿ ಆಹಾರಸೇವನೆ ಬೇಡ, ಆಹಾರವನ್ನು ಸರಿಯಾಗಿ ಅಗಿದು ತಿನ್ನಿರಿ.
- ಅತಿಯಾದ ಕಾಫಿ, ಟೀ, ಇಂಗಾಲಯುಕ್ತ ತಂಪು ಪಾನೀಯಗಳ ಸೇವನೆ ಬೇಡ.
- ಮದ್ಯಪಾನ ಹಾಗೂ ಧೂಮಪಾನಿಗಳಾಗಿದ್ದರೆ, ಅದನ್ನು ನಿಲ್ಲಿಸಿ.
- ಆಹಾರದಲ್ಲಿ ಅತಿಯಾದ ಉಪ್ಪಿನಂಶವಿರುವ, ಕೊಬ್ಬಿನಂಶವಿರುವ, ಮಸಾಲೆಯುಕ್ತ, ಎಣ್ಣೆಯಲ್ಲಿ ಕರಿದ, ಹುರಿದ ಪದಾರ್ಥಗಳ ಸೇವನೆ ಬೇಡ. ಬದಲಾಗಿ ಹಣ್ಣು, ತರಕಾರಿ, ಧಾನ್ಯ ಮತ್ತು ಬೇಳೆಕಾಳುಗಳಂತಹ ಹೆಚ್ಚು ನಾರಿನಾಂಶವಿರುವ ಪದಾರ್ಥಗಳನ್ನು ಸೇವಿಸಿ.
- ದೀರ್ಘಾವಧಿಯವರೆಗೆ ಹಸಿವಿನಿಂದ ಬಳಲದಿರಿ. ದಿನವೂ ನಿಗದಿತ ಸಮಯಕ್ಕೆ ಸರಿಯಾಗಿ ಆಹಾರಸೇವನೆಯ ಅಭ್ಯಾಸವನ್ನು ರೂಢಿಸಿಕೊಳ್ಳಿರಿ.
- ದಿನವೂ 6-8 ತಾಸುಗಳ ನಿದ್ರೆಯನ್ನು ತಪ್ಪಿಸಬೇಡಿ.
- ವೈದ್ಯರ ಸಲಹೆಯಿಲ್ಲದೆ, ಯಾವುದೇ ಮಾತ್ರೆ ಅಥವಾ ಔಷಧವನ್ನು ಸೇವಿಸಬೇಡಿ.
- ದಿನವೂ 3ರಿಂದ 4 ಲೀಟರ್‌ಗಳಷ್ಟು ನೀರನ್ನು ತಪ್ಪದೆ ಕುಡಿಯಿರಿ.
- ವ್ಯಾಯಾಮದ ಅಭ್ಯಾಸವಿರಲಿ. ಯೋಗಾಭ್ಯಾಸದ ಜಠರ ಪರಿವರ್ತನಾಸನ, ವಜ್ರಾಸನ, ಅರ್ಧ ಮತ್ಸ್ಯೇಂದ್ರಾಸನ ಮತ್ತು ಪವನಮುಕ್ತಾಸನದಂತಹ ಆಸನಗಳು ಈ ಸಮಸ್ಯೆಗೆ ರಾಮಬಾಣ.

ಹೆಚ್ಚಿನ ಸಂದರ್ಭಗಳಲ್ಲಿ ಜೀವನಶೈಲಿ ಮತ್ತು ಆಹಾರಶೈಲಿಯಲ್ಲಿನ ಬದಲಾವಣೆಯೇ ಎದೆಯುರಿ ಸಮಸ್ಯೆಯನ್ನು ಶಮನಗೊಳಿಸಲು ಸಹಕಾರಿಯಾಗಬಲ್ಲದು. ಊಟವಾದ ಬಳಿಕ ತುಸುವೇ ಜೀರಿಗೆ ಅಥವಾ ಅಜವಾನದ ಬಳಕೆ ಎದೆಯುರಿಯನ್ನು ನಿಯಂತ್ರಿಸಲು ಸುಲಭೋಪಾಯ. ಒಂದು ಲೋಟ ನೀರಿನಲ್ಲಿ ಒಂದೆರಡು ಪುದಿನ ಎಲೆ ಮತ್ತು ಚೂರು ಶುಂಠಿಯನ್ನು ಕುದಿಸಿದ ನೀರನ್ನು ಕುಡಿಯುವುದು ಎದೆಯುರಿಯನ್ನು ಸ್ವಲ್ಪ ಮಟ್ಟಿಗೆ ಶಮನ ಮಾಡಬಲ್ಲದು.

ನೆನಪಿಡಿ: ಎದೆಯುರಿಯ ಜೊತೆಯಲ್ಲಿ ವ್ಯಕ್ತಿ ಬೆವರುತ್ತಿದ್ದರೆ, ಉಸಿರಾಡಲು ತೊಂದರೆ ಪಡುತ್ತಿದ್ದರೆ, ಎಡತೋಳು-ಬೆನ್ನಿನವರೆಗೆ ನೋವು ಕಾಣಿಸುತ್ತಿದೆಯೆಂದರೆ ಅಥವಾ ನೋವು ಹೆಚ್ಚುತ್ತಾ ಹೋದರೆ ಅದು ಹೃದಯಾಘಾತದ ಲಕ್ಷಣವಿದ್ದರೂ ಇರಬಹುದು. ಅಂಥ ಸಮಯದಲ್ಲಿ ತಡ ಮಾಡದೆ ಕೂಡಲೇ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಬೇಕು.

ಅಜೀರ್ಣವಾದೀತು, ಎಚ್ಚರ!

ಡಾ. ಅನಿತಾ ರವಿ

ಅಜೀರ್ಣ, ಹೆಸರೇ ತಿಳಿಸುವಂತೆ ನಾವು ಸೇವಿಸಿದ ಆಹಾರವು ಸಂಪೂರ್ಣವಾಗಿ ಜೀರ್ಣವಾಗದೆ ಇರುವುದು. ಹೊಟ್ಟೆಯಲ್ಲಿ ಆಹಾರ ಜೀರ್ಣವಾಗುವುದು ಅಲ್ಲಿರುವ ಜಠರಾಗ್ನಿಯಿಂದ. ಈ ಜಾಠರಾಗ್ನಿಯು ಮಂದ ಆದಾಗ, ಸೇವಿಸಿದ ಆಹಾರ ಸಂಪೂರ್ಣವಾಗಿ ಜೀರ್ಣವಾಗುವುದಿಲ್ಲ. ಸರಿಯಾಗಿ ಜೀರ್ಣವಾಗದ ಆಹಾರ ಅನೇಕ ರೋಗಗಳಿಗೆ ಮೂಲವಾಗಿದೆ.

ಸಂಪೂರ್ಣ ಜೀರ್ಣಕ್ರಿಯೆಯ ಲಕ್ಷಣಗಳು

ಮನಸ್ಸು ಉಲ್ಲಾಸದಿಂದಿರುತ್ತದೆ. ದೇಹ ಲಘುವಾಗಿ ಚಟುವಟಿಕೆಯಿಂದಿರುತ್ತದೆ. ಹಸಿವು ಬಾಯಾರಿಕೆಗಳು ಸರಿಯಾಗಿ ಆಗುತ್ತವೆ. ಮಲ–ಮೂತ್ರಗಳು ಸುಲಭವಾಗಿ ಆಗುತ್ತವೆ. ನೆಮ್ಮದಿಯ ರಾತ್ರಿನಿದ್ರೆ.

ಪ್ರತಿಯೊಬ್ಬ ಮನುಷ್ಯನು ತನ್ನ ಜೀವನದಲ್ಲಿ ಒಮ್ಮೆಯಾದರೂ ಅಜೀರ್ಣವನ್ನು, ಅದರ ತೊಂದರೆಗಳನ್ನು ಅನುಭವಿಸಿಯೇ ಇರುತ್ತಾನೆ. ಅಜೀರ್ಣ ಅನೇಕ ರೋಗಗಳ ಆಗರ.

ಅಜೀರ್ಣದ ಸಾಮಾನ್ಯ ಲಕ್ಷಣಗಳು

- ಹೊಟ್ಟೆಯ ಮೇಲ್ಭಾಗದಲ್ಲಿ ಉರಿ, ನೋವು.
- ಎದೆಯ ಉರಿ, ವಾಕರಿಕೆ, ಹೊಟ್ಟೆ ಉಬ್ಬರ, ಪದೇಪದೇ ತೇಗು ಬರುವುದು, ಸೇವಿಸಿದ ಆಹಾರವೇ ಮೇಲೆ ಬಂದಂತಾಗುವುದು.
- ಆಹಾರ ಸೇವಿಸಿದ ಬಳಿಕವೂ ತೃಪ್ತಿ ಇಲ್ಲದಿರುವುದು.
- ವಾಂತಿ, ತೀವ್ರವಾದ ತಲೆನೋವು, ಮೈ–ಕೈ ನೋವು.
- ಸುಸ್ತು
- ದೇಹ ಭಾರವಾಗುವಿಕೆ.
- ಮಲಬದ್ಧತೆ
- ಅತಿಯಾದ ಬಾಯಾರಿಕೆ.

ಕಾರಣಗಳು

ಧಾವಂತದ ಆಧುನಿಕ ಜೀವನಶೈಲಿಯೇ ಪ್ರಮುಖ ಕಾರಣ.

- ಆಹಾರವನ್ನು ತಯಾರಿಸುವಾಗ ಮತ್ತು ಸೇವಿಸುವಾಗ ಮನಸ್ಸು ಶುದ್ಧವಾಗಿರಬೇಕು. ಟಿವಿ ಮೊಬೈಲ್ ನೋಡುತ್ತಾ, ಭೀಕರ ದೃಶ್ಯಗಳನ್ನು ನೋಡುತ್ತಾ ಕೇಳುತ್ತಾ, ಮಾತನಾಡುತ್ತಾ, ಮನದಲ್ಲಿ ಅಸೂಯೆ, ದ್ವೇಷ, ಕೋಪಗಳೊಂದಿಗೆ ಆಹಾರವನ್ನು ಸೇವಿಸುವುದರಿಂದ, ತ್ರಿದೋಷಗಳು ಏರುಪೇರಾಗಿ ಸೇವಿಸಿದ ಆಹಾರ ಜೀರ್ಣವಾಗದೆ ಅನಾರೋಗ್ಯಕ್ಕೆ ಕಾರಣವಾಗುತ್ತದೆ.
- ಅವಸರವಸರವಾಗಿ ಆಹಾರಸೇವನೆ, ಓಡಾಡಿಕೊಂಡು, ಎಲ್ಲೆಂದರಲ್ಲಿ ನಿಂತಲ್ಲೇ ಆಹಾರವನ್ನು ಸೇವಿಸುವುದು, ನಾಲಗೆಗೆ ರುಚಿ ಎಂದು ಎಣ್ಣೆಯಲ್ಲಿ ಕರಿದ ತಿನಿಸುಗಳ ಸೇವನೆ, ಅತಿ ತೀಕ್ಷ್ಣ, ಅತಿ ರೂಕ್ಷ ಆಹಾರಸೇವನೆ. ದೇಹಕ್ಕೆ ಅಭ್ಯಾಸವಿರದ ಬೇರೆ ಪ್ರದೇಶಗಳ ಆಹಾರಸೇವನೆ.
- ಆಗಾಗ ಕಾಫಿ ಚಹಾ, ಅದರೊಂದಿಗೆ ಬೇಕರಿ ತಿನಿಸುಗಳ ಸೇವನೆ.
- ಹೊಟ್ಟೆ ಪೂರ್ತಿ ತುಂಬುವಷ್ಟು ಆಹಾರಸೇವನೆ, ಇಲ್ಲವೇ ಅತಿ ಕಡಿಮೆ ಸೇವನೆ.
- ಹಸಿವಾಗುವ ಮೊದಲೇ ಆಹಾರವನ್ನು ಸೇವಿಸುವುದು ಮತ್ತು ಹಸಿವಾದಾಗ ಹೊಟ್ಟೆ ತುಂಬುವಷ್ಟು ನೀರು ಕುಡಿಯುವುದು.
- ಮಲ, ಮೂತ್ರ, ಅಪಾನವಾಯುವನ್ನು ತಡೆಯುವುದು.
- ಮಾನಸಿಕ ಒತ್ತಡ.

ಅಜೀರ್ಣವಾಗದಿರಲು ಏನು ಮಾಡಬೇಕು?

- ಕೈ-ಕಾಲು ಮುಖ ತೊಳೆದು ಬಂದು, ಸುಖಾಸನದಲ್ಲಿ ಕುಳಿತು ಸಮಾಧಾನವಾಗಿ ಆಹಾರವನ್ನು ಸೇವಿಸಬೇಕು. ಆಹಾರವನ್ನು ಸಂಪೂರ್ಣವಾಗಿ ಸಾವಧಾನವಾಗಿ ಚೆನ್ನಾಗಿ ಅಗೆದು, ಬಾಯಲ್ಲೇ ಜೊಲ್ಲಿನೊಂದಿಗೆ ಸೇರಿ ಅರ್ಧದಷ್ಟು ಆಹಾರ ಜೀರ್ಣವಾಗುವಂತೆ ತಿನ್ನುವುದರಿಂದ ಸಮಸ್ಯೆಯೇ ಆಗುವುದಿಲ್ಲ.
- ಹಸಿವಾಗದೇ, ಮೊದಲು ಸೇವಿಸಿದ ಆಹಾರ ಜೀರ್ಣವಾಗದೆ ಆಹಾರ ಸೇವಿಸಬಾರದು.
- ಹಸಿವು ಆದಾಗ ತುಂಬಾ ನೀರನ್ನು ಕುಡಿಯಬಾರದು.
- ಆಹಾರವು ಶುಚಿಯಾಗಿ ಸಾತ್ವಿಕವಾಗಿರಬೇಕು, ಅತಿಯಾದ ಖಾರ, ತೀಕ್ಷ್ಣ ಒಳ್ಳೆಯದಲ್ಲ.
- ಆಹಾರ ಸೇವಿಸುವಾಗ ಮಧ್ಯದಲ್ಲಿ ಸ್ವಲ್ಪ ಬೆಚ್ಚಗಿನ ನೀರು ಸೇವನೆ ಜೀರ್ಣಕ್ಕೆ ಸಹಕಾರಿ.
- ಹೊಟ್ಟೆ ಪೂರ್ತಿ ತುಂಬುವಷ್ಟು ಆಹಾರವನ್ನು ಎಂದೂ ಸೇವಿಸಬಾರದು.
- ಆಹಾರ ಸೇವಿಸಿದ ಕೂಡಲೆ ಅತಿ ತಂಪಾದ ಮತ್ತು ಅತಿಯಾಗಿ ನೀರನ್ನು ಕುಡಿಯಬಾರದು.
- ನಮ್ಮ ದೇಹಕ್ಕೆ ಸಾತ್ಮ್ಯ (ಹೊಂದಿಕೊಳ್ಳುವ, ಅಭ್ಯಾಸವಿರುವ) ಆಹಾರವನ್ನಷ್ಟೇ ಸೇವಿಸಬೇಕು.
- ಕಾಲಕ್ಕೆ ತಕ್ಕಂತಹ, ಆಯಾ ಋತುಗಳಲ್ಲಿ ಸಿಗುವ ಆಹಾರ ಪದಾರ್ಥಗಳು, ತರಕಾರಿಗಳು, ಹಣ್ಣುಗಳ ಸೇವನೆ ಒಳ್ಳೆಯದು. ಕಾಲವಲ್ಲದ ಕಾಲದಲ್ಲಿ ಸಿಗುವ ಅವರೆಕಾಳು ಮುಂತಾದ ಆಹಾರಪದಾರ್ಥಗಳನ್ನು ಖಂಡಿತ ಸೇವಿಸಬಾರದು.
- ರಾತ್ರಿ ಆಹಾರ ಸೇವಿಸಿದ ಎರಡು ಗಂಟೆಯ ನಂತರವೇ ಮಲಗಬೇಕು.
- ಭೂಮಿಯ ಅಡಿಯಲ್ಲಿ ಸಿಗುವ ಕಂದಮೂಲಗಳನ್ನು ಹಸಿಯಾಗಿ ತಿನ್ನಬಾರದು.
- ವಿರುದ್ಧ ಆಹಾರ; ಮೊಸರು/ ಮಜ್ಜಿಗೆಗೆ ಹಾಲನ್ನು ಸೇರಿಸಿಕೊಳ್ಳುವುದು, ಆಮ್ಲರಸವಿರುವ ಹಣ್ಣುಗಳೊಂದಿಗೆ ಹಾಲನ್ನು ಸೇರಿಸಿ ಸೇವಿಸಬಾರದು.
- ಬೇಕರಿ ಉತ್ಪನ್ನಗಳು, ಸಂರಕ್ಷಿಸಿದ ಆಹಾರ ಪದಾರ್ಥಗಳನ್ನು ಸೇವಿಸಬಾರದು.
- ಆಹಾರ ತಯಾರಿಸುವಾಗ, ಜೀರ್ಣಕ್ರಿಯೆಯನ್ನು ಹೆಚ್ಚಿಸುವ ಅಜೀರ್ಣವಾಗದಂತೆ ತಡೆಯುವ ಜೀರಿಗೆ, ಕಾಳುಮೆಣಸು, ಅಜವಾನ, ಧನಿಯಾ, ಮೆಂತ್ಯೆ, ಹಿಂಗು, ಹಿಪ್ಪಲಿ, ಶುಂಠಿ, ಬೆಳ್ಳುಳ್ಳಿ, ಸೈಂಧವ ಲವಣ, ನೆಲ್ಲಿಕಾಯಿ, ದ್ರಾಕ್ಷಿ, ಲವಂಗ, ಬಿಸಿ ನೀರು ಮುಂತಾದ ಆಹಾರೌಷಧಗಳನ್ನು ದಿನನಿತ್ಯದ ಬಳಸಬೇಕು.
- ಅತಿಯಾದ ಕಾಫಿ–ಚಹಾ ಸೇವನೆ ಸರ್ವಥಾ ಸರಿಯಲ್ಲ.
- ರಾತ್ರಿ ಸರಿಯಾದ ಸಮಯಕ್ಕೆ ನಿದ್ರೆ ಮಾಡಬೇಕು; ಮನಸ್ಸನ್ನು ಸಮಾಧಾನದಲ್ಲಿಟ್ಟುಕೊಳ್ಳುವುದು.
- ಪ್ರತಿದಿನವೂ ದೇಹಕ್ಕೆ ಅಗತ್ಯವಿರುವಷ್ಟು ವ್ಯಾಯಾಮ, ನಡಿಗೆ.
- ಮಲಮೂತ್ರಗಳನ್ನು ನಿರ್ಬಂಧಿಸಬಾರದು.

ಸರಳ ಪರಿಹಾರಗಳು

- ಕುಡಿಯುವ ನೀರಿಗೆ ಒಣಶುಂಠಿ, ಧನಿಯಾ, ಮುಸ್ತಾ, ಜೀರಿಗೆ ಹಾಕಿ ಬಿಸಿ ಮಾಡಿ ಈ ಔಷಧಿಯುಕ್ತ ನೀರನ್ನು ಕುಡಿಯುವುದು.
- ಹದವಾಗಿ ಬಿಸಿಯಾದ ನೀರಿಗೆ ಸ್ವಲ್ಪ ನಿಂಬೆರಸ, ಒಂದೆರಡು ಹನಿ ಶುಂಠಿರಸ, ಚಿಟಿಕೆ ಕಾಳುಮೆಣಸಿನ ಪುಡಿ ಹಾಕಿ ಸೇವಿಸುವುದು.
- ಚಿಕ್ಕ ಶುಂಠಿಯ ತುಂಡನ್ನು ಸೈಂಧವ ಲವಣದೊಂದಿಗೆ ಆಹಾರವನ್ನು ಸೇವಿಸುವ ಮೊದಲು ಚೆನ್ನಾಗಿ ಜಗಿದು ಸೇವಿಸುವುದು.
- ಆಹಾರ ಸೇವಿಸಿದ ನಂತರ ಆಗಷ್ಟೇ ಕಡಿದ ಮಜ್ಜಿಗೆಗೆ ಚಿಟಿಕೆ ಜೀರಿಗೆ ಪುಡಿಯನ್ನು ಸೇರಿಸಿ ಕುಡಿಯುವುದು.
- ಊಟದ ನಂತರ ಅಜವಾನ, ಸೊಂಪನ್ನು ಜಗಿದು ತಿನ್ನಬೇಕು. ಇದರಿಂದ ಸೇವಿಸಿದ ಆಹಾರವು ಸುಲಭವಾಗಿ ಸಂಪೂರ್ಣವಾಗಿ ಜೀರ್ಣವಾಗುತ್ತದೆ.
- ಆಹಾರಸೇವನೆಯ ನಂತರ ಸ್ವಲ್ಪ ಹೊತ್ತು ವಜ್ರಾಸನದಲ್ಲಿ ಕುಳಿತುಕೊಳ್ಳಬೇಕು.
- ಬಿಸಿನೀರಿನ ಸೇವನೆ ಹಿತಕರ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -54

726) ಈ ಕೆಳಗಿನ ಯಾವುದರಲ್ಲಿ ನಿಮ್ನ ಮಸೂರವನ್ನು ಬಳಸಲಾಗುವುದಿಲ್ಲ?
ಎ) ಶೇವಿಂಗ್ ಗ್ಲಾಸ್
ಬಿ) ಸರ್ಚ್‌ಲೈಟ್‌ಗಳ ಪ್ರತಿಫಲಕ
ಸಿ) ಕಿವಿಯ ಆಂತರಿಕ ಭಾಗಗಳ ಪರೀಕ್ಷೆ
ಡಿ) ಹಿಂದಿನ ನೋಟದ ಕನ್ನಡಿ

727) ಈ ಕೆಳಗಿನ ಯಾವ ಬಣ್ಣವು ಗಾಜಿನ ಮೂಲಕ ಕನಿಷ್ಠ ವೇಗದಲ್ಲಿ ಚಲಿಸುತ್ತದೆ?
ಎ) ಕೆಂಪು ಬಿ) ನೇರಳೆ
ಸಿ) ಹಸಿರು ಡಿ) ಹಳದಿ

728) ಈ ಕೆಳಗಿನ ಯಾವ ವಿಭಾಗದಲ್ಲಿ ಯುಗ್ಲೆನಾ ಎಂಬ ಸೂಕ್ಷ್ಮಜೀವಿ ವರ್ಗೀಕರಿಸಲ್ಪಟ್ಟಿದೆ?
ಎ) ಸಸ್ಯ ಬಿ) ಪ್ರಾಣಿ
ಸಿ) ಪ್ರೊಸ್ಟಿಸ್ಟಾ ಡಿ) ಮೇಲಿನ ಯಾವುದೂ ಇಲ್ಲ

729) ಈ ಕೆಳಗಿನ ಯಾವ ಹೂಬಿಡುವ ಸಸ್ಯವು ಪ್ರತಿ ಎರಡು ವರ್ಷಗಳಿಗೊಮ್ಮೆ ತನ್ನ ಜೀವನಚಕ್ರವನ್ನು ಪೂರ್ಣಗೊಳಿಸುತ್ತದೆ?
ಎ) ಸಾಸಿವೆ ಬಿ) ಸೂರ್ಯಕಾಂತಿ
ಸಿ) ಕ್ಯಾರೆಟ್ ಡಿ) ಹೂಕೋಸು

730) ಈ ಕೆಳಗಿನವುಗಳಲ್ಲಿ 'ಯೀಸ್ಟ್' ಯಾವುದಕ್ಕೆ ಒಂದು ಉದಾಹರಣೆಯಾಗಿದೆ?
ಎ) ಬ್ಯಾಕ್ಟೀರಿಯಾ ಬಿ) ಶಿಲೀಂಧ್ರಗಳು
ಸಿ) ವೈರಸ್ ಡಿ) ಪಾಚಿ

731) ರವಿಕೀರ್ತಿಯ ಐಹೊಳೆ ಶಾಸನವು ಯಾವ ಭಾಷೆಯಲ್ಲಿದೆ?
ಎ) ಕನ್ನಡ ಬಿ) ಸಂಸ್ಕೃತ
ಸಿ) ತೆಲುಗು ಡಿ) ಹಳೆಗನ್ನಡ

732) ಈ ಕೆಳಗಿನ ಯಾರು ರಾಷ್ಟ್ರಕೂಟರು ಕನ್ನಡ ಮೂಲದವರೆಂದು ಅಭಿಪ್ರಾಯಪಟ್ಟರು?
ಎ) ಡಾ.ಫ್ಲೀಲ್
ಬಿ) ಡಾ.ಆರ್.ಜಿ.ಭಂಡಾರ್ಕರ್
ಸಿ) ಡಾ.ಎ.ಎಸ್.ಅಲ್ತೇಕರ್
ಡಿ) ಡಾ.ದೇಸಾಯಿ

733) ಫಾಯಿಯಾನನು ಭಾರತಕ್ಕೆ ಯಾರ ಕಾಲದಲ್ಲಿ ಭೇಟಿ ಕೊಟ್ಟಿದ್ದನು?
ಎ) ಮೌರ್ಯರು ಬಿ) ಕನಿಷ್ಕ
ಸಿ) ಗುಪ್ತರು ಡಿ) ಹರ್ಷ

734) ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಜೋಡಣೆ ಅಲ್ಲ
ಎ) ಭವಭೂತಿ-ಉತ್ತರ ರಾಮಚರಿತ
ಬಿ) ಮಾಘ-ರಾವಣ ವಧ
ಸಿ) ದಂಡಿನ-ದಶಕುಮಾರ ಚರಿತ
ಡಿ) ಕಾಳಿದಾಸ-ಕುಮಾರ ಸಂಭವ

735) ಈ ಕೆಳಗಿನ ಯಾವ ಶಾಸನವು ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನವಾಗಿದೆ?
ಎ) ಸಾಂಚಿ ಬಿ) ಲುಂಬಿನಿ
ಸಿ) ಗಿರನಾರ್ ಡಿ) ಸಾರಾನಾಥ

736) ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಶ್ರೀಕೃಷ್ಣದೇವರಾಯ 'ಅಮುಕ್ತ ಮಾಲ್ಯ' ಕೃತಿಯನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದನು
2. ಈ ಕೃತಿಯು ರಾಜನೀತಿ ಧರ್ಮದ ಮೇಲೆ ಬೆಳಕನ್ನು ಚೆಲ್ಲುತ್ತದೆ
ಎ) 1 ಮಾತ್ರ ಸರಿ
ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ
ಡಿ) 1 ಮತ್ತು 2 ತಪ್ಪು

737) ದಕ್ಷಿಣ ಭಾರತಕ್ಕೆ 16ನೇ ಶತಮಾನದಲ್ಲಿ ತಂಬಾಕು ಬೆಳೆಯನ್ನು ಯಾರು ಪರಿಚಯಿಸಿದರು?
ಎ) ಇಂಗ್ಲಿಷರು ಬಿ) ಡಚ್ಚರು
ಸಿ) ಪೋರ್ಚುಗೀಸರು ಡಿ) ಫ್ರೆಂಚರು

738) ಈ ಕೆಳಗಿನ ಯಾರು 'ಅಭಿನವ ಭಾರತ' ಆರಂಭಿಸಿದರು?
ಎ) ಅಜಿತ್ ಸಿಂಗ್
ಬಿ) ಹರ್ ದಯಾಲ್
ಸಿ) ಶ್ಯಾಮ್‌ಜೀ ಕೃಷ್ಣವರ್ಮ
ಡಿ) ವಿ.ಡಿ.ಸಾರ್ವರ್ಕರ್

739) ಈ ಕೆಳಗಿನ ಯಾರ ಅವಧಿಯಲ್ಲಿ ಆದಿಗ್ರಂಥ ರಚಿಸಲ್ಪಟ್ಟಿತು?
ಎ) ಗುರು ನಾನಕ್
ಬಿ) ಗುರು ಅಮರದಾಸ್
ಸಿ) ಗುರು ಅರ್ಜುನದೇವ
ಡಿ) ಗುರು ಹರಿಗೋವಿಂದ್

740) ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಇಬ್ರಾಹಿಂ ಲೋಧಿ ಮತ್ತು ಶ್ರೀಕೃಷ್ಣದೇವರಾಯ ಸಮಕಾಲೀನ ರಾಜರು
2. ಬಾಬರ್ ಮತ್ತು ಗುರು ನಾನಕ್ ಸಮಕಾಲೀನವರು
ಎ) 1 ಮಾತ್ರ ಸರಿ
ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ
ಡಿ) 1 ಮತ್ತು 2 ತಪ್ಪು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 53ರ ಉತ್ತರ: 716. ಎ, 717. ಎ, 718. ಡಿ, 719. ಸಿ, 720. ಸಿ, 721. ಬಿ, 722. ಬಿ, 723. ಡಿ, 724. ಸಿ, 725. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ವೃದ್ಧಾಪ್ಯ ಎನ್ನುವುದು ಪರ್ವತವನ್ನು ಏರಿದಂತೆ. ಮೇಲಕ್ಕೆ ಏರುತ್ತಾ ಹೋದಂತೆ ಹೆಚ್ಚು ದಣಿವಾಗುತ್ತದೆ, ಉಸಿರುಗಟ್ಟಿದಂತೆ ಆಗುತ್ತದೆ. ಆದರೆ ನಿಮ್ಮ ದೃಷ್ಟಿಕೋನಗಳು ವಿಶಾಲವಾಗಿರುತ್ತವೆ.

–ಇಂಗ್ಮರ್ ಬರ್ಗ್‌ಮನ್

ಪ್ಯಾರಾಲಿಂಪಿಕ್ಸ್: ಭಾರತದ ಸಾಧನೆ ಭವಿಷ್ಯದ ಬೆಳವಣಿಗೆಗೆ ದಾರಿದೀಪ

ಜಪಾನಿನ ಟೋಕಿಯೊದಲ್ಲಿ ಭಾರತದ ಕ್ರೀಡಾಶಕ್ತಿ ಮತ್ತೊಮ್ಮೆ ಪ್ರಜ್ವಲಿಸಿದೆ. ಭಾನುವಾರ ಮುಕ್ತಾಯವಾದ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಅಂಗವಿಕಲ ಕ್ರೀಡಾಪಟುಗಳು ಅಮೋಘ ಪ್ರದರ್ಶನ ತೋರಿದ್ದಾರೆ. ಈ ಕೂಟದಲ್ಲಿ ದೇಶ 19 ಪದಕಗಳನ್ನು ಗೆದ್ದುಕೊಂಡಿರುವುದು ಐತಿಹಾಸಿಕ ಸಾಧನೆಯೇ ಸರಿ. ಐದು ಚಿನ್ನ, ಎಂಟು ಬೆಳ್ಳಿ ಮತ್ತು ಆರು ಕಂಚಿನ ಪದಕಗಳನ್ನು ಗೆದ್ದು 24ನೇ ಸ್ಥಾನ ಪಡೆದಿದೆ. ಹೋದ ತಿಂಗಳು ಇಲ್ಲಿಯೇ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಒಂದು ಚಿನ್ನ ಸೇರಿದಂತೆ ಏಳು ಪದಕ ಜಯಿಸಿತ್ತು. ಅದೇ ಸ್ಫೂರ್ತಿಯ ಅಲೆಯಲ್ಲಿ ತೇಲಿದ ಪ್ಯಾರಾ ಅಥ್ಲೀಟ್‌ಗಳು ತಮ್ಮ ನೋವು, ಅವಮಾನವನ್ನೆಲ್ಲ ಮರೆತು ವಿಜೃಂಭಿಸಿದ್ದಾರೆ. ಈ ಪ್ಯಾರಾಲಿಂಪಿಕ್ಸ್‌ನಲ್ಲಿ ಕೆಲವರು ಪದಕ ಗೆದ್ದಿರಬಹುದು. ಆದರೆ ಇಲ್ಲಿ ಸೋತವರು ಯಾರೂ ಇಲ್ಲ ಎಂದೇ ಹೇಳಬೇಕು. ಪೋಲಿಯೊದಿಂದಲೋ ಅಪಘಾತ- ಅವಘಡಗಳಿಂದಲೋ ಅಂಗವೈಕಲ್ಯಕ್ಕೆ ತುತ್ತಾದಾಗ ತಮ್ಮ ಬದುಕೇ ಮುಗಿಯಿತು ಎಂದುಕೊಳ್ಳದೆ ಒಲಿಂಪಿಕ್ ಅಭಿಯಾನದ ಭಾಗವಾಗಿ ಬೆಳೆದಿರುವುದು ಅವರ ಇಚ್ಛಾಶಕ್ತಿಗೆ ನಿದರ್ಶನ. 162 ದೇಶಗಳ 4,400 ಅಥ್ಲೀಟ್‌ಗಳು ಸ್ಪರ್ಧಿಸಿದ್ದ ಈ ಕೂಟದಲ್ಲಿ 22 ಕ್ರೀಡೆಗಳಲ್ಲಿ ಸ್ಪರ್ಧೆಗಳು ನಡೆದವು. ಕೋವಿಡ್ ಸಾಂಕ್ರಾಮಿಕದ ಕಾರಣ ಕೆಲವು ನಿರ್ಬಂಧಗಳ ನಡುವೆ ನಡೆದ ಈ ಕೂಟದಲ್ಲಿ ಭಾರತದ ಸಾಧನೆ ನಿರೀಕ್ಷೆಗೂ ಮೀರಿದ್ದು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕು ಪದಕಗಳನ್ನು ಜಯಿಸಿದ್ದೇ ಇಲ್ಲಿಯವರೆಗಿನ ಶ್ರೇಷ್ಠ ಸಾಧನೆಯಾಗಿತ್ತು. ಆದರೆ ಕೋವಿಡ್ ಕಾಲಘಟ್ಟದಲ್ಲಿ ಪ್ಯಾರಾ ಅಥ್ಲೀಟ್‌ಗಳಿಂದ ಮೂಡಿಬಂದಿರುವ ಸಾಧನೆಗೆ ಹೆಚ್ಚಿನ ತೂಕವಿದೆ. ಏಕೆಂದರೆ, ಭಾರತದಲ್ಲಿ ಕ್ರೀಡೆಗಳಿಗೆ ಸಿಕ್ಕಿರುವ ಆದ್ಯತೆ ಅಷ್ಟಕ್ಕಷ್ಟೆ. ವಿದ್ಯಾಭ್ಯಾಸ, ಉದ್ಯೋಗ ಗಳಿಕೆಯ ಕಸರತ್ತಿನಲ್ಲಿ ಕ್ರೀಡೆಗೆ ಕೊನೆಯ ಸ್ಥಾನ. ಅಂಥದ್ದರಲ್ಲಿ ಅಂಗವಿಕಲರಿಗೆ ವಿಶೇಷ ಸವಲತ್ತು ಕೊಟ್ಟು, ಮೂಲಸೌಕರ್ಯ ಕಲ್ಪಿಸಿ ಪ್ಯಾರಾ ಕ್ರೀಡೆಗಳನ್ನು ಬೆಳೆಸುವ ಮಾತು ದೂರವೇ ಉಳಿಯಿತು.

ಕೋವಿಡ್ ಕಾಲಘಟ್ಟದಲ್ಲಿ ಪ್ಯಾರಾ ಅಥ್ಲೀಟ್‌ಗಳಿಂದ ಮೂಡಿಬಂದಿರುವ ಈ ಸಾಧನೆಗೆ ಹೆಚ್ಚಿನ ಮಹತ್ವ ಇದೆ

ಅಂಗವಿಕಲ ಕ್ರೀಡಾಪಟುಗಳನ್ನು ತರಬೇತುಗೊಳಿಸುವುದು ಮತ್ತು ನಿರ್ವಹಿಸುವುದು ಸುಲಭದ ಮಾತಲ್ಲ. ಅವರಿಗೆ ಸದಾ ವೈದ್ಯಕೀಯದ ನೆರವೂ ಅಗತ್ಯ. ಈ ಬಾರಿ ಪ್ಯಾರಾಲಿಂಪಿಕ್‌ಗೆ ತೆರಳಿದ್ದ ಬೆಂಗಳೂರಿನ ಈಜುಪಟು ನಿರಂಜನ್ ಮುಕುಂದನ್ 19 ಸಲ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಇಂತಹ ಪ್ಯಾರಾ ಅಥ್ಲೀಟ್‌ಗಳಿಗೆ ವಿಶೇಷ ಕಾಳಜಿ ತೋರುವುದು ಅತ್ಯವಶ್ಯ. ಅವರ ಪ್ರಯಾಣಕ್ಕಾಗಿ ವಿಶೇಷ ವ್ಯವಸ್ಥೆ, ಕಟ್ಟಡ, ಕ್ರೀಡಾಂಗಣಗಳಲ್ಲಿ ಹತ್ತಿ ಇಳಿಯಲು ರ್‍ಯಾಂಪ್, ವಿವಿಧ ಬಗೆಯ ಉಪಕರಣ, ಪೌಷ್ಟಿಕ ಆಹಾರ ಮತ್ತಿತರ ಸೌಲಭ್ಯಗಳು ಬೇಕು. ವಿಶೇಷ ತರಬೇತಿ ಪಡೆಯಲು, ವಿದೇಶಕ್ಕೆ ತೆರಳಲು ಆರ್ಥಿಕ ವ್ಯವಸ್ಥೆಯೂ ಆಗಬೇಕು. ಸರ್ಕಾರದ ವಿವಿಧ ಇಲಾಖೆಗಳೇ ಸಲ್ಲಿಸಿರುವ ಆಡಿಟ್ ವರದಿಯ ಪ್ರಕಾರ, ಅಂಗವಿಕಲರ ಸ್ನೇಹಿಯಾದ ಕಟ್ಟಡಗಳಿರುವುದು ಬೆರಳೆಣಿಕೆಯಷ್ಟು ಮಾತ್ರ. ಇಂತಹ ಸನ್ನಿವೇಶದಲ್ಲಿ ಅವರು ಕ್ರೀಡಾಪಟುಗಳಾಗಿ ಬೆಳೆಯುವುದು ದೊಡ್ಡ ಸಾಹಸವೇ ಸರಿ. ಈ ಸವಾಲುಗಳನ್ನು ಮೆಟ್ಟಿ ನಿಂತು ಪ್ಯಾರಾಲಿಂಪಿಕ್‌ನಲ್ಲಿ ಭಾಗವಹಿಸಿದ ಭಾರತದ 54 ಅಥ್ಲೀಟ್‌ಗಳೂ ಅಭಿನಂದನೆಗೆ ಅರ್ಹರು. ಅದರಲ್ಲೂ ಒಂದೂವರೆ ವರ್ಷದಿಂದ ಕೊರೊನಾ ಲಾಕ್‌ಡೌನ್‌ನಿಂದಾಗಿ ಕ್ರೀಡಾ ಚಟುವಟಿಕೆಗಳು ಸ್ಥಗಿತವಾಗಿದ್ದವು. ಕ್ರೀಡಾಂಗಣಗಳ ಬಾಗಿಲು ಮುಚ್ಚಿದ್ದವು. ಸರಿಯಾದ ಅಭ್ಯಾಸವಿಲ್ಲದೇ, ಚಿಕಿತ್ಸೆ, ಔಷಧೋಪಚಾರಗಳ ಕೊರತೆ ಎದುರಿಸಬೇಕಾಗಿತ್ತು. ಈ ಎಲ್ಲ ‘ಇಲ್ಲ’ಗಳನ್ನು ಮೀರಿ ಸಾಧನೆ ಮಾಡಿದ್ದಾರೆ.

ಇದೇ ಮೊದಲ ಬಾರಿಗೆ ಕೂಟದಲ್ಲಿ ಆರಂಭಿಸಲಾದ ಬ್ಯಾಡ್ಮಿಂಟನ್‌ನಲ್ಲಿ ಪ್ರಮೋದ್ ಭಗತ್, ಕೃಷ್ಣ ನಗಾರ್ ಚಿನ್ನ ಗೆದ್ದಿದ್ದಾರೆ. ಉತ್ತರಪ್ರದೇಶದಲ್ಲಿ ಐಎಎಸ್ ಅಧಿಕಾರಿಯಾಗಿರುವ ಕನ್ನಡಿಗ ಸುಹಾಸ್ ಯತಿರಾಜ್ ಬೆಳ್ಳಿ ಮತ್ತು ಮನೋಜ್ ಸರ್ಕಾರ್ ಕಂಚಿನ ಪದಕ ಜಯಿಸಿದ್ದಾರೆ. 19 ವರ್ಷದ ಶೂಟರ್ ಅವನಿ ಲೇಖರ ಒಂದು ಚಿನ್ನ ಮತ್ತು ಕಂಚಿನ ಪದಕ ಗೆದ್ದು ಬೀಗಿದ್ದಾರೆ. ಒಂದೇ ಕೂಟದಲ್ಲಿ ಎರಡು ಪದಕ ಜಯಿಸಿದ ಭಾರತದ ಪ್ರಥಮ ಮಹಿಳೆಯೆಂಬ ಹೆಗ್ಗಳಿಕೆ ಅವರದಾಗಿದೆ. ಜಾವೆಲಿನ್‌ನಲ್ಲಿ ಸುಮಿತ್ ಅಂಟಿಲ್, ಶೂಟಿಂಗ್‌ನಲ್ಲಿ ಮನೀಷ್ ನರ್ವಾಲ್ ಚಿನ್ನದ ಸಂಭ್ರಮ ಮೂಡಿಸಿದ್ದಾರೆ. ಹೈಜಂಪ್‌ನಲ್ಲಿ ಬೆಳ್ಳಿ ಗೆದ್ದ ಪ್ರವೀಣಕುಮಾರ್, ಮಾರಿಯಪ್ಪನ್ ತಂಗವೇಲು ಅವರು ಸ್ವಲ್ಪದರಲ್ಲಿ ಮೊದಲ ಸ್ಥಾನ ತಪ್ಪಿಸಿಕೊಂಡಿದ್ದಾರೆ. 1972ರಲ್ಲಿ ಮೊದಲ ಬಾರಿ ಪದಕ ಜಯಿಸಿದ್ದ ಭಾರತ ನಂತರದ ಕೂಟಗಳಲ್ಲಿ ಏಳು–ಬೀಳುಗಳನ್ನು ಕಂಡಿದೆ. ಈ ಬಾರಿಯ ಸಾಧನೆಯಲ್ಲಿ ಭಾರತ ಪ್ಯಾರಾಲಿಂಪಿಕ್ ಸಮಿತಿ, ಕೇಂದ್ರ ಕ್ರೀಡಾ ಸಚಿವಾಲಯದ ಒಂದಿಷ್ಟು ನೆರವು ಇದೆ. ಆದರೆ ಅಷ್ಟು ಸಾಲದು. ಪ್ಯಾರಾ ಅಥ್ಲೀಟ್‌ಗಳಿಗಾಗಿಯೇ ಪ್ರತ್ಯೇಕ ಕ್ರೀಡಾವ್ಯವಸ್ಥೆ ಮಾಡಬೇಕು. ಸಮಾಜದ ಮುಖ್ಯವಾಹಿನಿಯಲ್ಲಿ ಅಂಗವಿಕಲರು, ಮಾನಸಿಕವಾಗಿ ವಿಶೇಷ ಸಾಮರ್ಥ್ಯವುಳ್ಳವರನ್ನು ಸೇರಿಸಲು ಕ್ರೀಡೆಯು ಪ್ರಮುಖ ಮಾಧ್ಯಮವಾಗಬೇಕು. ಅನುಕಂಪದ ಬದಲು ಅವಕಾಶಗಳನ್ನು ಒದಗಿಸಬೇಕು. ಆಗ 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಇನ್ನಷ್ಟು ಉತ್ತಮ ಪ್ರದರ್ಶನವನ್ನು ಖಂಡಿತವಾಗಿಯೂ ನಿರೀಕ್ಷಿಸಬಹುದು. ಈ ಬಾರಿಯ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತೀಯರ ಸಾಧನೆಯನ್ನು ದೇಶದಲ್ಲಿ ಭವಿಷ್ಯದ ಕ್ರೀಡಾ ಬೆಳವಣಿಗೆಗೆ ಮೆಟ್ಟಿಲನ್ನಾಗಿ ಮಾಡಿಕೊಳ್ಳಬೇಕು.

ದಿನದ ಟ್ವೀಟ್

ಹೇರಿಕೆಗೆ ಕಾರಣರು...

ಹಿಂದಿ ಹೇರಿಕೆಗೆ ಭದ್ರ ಅಡಿಪಾಯ ಹಾಕಿ ಹಿಂದಿಯೇತರ ಭಾಷೆಗಳ ಮೇಲೆ ಹಿಂದಿ ಹೇರಿಕೆ ಆಗುವಂತೆ ಮಾಡಿದ್ದು ಕಾಂಗ್ರೆಸ್ ಪಕ್ಷ. ಆ ಅಡಿಪಾಯದ ಮೇಲೆ ಹಿಂದಿ ಹೇರಿಕೆಯ ಅರಮನೆ ಕಟ್ಟುತ್ತಿರುವುದು ಬಿಜೆಪಿ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ

‘ಸಾ.ರಾ.ಚೌಲ್ಟ್ರಿಯ ಮರು ಸರ್ವೆಗೆ ಹೆದರಿಕೆ ಏಕೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಕೇಳಿದ್ದಾರೆ. ಹೆದರೋರು ಯಾರು? ಹೂಗುಚ್ಛ ಕೊಟ್ಟು ಸರ್ವೆ ತಂಡವನ್ನು ಸ್ವಾಗತಿಸುವೆ. ಒಂದೆಡೆ ವಿಶ್ವನಾಥ್, ಇನ್ನೊಂದೆಡೆ ಮನೀಷ್ ಮೌದ್ಗಿಲ್ ಚೈನ್ ಹಿಡಿದು ಸರ್ವೆ ಮಾಡಲಿ. ರೋಹಿಣಿ ಸಿಂಧೂರಿ ಅವರೂ ನೆರವಾಗಲಿ.

ಸಾ.ರಾ.ಮಹೇಶ್, ಕೆ.ಆರ್‌.ನಗರ ಶಾಸಕ

25 ವರ್ಷಗಳ ಹಿಂದೆ

ಶನಿವಾರ, 7-9-1996

• **ಅಡ್ವಾಣಿ ವಿರುದ್ಧ ಆರೋಪಪಟ್ಟಿ ಸಲ್ಲಿಕೆಗೆ ಆದೇಶ**

ನವದೆಹಲಿ, ಸೆ. 6 (ಯುಎನ್‌ಐ, ಪಿಟಿಐ)– ಜೈನ್ ಹವಾಲ ಹಗರಣಕ್ಕೆ ಸಂಬಂಧಿಸಿದಂತೆ ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರ ವಿರುದ್ಧ ‘ಭ್ರಷ್ಟಾಚಾರ ಹಾಗೂ ಅಪರಾಧೀಕರಣ ಪಿತೂರಿ’ ಆರೋಪಪಟ್ಟಿಯನ್ನು ಸಲ್ಲಿಸಲು ವಿಶೇಷ ನ್ಯಾಯಾಲಯ ಇಂದು ಆದೇಶಿಸಿದೆ.

ಸಿಬಿಐ ಸಲ್ಲಿಸಿರುವ ದೋಷಾರೋಪಪಟ್ಟಿ ಹಾಗೂ ಸಾಕ್ಷ್ಯಾಧಾರಗಳಿಂದ ಅಡ್ವಾಣಿ ಅವರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿವೆ ಎಂದು ವಿಶೇಷ ನ್ಯಾಯಾಧೀಶ ವಿ.ಬಿ. ಗುಪ್ತಾ ಕಿಕ್ಕಿರಿದು ತುಂಬಿದ್ದ ನ್ಯಾಯಾಲಯದಲ್ಲಿ ಘೋಷಿಸಿದರು.

• **ಆಡಳಿತದಲ್ಲಿ ಹಸ್ತಕ್ಷೇಪ ತಡೆಗೆ ಭರವಸೆ**

ಬೆಂಗಳೂರು, ಸೆ. 6– ಅಭಿವೃದ್ಧಿ ಕಾರ್ಯಗಳ ಅನುಷ್ಠಾನದಲ್ಲಿನ ವಿಳಂಬ ನೀತಿ, ಆಡಳಿತದಲ್ಲಿನ ಅಸಂಬದ್ಧತೆ ತೊಡೆದುಹಾಕಿ, ಜನರ ಆಶೋತ್ತರಗಳಿಗೆ ಸ್ಪಂದಿಸಿ ಕಾರ್ಯ ನಿರ್ವಹಿಸುವಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ಉನ್ನತ ಅಧಿಕಾರಿಗಳಿಗೆ ಕರೆ ನೀಡಿದರು.

ವಿವಿಧ ಇಲಾಖೆಗಳ ಮುಖ್ಯಸ್ಥರ ಸಮಾವೇಶ ಉದ್ಘಾಟಿಸಿದ ಅವರು, ಆಡಳಿತ ಯಂತ್ರವನ್ನು ಧೃತಿಗೆಡಿಸುವ ಕೆಲವು ರಾಜಕೀಯ ಶಕ್ತಿಗಳು ಸದಾ ಕಾಲದಲ್ಲೂ ಕೆಲಸ ಮಾಡುತ್ತಿರುತ್ತವೆ. ಇದಕ್ಕೆ ಅಳುಕಬೇಕಾಗಿಲ್ಲ. ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪ ಇಲ್ಲದಂತೆ ನೋಡಿಕೊಳ್ಳಲಾಗುವುದು ಎಂದರು.

50 ವರ್ಷಗಳ ಹಿಂದೆ

ಮಂಗಳವಾರ, 7-9-1971

• **ಯಾವುದೇ ವಿದೇಶಿ ಬೆದರಿಕೆ ಎದುರಿಸಲು ಭಾರತ ಸಿದ್ಧ: ಇಂದಿರಾ**

ಉಧಂಪುರ (ಜಮ್ಮು) ಸೆ. 6– ಭಾರತದ ಏಕತೆ ಮತ್ತು ಸಮಗ್ರತೆಗೆ ವಿಶ್ವದ ಯಾವುದೇ ವಲಯದಿಂದ ಬೆದರಿಕೆ ಬಂದರೂ ಅದನ್ನು ಎದುರಿಸಲು ರಾಷ್ಟ್ರ ಈಗ ಸಿದ್ಧವಾಗಿದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಘೋಷಿಸಿದರು.

‘ನಮ್ಮ ಶಾಂತಿ ಮತ್ತು ಏಕತೆಗೆ ಧಕ್ಕೆಯುಂಟುಮಾಡಲು ಯಾರೇ ಯತ್ನಿಸಿದರೂ, ಅವರಿಗೆ ಸೂಕ್ತ ಉತ್ತರ ನೀಡಲು ಈಗ ನಾವು ಶಕ್ತರಾಗಿದ್ದೇವೆ’ ಎಂದೂ ಅವರು ತಿಳಿಸಿದರು.

ಜಮ್ಮುವಿನಿಂದ 165 ಕಿ.ಮೀ. ದೂರದ ರಾಜೌರಿಯಲ್ಲಿ ಬೃಹತ್ ಸಭೆಯೊಂದನ್ನುದ್ದೇಶಿಸಿ ಮಾತನಾಡುತ್ತಾ, ನಮ್ಮ ರಕ್ಷಣಾ ಪಡೆಯವರು ನಮ್ಮ ಗಡಿಗಳನ್ನು ರಕ್ಷಿಸಲು ಸದಾ ಎಚ್ಚರದಿಂದಿದ್ದು ಶಕ್ತರಾಗಿದ್ದರೂ, ಪಾಕ್ ಆಡಳಿತಗಾರರ ಯಾವುದೇ ಬಗೆಯ ಪ್ರಚೋದನೆಗಳ ವಿರುದ್ಧ ಜನರು ಜಾಗೃತರಾಗಿದ್ದು ಸಹಕರಿಸುವ ಸಂಪ್ರದಾಯವನ್ನು ಕಾಪಾಡಿಕೊಂಡು ಬರಬೇಕು ಎಂದೂ ಪ್ರಧಾನಿ ಹೇಳಿದರು.

• **ನಗರದಲ್ಲಿ ಪಂಚಮಹಾಕ್ಷೇತ್ರ ಜಗದ್ಗುರುಗಳ ಸಮಾವೇಶ**

ಬೆಂಗಳೂರು, ಸೆ. 6– ಮುಂದಿನ ನವೆಂಬರ್ ತಿಂಗಳಿನಲ್ಲಿ ಇತಿಹಾಸದಲ್ಲೇ ಪ್ರಥಮ ಬಾರಿಗೆ, ಪಂಚ ಮಹಾಕ್ಷೇತ್ರಗಳಾದ ಶ್ರೀ ರಂಭಾಪುರಿ, ಶ್ರೀ ಉಜ್ಜಯಿನಿ, ಶ್ರೀ ಕಾಶೀ, ಶ್ರೀ ಕೇದಾರ ಹಾಗೂ ಶ್ರೀಶೈಲ ಜಗದ್ಗುರುಗಳು ನಗರದಲ್ಲಿ ಒಟ್ಟಿಗೆ ಸೇರುವರು.

ಈ ಸಂಬಂಧದಲ್ಲಿ ನವೆಂಬರ್ 13ರಂದು ಶ್ರೀ ಜಗದ್ಗುರು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಲಿದೆ.

ಈ ಹಕ್ಕು ಪಡೆಯಲು ದೇಶದಲ್ಲಿ ನಡೆಯಲಿ ಸಂಘಟಿತ ಪ್ರಯತ್ನ

ಗ್ರಾಹಕರಿಗೆ ಬೇಕಿದೆ ದುರಸ್ತಿ ಹಕ್ಕು

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ದಿನನಿತ್ಯ ಬಳಸುವ ಗೃಹೋಪಯೋಗಿ ಉಪಕರಣಗಳು ಕೆಟ್ಟರೆ ಅವನ್ನು ಬಳಕೆದಾರರೇ ರಿಪೇರಿ ಮಾಡಿಕೊಳ್ಳುತ್ತಿದ್ದ ಕಾಲವೊಂದಿತ್ತು. ಬೆಂಗಳೂರಿನ ಚಿಕ್ಕಪೇಟೆ ಮತ್ತು ಬಳೆಪೇಟೆಯ ಭಾನುವಾರದ ಗುಜರಿ ಮಾರುಕಟ್ಟೆಯಲ್ಲಿ ಉಪಕರಣಗಳ ದುರಸ್ತಿಗೆ ಬೇಕಾಗುವ ಬಿಡಿಭಾಗಗಳು ಸುಲಭ ಬೆಲೆಗೆ ದೊರೆಯುತ್ತಿದ್ದವು.

ಇಸ್ತ್ರಿಪೆಟ್ಟಿಗೆ, ಕುಕ್ಕರ್, ರೇಡಿಯೊ, ಬೈಸಿಕಲ್, ಟೇಬಲ್ ಲ್ಯಾಂಪ್ ಮುಂತಾದ ವಸ್ತುಗಳನ್ನು ಸರಿಪಡಿಸಿ ಮತ್ತಷ್ಟು ವರ್ಷ ಉಪಯೋಗಿಸುತ್ತಿದ್ದ ಕಾಲ ಈಗಿಲ್ಲ. ಇದಕ್ಕೆ ಕಾರಣ, ಉಪಕರಣಗಳಿಗೆ ಬೇಕಾದ ಬಿಡಿಭಾಗಗಳು ಮಾರುಕಟ್ಟೆಯಲ್ಲಿ ದೊರೆಯುವುದಿಲ್ಲ. ಹಾಗೊಮ್ಮೆ ದೊರೆತರೂ ಬಳಕೆದಾರರು ದುರಸ್ತಿ ಮಾಡಿಕೊಳ್ಳುವುದಕ್ಕೆ ಉತ್ಪಾದಕರು ನಿರ್ಬಂಧ ವಿಧಿಸಿರುತ್ತಾರೆ. ಅವರು ಸೂಚಿಸುವವರಿಂದಲೇ ದುರಸ್ತಿ ಮಾಡಿಸಿಕೊಳ್ಳಬೇಕು. ಹಾಗೊಮ್ಮೆ ಬಳಕೆದಾರರೇ ರಿಪೇರಿ ಮಾಡಿದರೆ ಅಥವಾ ಬೇರೆಲ್ಲೋ ಮಾಡಿಸಿದರೆ ಉಪಕರಣಕ್ಕೆ ಕೊಟ್ಟಿರುವ ಖಾತರಿ (ಗ್ಯಾರಂಟಿ) ಕಳೆದುಕೊಳ್ಳಬೇಕಾಗುತ್ತದೆ.

ಬಳಕೆದಾರರೇ ಉಪಕರಣವನ್ನು ದುರಸ್ತಿ ಮಾಡುವುದನ್ನು ತಡೆಗಟ್ಟಲು ಉಪಕರಣದ ಜೊತೆ ನೀಡುವ ಯೂಸರ್ ಮ್ಯಾನ್ಯುಯಲ್‌ನಲ್ಲಿರುವ ಮಾಹಿತಿಯನ್ನು ಕೃತಿಸ್ವಾಮ್ಯ ಅಧಿನಿಯಮಕ್ಕೆ ಒಳಪಡಿಸುತ್ತಾರೆ. ಉತ್ಪಾದಕರು ಅಥವಾ ಅವರು ನೇಮಕ ಮಾಡುವವರು ಮಾತ್ರ ಅದನ್ನು ಉಪಯೋಗಿಸಲು ಸಾಧ್ಯ.

ಈ ದುರಸ್ತಿ ಸಮಸ್ಯೆ ಈಗ ಮತ್ತಷ್ಟು ಗಂಭೀರವಾಗತೊಡಗಿದೆ. ಪ್ರತಿದಿನ ಲೆಕ್ಕವಿಲ್ಲದಷ್ಟು ವಿದ್ಯುತ್ ಉಪಕರಣಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಅತ್ಯಂತ ಹೊಸ ಮಾದರಿ ಉಪಕರಣ ಖರೀದಿಸಿದ ಕೆಲವೇ ದಿನಗಳಲ್ಲಿ ಮತ್ತೇನೋ ಹೊಸ ಅಂಶದ ಪ್ರಚಾರದೊಂದಿಗೆ ಮತ್ತೊಂದು ಉಪಕರಣ ಮಾರುಕಟ್ಟೆ ಪ್ರವೇಶಿಸುತ್ತದೆ. ತಂತ್ರಜ್ಞಾನದ ಬೆಳವಣಿಗೆ ಕಾರಣವಿದ್ದರೂ ಹಳೆ ಉಪಕರಣವನ್ನು ನಿಷ್ಪ್ರಯೋಜಕ ಮಾಡುವ ಉತ್ಪಾದಕರ ಹುನ್ನಾರ ಇದರ ಹಿಂದೆ ಕೆಲಸ ಮಾಡುತ್ತಿದೆ. ಉದಾಹರಣೆಗೆ, ಪ್ರತಿಷ್ಠಿತ ಕಂಪನಿಯ ಲ್ಯಾಪ್‌ಟಾಪ್‌ನಲ್ಲಿ ಬ್ಯಾಟರಿ ಚಾರ್ಜರ್ ಕೆಟ್ಟರೂ ಅದನ್ನು ಮಾತ್ರ ಬದಲಿಸಲು ಅವಕಾಶವಿಲ್ಲದೆ ಹೊಸ ಲ್ಯಾಪ್‌ಟಾಪ್ ಖರೀದಿಸಬೇಕಾಗಿದೆ. ಹಳೆ ಉಪಕರಣಗಳ ಬಿಡಿಭಾಗಗಳನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಳ್ಳುವುದಲ್ಲದೆ ಅದರ ತಯಾರಿಕೆಯನ್ನು ಸ್ಥಗಿತಗೊಳಿಸುವುದೂ ಇದೆ. ಬಳಕೆದಾರರು ಹೆಚ್ಚು ಉಪಕರಣಗಳನ್ನು ಖರೀದಿಸಲು ಹೆಚ್ಚು ಹಣ ಖರ್ಚು ಮಾಡುವುದಲ್ಲದೆ ಹೆಚ್ಚು ತ್ಯಾಜ್ಯಕ್ಕೂ ಕಾರಣವಾಗುತ್ತದೆ. ಅಮೆರಿಕದ ಬಳಕೆದಾರರು ಪ್ರತಿದಿನ ಸುಮಾರು 4 ಲಕ್ಷ ಸೆಲ್‌ಫೋನ್‌ಗಳನ್ನು ಕಸಕ್ಕೆ ಎಸೆಯುತ್ತಾರೆ. ಅದರಲ್ಲಿ ಶೇ 15ರಷ್ಟು ಮಾತ್ರ ಮರುಬಳಕೆಯಾಗುತ್ತಿದೆ.

ದುರಸ್ತಿ ಸಮಸ್ಯೆಯು ಕೋವಿಡ್ ಸಂದರ್ಭದಲ್ಲಿ ಮತ್ತಷ್ಟು ಉಲ್ಬಣಗೊಂಡಿರುವುದು ಕಂಡುಬಂದಿದೆ. ಕೆಲವು ರಾಜ್ಯ ಸರ್ಕಾರಗಳು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸಿರುವ ಲ್ಯಾಪ್‌ಟಾಪ್‌ಗಳು ಕೆಟ್ಟು ಅವನ್ನು ರಿಪೇರಿ ಮಾಡಲಾಗದೆ ಉಪಕರಣಗಳು ಮೂಲೆ ಸೇರಿವೆ. ಇತ್ತ ಹೊಸ ಲ್ಯಾಪ್‌ಟಾಪ್ ಸರಬರಾಜು ಆಗಿಲ್ಲ. ಒಂದು ವೇಳೆ ತಯಾರಕರು ಲ್ಯಾಪ್‌ಟಾಪ್ ದುರಸ್ತಿ ಮಾಡಲು ಅವಕಾಶ ಕೊಟ್ಟಿದ್ದರೆ ಪರಿಸ್ಥಿತಿ ಸುಧಾರಿಸುತ್ತಿತ್ತು. ಜೊತೆಗೆ ಸ್ಥಳೀಯ ಕೌಶಲಕ್ಕೆ ಉತ್ತೇಜನವೂ ದೊರೆಯುತ್ತಿತ್ತು.

ರೈತರು ಕೃಷಿ ಬಳಕೆಯ ಉಪಕರಣಗಳು ಕೆಟ್ಟರೆ ಸ್ಥಳೀಯರಲ್ಲಿ ದುರಸ್ತಿ ಮಾಡಿಸಿಕೊಳ್ಳುತ್ತಿದ್ದರು. ಆದರೆ ಈಗ ಉಪಕರಣ ಖರೀದಿಸಿದವರಿಂದಲೇ ದುರಸ್ತಿ ಮಾಡಿಸಬೇಕಿದೆ. ಇದರಿಂದ ಹಣ, ಸಮಯ ಮತ್ತು ಶ್ರಮ ಎಲ್ಲವೂ ವ್ಯರ್ಥ. ಆದರೆ ಲಾಭ ಉತ್ಪಾದಕರಿಗೆ.

ಐವತ್ತರ ದಶಕದಲ್ಲಿ ಬ್ರೂಕ್ ಸ್ಟೀವನ್ಸ್ ಎಂಬ ಅಮೆರಿಕದ ಎಂಜಿನಿಯರ್ Planned Obsolescence ಎಂಬ ಪದವನ್ನು ಮೊದಲ ಬಾರಿ ಬಳಸಿದ್ದರು. ನಂತರ ಅರವತ್ತರ ದಶಕದಲ್ಲಿ ಪತ್ರಿಕೋದ್ಯಮಿ ಮತ್ತು ಗ್ರಾಹಕ ಹಕ್ಕುಗಳ ಹೋರಾಟಗಾರ ವ್ಯಾನ್‌ಪ್ಯಾಕಾರ್ಡ್ ತಮ್ಮ ‘ದ ಹಿಡನ್ ಪರ್ಸುಯೇಡರ್ಸ್’ ಪುಸ್ತಕದಲ್ಲಿ ಉತ್ಪಾದಕರ ಕುತಂತ್ರವನ್ನು ಬಯಲಿಗೆಳೆದಿದ್ದರು. ಎಪ್ಪತ್ತರ ದಶಕದಲ್ಲಿ, ಒಮ್ಮೆ ಉಪಯೋಗಿಸಿ ಎಸೆಯುವ (Throwaway culture) ಉಪಕರಣಗಳು ಕಾಣಿಸಿಕೊಂಡವು. ಇವುಗಳನ್ನು ದುರಸ್ತಿ ಮಾಡುವ ಮಾತು ಹಾಗಿರಲಿ, ಅದರ ಬಿಡಿ ಭಾಗವನ್ನು ತೆಗೆಯಬೇಕಾದರೆ ಉಪಕರಣವನ್ನೇ ಒಡೆಯಬೇಕಾಗುತ್ತದೆ. ದುಬಾರಿ ಬೆಲೆ ಕೊಟ್ಟು ಖರೀದಿಸುವ ಹಿಯರಿಂಗ್ ಏಡ್ಸ್ ಕೆಟ್ಟರೆ ರಿಪೇರಿ ಮಾಡುವವರು ದೊರಕುತ್ತಾರಾ ಪರೀಕ್ಷಿಸಿ ನೋಡಿ.

ಈ ಹಿನ್ನೆಲೆಯಲ್ಲಿ ಬಳಕೆದಾರರ ಹಿತದೃಷ್ಟಿ ಹಾಗೂ ಪರಿಸರ ಸಂರಕ್ಷಣೆಗಾಗಿ ಬಳಕೆದಾರರಿಗೆ ರಿಪೇರಿ ಮಾಡುವ ಹಕ್ಕನ್ನು (ರೈಟ್ ಟು ರಿಪೇರ್) ನೀಡಬೇಕೆಂಬ ಚಳವಳಿ ಆರಂಭವಾಯಿತು. ಈ ಚಳವಳಿ ಮುಖ್ಯವಾಗಿ ನಾಲ್ಕು ಉದ್ದೇಶಗಳನ್ನು ಹೊಂದಿದೆ. ರಿಪೇರಿ ಮಾಡುವ ವಿಧಾನದ ಬಗ್ಗೆ ಮಾಹಿತಿ, ಬಿಡಿಭಾಗಗಳ ಲಭ್ಯತೆ ಹಾಗೂ ರಿಪೇರಿ ಮಾಡುವ ಸಾಧ್ಯತೆ ಇರುವಂತೆ ಉಪಕರಣದ ವಿನ್ಯಾಸ. ಕೆಟ್ಟಿರುವ ಉಪಕರಣವನ್ನು ಸ್ವತಂತ್ರವಾಗಿ ದುರಸ್ತಿ ಮಾಡಿಕೊಳ್ಳುವ ಹಕ್ಕನ್ನು ಬಳಕೆದಾರರಿಗೆ ನೀಡುವುದೇ ಈ ಚಳವಳಿಯ ಮುಖ್ಯ ಉದ್ದೇಶ. ಇದರ ಜೊತೆಗೆ ಉಪಕರಣಕ್ಕೆ ಬೇಕಾದ ಬಿಡಿಭಾಗಗಳು ಹಾಗೂ ಸಲಕರಣೆಗಳನ್ನು ತಯಾರಿಸುವುದು, ದುರಸ್ತಿ ಮಾಡುವ ವಿಧಾನದ ಬಗ್ಗೆ ಬಳಕೆದಾರರಿಗೆ ಮಾಹಿತಿ

ನೀಡುವುದು, ಒಂದು ನಮೂನೆಯ ಉಪಕರಣವನ್ನು ಮಾರುಕಟ್ಟೆಯಿಂದ ಹಿಂಪಡೆದರೂ ಕೆಲವು ವರ್ಷ ಅದರ ಬಿಡಿಭಾಗಗಳನ್ನು ಸರಬರಾಜು ಮಾಡುವಂತೆ ಉತ್ಪಾದಕರ ಮೇಲೆ ಒತ್ತಾಯ ತರುವುದು ಇತರ ಉದ್ದೇಶಗಳು.

ದುರಸ್ತಿ ಹಕ್ಕು ಸ್ಥೂಲವಾಗಿ ಹೇಳುವುದಾದರೆ, ಬಳಕೆದಾರರು ಖರೀದಿಸಿರುವ ಉಪಕರಣವನ್ನು ಬಿಚ್ಚಿ ನೋಡುವ, ಅದನ್ನು ಮಾರ್ಪಡಿಸುವ, ದುರಸ್ತಿ ಮಾಡುವ ಮತ್ತು ಉಪಕರಣದ ಸಾಫ್ಟ್‌ವೇರ್ ಅನ್‌ಲಾಕ್ ಮಾಡುವ ಹಕ್ಕುಗಳನ್ನು ಒಳಗೊಂಡಿದೆ. ಜೊತೆಗೆ, ಬಳಕೆದಾರರಿಗೆ ದುರಸ್ತಿ ಮಾಡುವ ವಿಧಾನದ ಬಗ್ಗೆ ಮಾಹಿತಿ ಹೊಂದುವ ಹಕ್ಕನ್ನು ಹೊಂದಿದೆ. ದುರಸ್ತಿ ಮಾಡಬಹುದಾದ ಉಪಕರಣಗಳ ಹಕ್ಕು, ಬೇಕಾದ ಅಂಗಡಿಯಲ್ಲಿ ದುರಸ್ತಿ ಮಾಡಿಸಿಕೊಳ್ಳುವ ಹಕ್ಕು ಸಹ ಸೇರಿವೆ. ಚಳವಳಿಯು ಈಗ ಅನೇಕ ರಾಷ್ಟ್ರಗಳಲ್ಲಿ ಹರಡಿದೆ. ಅಮೆರಿಕ, ಆಸ್ಟ್ರೇಲಿಯಾ ಮತ್ತು ಬ್ರಿಟನ್‌ನಲ್ಲಿ ಚಳವಳಿ ಫಲ ನೀಡಿದೆ. ಅಮೆರಿಕದ 32 ರಾಜ್ಯಗಳು ದುರಸ್ತಿ ಹಕ್ಕು ನೀಡುವ ಕಾನೂನನ್ನು ಈಗಾಗಲೆ ಸಿದ್ಧಪಡಿಸಿವೆ. ಬ್ರಿಟನ್‌ನಲ್ಲಿ ಇದಕ್ಕೆ ಸಂಬಂಧಿಸಿದ ನಿಯಮ ಈ ವರ್ಷದ ಜುಲೈನಿಂದ ಜಾರಿಗೆ ಬಂದಿದೆ. ಉಪಕರಣಗಳು ಕನಿಷ್ಠ ಹತ್ತು ವರ್ಷ ಬಾಳಿಕೆ ಬರುವಂತೆ ಕಾನೂನು ಮಾಡಿದೆ. ಇದರ ಪ್ರಕಾರ, ಟಿ.ವಿ, ಫ್ರಿಜ್, ವಾಷಿಂಗ್ ಮಶೀನ್ ಇತ್ಯಾದಿ ಉಪಕರಣಗಳ ಬಿಡಿಭಾಗಗಳು ದೊರೆಯುವಂತೆ ಕ್ರಮ ಕೈಗೊಳ್ಳುವುದು ಉತ್ಪಾದಕರ ಜವಾಬ್ದಾರಿ.

ಬಳಕೆದಾರರಿಗೆ ದುರಸ್ತಿ ಹಕ್ಕು ನೀಡುವುದಕ್ಕೆ ಕೆಲವು ಪ್ರಮುಖ ಉತ್ಪಾದಕರು ಸಿದ್ಧರಿಲ್ಲ. ದೈತ್ಯ ಕಂಪನಿಗಳಾದ ಅಮೆಜಾನ್, ಆ್ಯಪಲ್, ಮೈಕ್ರೊಸಾಫ್ಟ್, ಗೂಗಲ್ ಮತ್ತು ಟೆಸ್ಲಾ ಕಂಪನಿಗಳು ದುರಸ್ತಿ ಹಕ್ಕನ್ನು ವಿರೋಧಿಸುತ್ತಿವೆ. ತಮ್ಮ ವಹಿವಾಟು ಮತ್ತು ಲಾಭಕ್ಕೆ ಇದು ಮಾರಕ ಎಂಬುದು ನಿಜವಾದ ಕಾರಣವಾದರೂ ಬಳಕೆದಾರರಿಗೆ ದುರಸ್ತಿ ಹಕ್ಕು ನೀಡುವುದು ಬೌದ್ಧಿಕ ಆಸ್ತಿ ಹಕ್ಕಿನ ಉಲ್ಲಂಘನೆ ಹಾಗೂ ದತ್ತಾಂಶ ಮತ್ತು ಸೈಬರ್ ಸುರಕ್ಷತೆಗಾಗಿ ರಿಪೇರಿ ಹಕ್ಕನ್ನು ಬಳಕೆದಾರರಿಗೆ ನೀಡಬಾರದೆಂದು ಹೇಳುತ್ತಿವೆ.

ಆ್ಯಪಲ್ ಕಂಪನಿಯು ಹಳೆಯ ಮಾದರಿ ಐಫೋನ್ ಕಾರ್ಯಾಚರಣೆಯ ವೇಗವನ್ನು ಉದ್ದೇಶಪೂರ್ವಕವಾಗಿ ಕಡಿಮೆ ಮಾಡಿದೆ ಎಂಬ ಆರೋಪ ನಾಲ್ಕು ವರ್ಷಗಳ ಹಿಂದೆ ಕೇಳಿಬಂದಿತ್ತು. ಬಳಕೆದಾರರು ಅಪ್‌ಗ್ರೇಡ್ ಆಗಿರುವ ಹೊಸ ಫೋನ್ ಖರೀದಿಸಲು ಮಾಡಿದ ಉಪಾಯ ಇದು ಎಂದು ಕೆಲವು ಬಳಕೆದಾರರು ಅಸಮಾಧಾನ ವ್ಯಕ್ತಪಡಿಸಿದ್ದರು. ತಾಂತ್ರಿಕ ಕಾರಣ ಹೇಳಿ ಆ್ಯಪಲ್ ಸಂಸ್ಥೆ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಇದಕ್ಕಾಗಿ ಕಂಪನಿಯ ವಿರುದ್ಧ 11.3 ಕೋಟಿ ಡಾಲರ್ ದಂಡ ವಿಧಿಸಲಾಗಿತ್ತು. ಇದಾದ ನಂತರ ಆ್ಯಪಲ್ 2019ರಲ್ಲಿ ಹೊಸ ನಿಯಮ ಜಾರಿಗೊಳಿಸಿ, ಬಳಕೆದಾರರು ಸ್ವತಂತ್ರವಾಗಿ ರಿಪೇರಿ ಮಾಡಿಸಿಕೊಳ್ಳಲು ಅನುಮತಿ ನೀಡಿದ್ದಲ್ಲದೆ, ಬಿಡಿಭಾಗಗಳ ಮಾರಾಟ ಆರಂಭಿಸಿತು.

ಭಾರತದಲ್ಲೂ ದುರಸ್ತಿ ಹಕ್ಕಿನ ಬಗ್ಗೆ ಚರ್ಚೆ ಆರಂಭವಾಗಿದ್ದರೂ ಅದೇಕೋ ಗ್ರಾಹಕ ವ್ಯವಹಾರ ಇಲಾಖೆ ಇದರತ್ತ ಗಮನಹರಿಸಿಲ್ಲ. ಕಳೆದ ವರ್ಷ ಜಾರಿಗೆ ಬಂದ ಹೊಸ ಗ್ರಾಹಕ ಸಂರಕ್ಷಣಾ ಅಧಿನಿಯಮದಲ್ಲಿ ದುರಸ್ತಿ ಹಕ್ಕನ್ನು ಸೇರಿಸುವ ಅವಕಾಶವಿತ್ತು. ಗ್ರಾಹಕ ಸಂಘಟನೆಗಳು ಈ ಹಕ್ಕಿಗಾಗಿ ಪ್ರಯತ್ನಿಸಬೇಕಿದೆ.

ಲೇಖಕ: ಗ್ರಾಹಕರ ಹಕ್ಕುಗಳ ತಜ್ಞ

ಚುರುಮುರಿ



ಹಬ್ಬದ ತಯಾರಿ

• ಸುಮಂಗಲಾ

ಬೆಕ್ಕಣ್ಣ ಏನೋ ಚಿತ್ರ ಬಿಡಿಸುತ್ತ ಕೂತಿತ್ತು. ಡ್ರಾಯಿಂಗ್ ಶೀಟಿನಲ್ಲಿ ಇಣುಕಿದೆ.

ಮನೆಯ ಪಡಸಾಲೆಯಲ್ಲಿ ನಾಲ್ಕಾರು ಆಕಳುಗಳಿದ್ದ ಚಿತ್ರ ಬರೆದಿತ್ತು. ನನಗೆ ತಲೆಬುಡ ಅರ್ಥವಾಗಲಿಲ್ಲ.

‘ನಾಳೆನೆ ಒಂದ್ ನಾಕು ಆಕಳು ತಗಂಡು ಬರೂಣು’ ಎಂದಿತು.

‘ನಾಕು? ನಿನ್ನ ತೆಲಿ ಮ್ಯಾಗ ಕಟ್ಟಲೇನು? ಈ ಸಣ್ಣ ಮನಿವಳಗೆ ಕೊಟ್ಟಿಗೆ ಎಲ್ಲಿ ಮಾಡತೀಯ? ಹುಚ್ಚೋಡಿ’ ಎಂದು ಬೈದೆ.

‘ಆಮ್ಲಜನಕ ತಗಂಡು, ಆಮ್ಲಜನಕ ಬಿಡುವ ಏಕೈಕ ಪ್ರಾಣಿ ಆಕಳು ಅಂತ ವಿಜ್ಞಾನಿಗಳು ನಂಬ್ಯಾರೆ. ಆಕಳು ಸಾಕಿದ್ರ ಆಮ್ಲಜನಕ ಮಟ್ಟ ಹೆಚ್ಚಾಗತೈತಂತ’ ಸುದ್ದಿ ತೋರಿಸಿತು.

‘ವಿಜ್ಞಾನಿಗಳು ಏನೇ ನಂಬಿದ್ರೂ ಪ್ರಯೋಗದಿಂದ ಸಾಬೀತು ಮಾಡ್ತಾರ. ಆಮ್ಲಜನಕ ತಗಂಡು, ಆಮ್ಲಜನಕನೇ ಹೊರಗೆ ಬಿಡ್ತದಂತ ಪ್ರಯೋಗ ಎಲ್ಲಿ ಹೇಳೈತಿ. ಮುಂದೆ ಓದು. ನೀ ಹುಲಿ ವಂಶಸ್ಥ ಹೌದಿಲ್ಲೋ... ನಿಮ್ಮ ವಂಶದವರಿಗೆ ಕೊಟ್ಟಿದ್ದ ರಾಷ್ಟ್ರೀಯ ಪ್ರಾಣಿ ಬಿರುದಾವಳಿ ಬ್ಯಾರೆಯವರಿಗಿ ಕೊಡತಾರ ನೋಡು’ ಎಂದೆ.

ಬುಡಕ್ಕೆ ಬೆಂಕಿ ಬಿದ್ದಾಗ ಎಚ್ಚೆತ್ತುಕೊಳ್ಳುವ ಶ್ರೀಸಾಮಾನ್ಯರಂತೆ ಬೆಕ್ಕಣ್ಣ ಥಟ್ಟನೆ ವರಸೆ ಬದಲಿಸಿ ‘ಹೇ... ಹಂಗೆಲ್ಲ ಮಾಡಂಗಿಲ್ಲ... ಹುಲಿಯೇ ನಮ್ಮ ರಾಷ್ಟ್ರೀಯ ಪ್ರಾಣಿ’ ಎನ್ನುತ್ತಾ ಗುರುಗುಟ್ಟಿತು.

ಸ್ವಲ್ಪ ಹೊತ್ತು ಬಿಟ್ಟು ‘ನನಗ ಹೊಸ ಮಾಸ್ಕ್, ಸ್ಯಾನಿಟೈಸರ್ ಎಲ್ಲಾ ತರಿಸಿಕೊಡು’ ಎಂದು ವರಾತ ಶುರುವಿಟ್ಟಿತು.

‘ಗಣೇಶೋತ್ಸವ ನೋಡಾಕ ಹೋಗತೀನಿ. ದಾರಿಲಿ ಇಲಿಗೋಳು ಸಿಕ್ತಾವಲ್ಲ, ಅವನ್ನು ಹಿಡೀತೀನಿ...’ ಎಂದಿತು.

‘ಅಲ್ಲಿ ಬರೀ ಇಲಿಗೋಳು ಸಿಗದಷ್ಟೇ ಅಲ್ಲ, ನಿಮ್ಮ ಕೊರೊನಣ್ಣನೂ ವೇಷ ಮರೆಸಿಕೊಂಡು ಬಂದರೆ...’ ಎಂದು ಎಚ್ಚರಿಸಿದೆ.

‘ನೀ ಎಲ್ಲಾದಕ್ಕ ಅಡ್ಡಗಾಲು ಹಾಕಬ್ಯಾಡ... ಬೊಮ್ಮಾಯಿಮಾಮಾ ಹೇಳಿದ ಷರತ್ತನ್ನೆಲ್ಲ ನಮ್ಮ ಜನ ಪಾಲಿಸ್ತಾರೇಳು’ ಎನ್ನುತ್ತ ಗಣೇಶೋತ್ಸವದ ಪೆಂಡಾಲಿಗೆ ಹೋಗಲು ಈಗಿಂದಲೇ ಸಿದ್ಧತೆ ನಡೆಸಿತು.

ಸಂಗತ

ಹಿತಾಸಕ್ತಿ ಮತ್ತು ವೈಚಾರಿಕತೆ

ತಾರ್ಕಿಕವಾಗಿ ಆಲೋಚಿಸುವವರು, ವೈಚಾರಿಕ ಮನೋಭಾವ ಹೊಂದಿದವರು ಇಂದು ಸಮಾಜಕ್ಕೆ ಅಪಥ್ಯ ಆಗತೊಡಗಿದ್ದಾರೆಯೇ?

• ಎಚ್.ಕೆ.ಶರತ್

ಆತ್ಮೀಯರೊಬ್ಬರು ಇತ್ತೀಚೆಗೆ ಅನಾರೋಗ್ಯದ ನಿಮಿತ್ತ ಆಸ್ಪತ್ರೆಗೆ ದಾಖಲಾಗಿದ್ದರಿಂದ, ಅವರ ಯೋಗಕ್ಷೇಮ ನೋಡಿಕೊಳ್ಳುವ ಸಲುವಾಗಿ ಅವರೊಂದಿಗೆ ಆಸ್ಪತ್ರೆಯಲ್ಲೇ ಒಂದು ದಿನ ಕಳೆಯಬೇಕಾಗಿ ಬಂತು. ನಾವಿದ್ದ ಕೊಠಡಿಯಲ್ಲೇ ದಾಖಲಾಗಿದ್ದ ಗರ್ಭಿಣಿಯೊಬ್ಬರು ಮರುದಿನ ಸಿಜೇರಿಯನ್ ಹೆರಿಗೆ ಮಾಡಿಸಿಕೊಳ್ಳುವವರಿದ್ದರು. ಮಗುವಿನ ಗಾತ್ರ ದೊಡ್ಡದಿರುವ ಕಾರಣ ಸಹಜ ಹೆರಿಗೆ ಸಾಧ್ಯವಿಲ್ಲವೆಂದು ತಿಳಿಸಿದ್ದ ವೈದ್ಯರು, ದಂಪತಿ ತಿಳಿಸುವ ಸಮಯಕ್ಕೆ ಹೆರಿಗೆ ಮಾಡಿಸುವುದಾಗಿ ಹೇಳಿದ್ದರು.

ವೈದ್ಯರ ಮಾತು ಕೇಳಿದ ಕೂಡಲೇ ಗರ್ಭಿಣಿ ಯುವತಿ ಒಳ್ಳೆ ಸಮಯ ಯಾವುದೆಂದು ವಿಚಾರಿಸಲು ತನ್ನ ಜೊತೆಗಿದ್ದ ತಾಯಿ ಮತ್ತು ಪತಿಗೆ ಸೂಚಿಸಿದಳು. ತನ್ನ ತಂದೆಗೆ ಕರೆ ಮಾಡಿದ ಪತಿ, ವೈದ್ಯರು ಹೇಳಿದ್ದನ್ನೆಲ್ಲ ಅವರಿಗೆ ತಿಳಿಸಿ, ‘ನಾಳೆ ಯಾವ ಸಮಯಕ್ಕೆ ಮಗು ಜನಿಸಿದರೆ ಸೂಕ್ತವೆಂದು ಕ್ಯಾಲೆಂಡರ್‌ನಲ್ಲಿ ನೋಡಿ ಹೇಳಿ ಅಣ್ಣ’ ಅಂತ ಕೋರಿದರು. ಅತ್ತ ಕಡೆಯಿಂದ ಯುವತಿಯ ಮಾವ ನೀಡಿದ ಪ್ರತಿಕ್ರಿಯೆ ಗಮನಾರ್ಹವಾಗಿತ್ತು.

‘ಮಗು ಯಾವ ಸಮಯದಲ್ಲಿ ಹುಟ್ಟಿದರೂ ತೊಂದರೆ ಇಲ್ಲ. ವೈದ್ಯರಿಗೆ ಯಾವ ಸಮಯ ಅನುಕೂಲವೋ ಆ ಸಮಯಕ್ಕೆ ಹೆರಿಗೆ ಮಾಡಲು ಹೇಳಿ. ರಾಹುಕಾಲ, ಗುಳಿಕಕಾಲ ಅಂತೆಲ್ಲ ನೋಡುತ್ತ ಕೂರಬೇಡಿ. ಹುಟ್ಟಿದ ಮಗು ಹೆಣ್ಣಾದರೂ ಆಗಲಿ, ಗಂಡಾದರೂ ಆಗಲಿ ಚಿಂತಿಸಲು ಹೋಗಬೇಡಿ. ತಾಯಿ-ಮಗು ಆರೋಗ್ಯವಾಗಿದ್ದರೆ ಅಷ್ಟೇ ಸಾಕು’ ಅಂತ ಮಗನಿಗೆ ಬುದ್ಧಿಮಾತು ಹೇಳಿದರು. ಲೌಡ್ ಸ್ಪೀಕರ್ ಆನ್ ಮಾಡಿದ್ದರಿಂದ ಈ ಸಂಭಾಷಣೆಯು ಕೊಠಡಿಯಲ್ಲಿದ್ದ ಎಲ್ಲರ ಕಿವಿಗೂ ಬೀಳುತ್ತಿತ್ತು.

ಮಾವನ ಮಾತಿಗೆ ಸಹಮತ ವ್ಯಕ್ತಪಡಿಸದ ಯುವತಿ, ಆನಂತರ ಪತಿಗೆ, ‘ನಾವು ಹೇಳಿದ ಸಮಯಕ್ಕೆ ಹೆರಿಗೆ ಮಾಡುವುದಾಗಿ ವೈದ್ಯರೇ ಹೇಳಿರುವಾಗ ಒಳ್ಳೆ ಸಮಯದಲ್ಲೇ ಮಾಡಿಸಿಕೊಳ್ಳುವುದು ಸೂಕ್ತ’ ಎಂಬ ಅಭಿಪ್ರಾಯ ತಿಳಿಸಿ, ಒಳ್ಳೆ ಸಮಯ ಗುರುತಿಸುವ ಜವಾಬ್ದಾರಿಯನ್ನು ತನ್ನ ತಂದೆಗೆ ನೀಡಿದಳು.

ಮಗಳಿಗೆ ಕರೆ ಮಾಡಿದ ಯುವತಿಯ ತಂದೆ, ನಿರ್ದಿಷ್ಟ ಕಾಲಾವಧಿ ಸೂಚಿಸಿ, ‘ಆ ವೇಳೆಯಲ್ಲಿ ಹೆರಿಗೆ ನಡೆದರೆ ಮಗು ಒಳ್ಳೆಯ ನಕ್ಷತ್ರದಲ್ಲಿ ಜನಿಸಲಿದೆ ಎಂದು ಅಯ್ಯನವರು ತಿಳಿಸಿದ್ದಾರೆ, ವೈದ್ಯರಿಗೆ ಅದೇ ಸಮಯ ತಿಳಿಸಿ’ ಎಂದರು. ‘ಮಾವನಿಗೆ ಇಂಥದ್ದರಲ್ಲೆಲ್ಲ ನಂಬಿಕೆಯಿಲ್ಲ. ಅಪ್ಪ ತಿಳಿಸಿದ ಸಮಯಕ್ಕೆ ಹೆರಿಗೆ ಮಾಡಿಸಿಕೊಳ್ತೀನಿ’ ಎಂದು ಯುವತಿ ಹೇಳಿದಳು.

ಯುವತಿಯ ಮಾವನ ಹಾಗೆ, ತನ್ನ ಬಳಿ ಚಿಕಿತ್ಸೆ ಪಡೆಯುತ್ತಿರುವ ವ್ಯಕ್ತಿಗೆ ತಿಳಿವಳಿಕೆ ಮೂಡಿಸುವ ಜವಾಬ್ದಾರಿ ನಿರ್ವಹಿಸಬಹುದಾಗಿದ್ದ ವೈದ್ಯರು, ಹಾಗೇಕೆ ಮಾಡಲಿಲ್ಲ? ‘ನಾವು ತಿಳಿಸಿದ ಸಮಯಕ್ಕೆ ಸರಿಯಾಗಿ ಮಗು ಹುಟ್ಟುವ ಹಾಗೆ ಈ ಡಾಕ್ಟ್ರು ನೋಡಿಕೊಳ್ತಾರೆ’ ಎನ್ನುವ ಬಾಯಿ ಪ್ರಚಾರದಿಂದ ತಮಗಾಗುವ ಅನುಕೂಲ ಹಾಗೆ ಹೇಳದಿರುವಂತೆ ಅವರನ್ನು ತಡೆಯುತ್ತಿದೆಯೇ? ತಮ್ಮ ಬಳಿ ಚಿಕಿತ್ಸೆಗೆ ಬರುವವರ ನಂಬಿಕೆಗಳಿಗೆ ಗಾಸಿ ಮಾಡದೆ ಹೋದರೂ ಅದನ್ನೇ ಎತ್ತಿ ಹಿಡಿಯುವ ಉತ್ಸಾಹ ತೋರಬಾರದಲ್ಲವೇ?

ಮೊದಲೆಲ್ಲ ಟಿ.ವಿ. ವಾಹಿನಿಗಳ ಮೂಲಕ ವಾಸ್ತುತಜ್ಞನಾಗಿ ಸರಳ ಮಾರ್ಗದಲ್ಲಿ ಹೊರಹೊಮ್ಮಿದ ವ್ಯಕ್ತಿಯ ಕುರಿತು ಅಸಮಾಧಾನ ಸೂಚಿಸುತ್ತ, ‘ಇವರಿಂದಾಗಿ ಜನರ ನೆಮ್ಮದಿ ಹಾಳು. ಗಾಳಿ-ಬೆಳಕು ಚೆನ್ನಾಗಿ ಬರುವಂತೆ ಮನೆ ವಿನ್ಯಾಸ ಮಾಡಿದರೆ ಸಾಕು. ಅದೇ ವಾಸ್ತು’ ಎನ್ನುತ್ತಿದ್ದ ಸಿವಿಲ್ ಎಂಜಿನಿಯರ್ ಆಗಿರುವ ಸ್ನೇಹಿತ, ಇದೀಗ ತನ್ನದೇ ಗೃಹ ವಿನ್ಯಾಸ ಮತ್ತು ನಿರ್ಮಾಣ ಸಂಸ್ಥೆ ಹೊಂದಿದ್ದಾನೆ. ಅವನ ಕಚೇರಿಯ ಗೋಡೆಯ ಮೇಲೆ ಎದ್ದು ಕಾಣುವ ವಾಕ್ಯ ‘ವಾಸ್ತು ಪ್ರಕಾರ ಮನೆ ವಿನ್ಯಾಸ ಮಾಡಿಕೊಡುತ್ತೇವೆ’ ಎನ್ನುವುದೇ ಆಗಿದೆ. ಈ ಬದಲಾವಣೆಗೆ ಕಾರಣವೇನೆಂದು ವಿಚಾರಿಸಿದರೆ, ‘ನಮ್ಮ ಬುದ್ಧಿಮಾತು ಕೇಳುವ ಸ್ಥಿತಿಯಲ್ಲಿ ಜನ ಇಲ್ಲ. ಹಾಗಾಗಿ ನಾವೂ ಈ ಢೋಂಗಿ ವಾಸ್ತು ತಜ್ಞರನ್ನೇ ಹಿಂಬಾಲಿಸುತ್ತಿದ್ದೇವೆ’ ಅನ್ನುವ ಸಬೂಬು ನೀಡುತ್ತಾನೆ.



ಸಿಜೇರಿಯನ್ ಹೆರಿಗೆಗೆ ಒಳ್ಳೆ (?) ದಿನ ಮತ್ತು ಸಮಯ ಆಯ್ದುಕೊಳ್ಳಲು ಗರ್ಭಿಣಿ ಹಾಗೂ ಆಕೆಯ ಕಡೆಯವರಿಗೆ ಅವಕಾಶ ಕಲ್ಪಿಸುವ ವೈದ್ಯರು, ವಾಸ್ತು ಪ್ರಕಾರ ವಿನ್ಯಾಸ ಮಾಡುವುದಾಗಿ ಆಶ್ವಾಸನೆ ನೀಡುವ ಸಿವಿಲ್ ಎಂಜಿನಿಯರ್‌ಗಳು ಗ್ರಾಹಕರನ್ನು ಸಂತೃಪ್ತಗೊಳಿಸುವುದರಲ್ಲಿ ತಮ್ಮ ಹಿತ ಅಡಗಿದೆ ಎನ್ನುವ ಮಾರುಕಟ್ಟೆ ಸೂತ್ರಕ್ಕೆ ತಲೆಬಾಗುತ್ತಿರುವರೇ? ಹಾಗಾದರೆ ತರ್ಕಕ್ಕೆ ಮಾರುಕಟ್ಟೆ ಇಲ್ಲವೇ?

ತನ್ನ ಸಹಜ ತಿಳಿವಳಿಕೆಯಿಂದಾಗಿಯೇ ವೈಜ್ಞಾನಿಕವಾಗಿ ಆಲೋಚಿಸಬಲ್ಲ ಮಾವನ ಮಾತು ಗರ್ಭಿಣಿ ಯುವತಿಗೆ ಅಪಥ್ಯವಾದಂತೆ, ಇಂದು ತಾರ್ಕಿಕವಾಗಿ ಆಲೋಚಿಸುವವರು, ವೈಚಾರಿಕ ಮನೋಭಾವ ಹೊಂದಿದವರು ಸಮಾಜಕ್ಕೆ ಅಪಥ್ಯ ಆಗತೊಡಗಿದ್ದಾರೆಯೇ? ‘ಬುದ್ಧಿಜೀವಿ’ ಎಂಬ ಪದಕ್ಕೆ ಕಳೆದ ಒಂದು ದಶಕದಿಂದೀಚೆಗೆ ದಕ್ಕಿರುವ ಕುಖ್ಯಾತಿ ಗಮನಿಸಿದರೆ, ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಕಷ್ಟವೇನಲ್ಲ.

ವಾಚಕರ ವಾಣಿ

ಬರವಣಿಗೆ ನೆಚ್ಚಿದವರಿಗೆ ಜಿಎಸ್‌ಟಿ ಹೊರೆ

ಪುಸ್ತಕೋದ್ಯಮಕ್ಕೆ ತೆರಿಗೆ ಕುರಿತು ಬರೆದಿರುವ ಎಚ್.ಎಸ್.ಮಂಜುನಾಥ ಅವರು (ವಾ.ವಾ., ಸೆ. 6) ಲೇಖಕರ ಗೌರವಧನದ ಮೇಲಿನ ಶೇ 12ರಷ್ಟು ಜಿಎಸ್‌ಟಿಯನ್ನು ಪ್ರಕಾಶಕರೇ ಭರಿಸುತ್ತಾರೆ ಎಂದಿದ್ದಾರೆ. ಇದು ಸತ್ಯವಲ್ಲ. ಎಲ್ಲ ಪ್ರಕಾಶಕರೂ ಪೂರ್ತಿಯಾಗಿ ಭರಿಸುತ್ತಿಲ್ಲ, ಕೆಲವರಿರಬಹುದು. ನನ್ನ ಬಗ್ಗೆಯೇ ಹೇಳುವುದಾದರೆ, ನನ್ನ ಪುಸ್ತಕಗಳನ್ನು ಪ್ರಕಟಿಸಿರುವ ಪ್ರಕಾಶನ ಸಂಸ್ಥೆಯೊಂದು ಶೇ 6ರಷ್ಟು ಜಿಎಸ್‌ಟಿ ಕಡಿತ ಮಾಡಿ ಗೌರವಧನ ಪಾವತಿಸಿದೆ. ಶೇ 6ರಷ್ಟನ್ನು ಮಾತ್ರ ಅದು ಭರಿಸಿದೆ. ಇದು ಪ್ರಕಾಶನದ ವಿರುದ್ಧ ದೂರಲ್ಲ. ಲೇಖಕ- ಪ್ರಕಾಶಕರಿಬ್ಬರೂ ಜಿಎಸ್‌ಟಿ ಹೊರೆಯನ್ನು ಸಮಸಮ ಭರಿಸಬೇಕೆಂಬ ಅವರ ಮಾತೂ ನ್ಯಾಯವಾದುದೇ. ಆದರೆ, ಯಾವುದೇ ಸಾಮಾಜಿಕ ಭದ್ರತೆ ಇಲ್ಲದ, ಜೀವನೋಪಾಯಕ್ಕೆ ಬರವಣಿಗೆಯನ್ನೇ ನೆಚ್ಚಿಕೊಂಡಿರುವ ನನ್ನಂಥ ಲೇಖಕರು ಮತ್ತು ಪತ್ರಕರ್ತರಿಗೆ ಶೇ 6ರಷ್ಟು ಜಿಎಸ್‌ಟಿಯೂ ಹೊರೆಯೇ.

ಕೆಲವೊಂದು ಪ್ರಕಾಶನ ಸಂಸ್ಥೆಗಳನ್ನು ಬಿಟ್ಟರೆ ಸಣ್ಣಪುಟ್ಟ ಪ್ರಕಾಶನಗಳೆಲ್ಲ ಭಾರಿ ಲಾಭದಾಯಕವಾದ ವಾಣಿಜ್ಯೋದ್ಯಮ ಅಲ್ಲವೇ ಅಲ್ಲ. ಬಹುತೇಕ ಲಾಭ- ನಷ್ಟ ಇಲ್ಲದ ಹವ್ಯಾಸಿ ಸಂಸ್ಥೆಗಳು. ಕನ್ನಡದ ಮಟ್ಟಿಗಂತೂ ಇದು ನಿಜ. ಗೌರವಧನದಲ್ಲಿ ಕಡಿತವಾದ ಜಿಎಸ್‌ಟಿಯನ್ನು ವರಮಾನ ತೆರಿಗೆಯಂತೆ ರಿಟರ್ನ್ಸ್ ಸಲ್ಲಿಸಿ ಹಿಂಪಡೆಯಲೂ ಅವಕಾಶವಿಲ್ಲ. ಪುಸ್ತಕ ಪ್ರಕಾಶಕರನ್ನೂ ಲೇಖಕರನ್ನೂ ಜಿಎಸ್‌ಟಿಯಿಂದ ಪಾರು ಮಾಡಬೇಕೆಂಬ ಸಲಹೆ ಸಮಾಜಕಂಟಕವಾದುದೇನೂ ಅಲ್ಲ. ಭಾಷೆಗೆ, ಪುಸ್ತಕ ಸಂಸ್ಕೃತಿಗೆ ತೋರಬಹುದಾದ ಸಣ್ಣ ರಿಯಾಯಿತಿ ಆದೀತಷ್ಟೆ.

ಜಿ.ಎನ್.ರಂಗನಾಥ ರಾವ್, ಬೆಂಗಳೂರು

ಬಾಳು ಬೆಳಗುವ ನಿರ್ಧಾರ

ಆನ್‌ಲೈನ್ ಜೂಜು ನಿಷೇಧಿಸಲು
ರಾಜ್ಯ ಸರ್ಕಾರದ ನಿರ್ಧಾರ,
ಚಿತ್ರನಟರು, ಕ್ರಿಕೆಟ್ ತಾರೆಯರು
ಯುವಜನರನ್ನು ಇಷ್ಟು ದಿನ
ಜೂಜಾಡಲು ಪ್ರೇರೇಪಿಸಿದ್ದು
ದುರದೃಷ್ಟಕರ ವಿಚಾರ,
ಒಬ್ಬ ಗೆದ್ದು ಸಂಭ್ರಮಿಸಿದರೆ ಲಕ್ಷ ಜನ ಸೋತು
ಮರುಗುವ ಜೂಜು ನಿಷೇಧದ ಸುದ್ದಿ
ಬಾಳು ಬೆಳಗುವ ನಿರ್ಧಾರ.

ಸರ್ದಾರ್ ಎಂ. ತನಾರ್ಖ್, ಅರಸೀಕೆರೆ

ಆದೇಶ ಉಲ್ಲಂಘನೆಗೆ ದಾರಿಯಾದವರು!

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ವಿಧಾನಸೌಧದಲ್ಲಿ ನಡೆದ ಸಮಾರಂಭವೊಂದರಲ್ಲಿ ಹಾರ, ಪೇಟ, ಶಾಲು ಸ್ವೀಕರಿಸಿ ಸನ್ಮಾನಿತರಾಗುವುದರೊಂದಿಗೆ ತಮ್ಮ ಆದೇಶವನ್ನು ತಾವೇ ಉಲ್ಲಂಘಿಸಿದಂತಾಗಿದೆ.

ಮುಖ್ಯಮಂತ್ರಿಯಾದ ಹೊಸತರಲ್ಲಿ ಝೀರೊ ಟ್ರಾಫಿಕ್ ಬಗ್ಗೆ, ಹಾರ- ತುರಾಯಿ ಬಗ್ಗೆ, ಗೌರವವಂದನೆ ಬಗ್ಗೆ ಅವರು ತೆಗೆದುಕೊಂಡ ತೀರ್ಮಾನಗಳು ಜನರಲ್ಲಿ ಆಶಾಭಾವ ಮೂಡಿಸುವಂತಿದ್ದವು. ಆದರೆ ಈಗ ಆ ಭಾವನೆಗೆ ಅವರೇ ಧಕ್ಕೆ ತಂದಿದ್ದಾರೆ! ಅವರ ಸಂಪುಟದ ಸಚಿವರಿಗೂ ಆದೇಶ ಉಲ್ಲಂಘನೆಗೆ ದಾರಿ ಮಾಡಿಕೊಟ್ಟಂತಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಅಪಾಯದ ಮೌಲ್ಯಮಾಪನ: ಬೇಕು ತರಬೇತಿ

ಗೌರಿ-ಗಣೇಶ ಹಬ್ಬದ ಆಚರಣೆಗೆ ಕೋವಿಡ್ ನಿಯಮ ಪಾಲನೆ ಹಾಗೂ ಷರತ್ತುಬದ್ಧ ಅನುಮತಿ ನೀಡಲು ಸರ್ಕಾರ ತೀರ್ಮಾನಿಸಿರುವುದು (ಪ್ರ.ವಾ., ಸೆ. 6) ಒಳ್ಳೆಯದು. ಆದರೆ, ಕೋವಿಡ್ ಸುರಕ್ಷತೆಯಷ್ಟೇ ವಿದ್ಯುತ್, ನೀರಿನಂಥ ಅನ್ಯ ಕಾರಣಗಳಿಂದ ಅವಘಡಗಳು ಸಂಭವಿಸುವ ಅನೇಕ ಉದಾಹರಣೆಗಳಿದ್ದು, ಅವುಗಳನ್ನು ಕೂಡ ತಪ್ಪಿಸುವ ಸಲುವಾಗಿ ಆಲೋಚಿಸುವುದು ಮುಖ್ಯವಾದ ಅಂಶ.

ಸಂಘಟಕರು ಹಬ್ಬದ ಆಚರಣೆಯ ಸಂಪೂರ್ಣ ಚಟುವಟಿಕೆಗಳನ್ನು ಪಟ್ಟಿ ಮಾಡಿ, ಅವುಗಳಿಂದ ಆಗಬಹುದಾದ ಅಪಾಯದ ಮೌಲ್ಯಮಾಪನ ಮಾಡುವುದರಿಂದ, ಸ್ವಲ್ಪದರಲ್ಲಿಯೇ ತಪ್ಪಿ ಹೋಗುವ ಸಾಧ್ಯತೆಗಳಿರುವಂಥ ಘಟನೆಗಳನ್ನು ಗುರುತಿಸಬಹುದು. ಇದರಿಂದ, ಅಪಘಾತಗಳನ್ನು ತಪ್ಪಿಸಲು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ವಿಪುಲ ಅವಕಾಶಗಳು ತೆರೆದುಕೊಳ್ಳುತ್ತವೆ. ಈ ದಿಸೆಯಲ್ಲಿ ಸರ್ಕಾರವು ಸಂಘಟಕರಿಗೆ ‘ಅಪಾಯದ ಮೌಲ್ಯಮಾಪನ ಕೌಶಲ’ಗಳ ಬಗ್ಗೆ ತರಬೇತಿ ಏರ್ಪಡಿಸುವ ಬಗ್ಗೆಯೂ ಚಿಂತನೆ ನಡೆಸಬೇಕು.

ಡಾ. ಜಿ.ಬೈರೇಗೌಡ, ಬೆಂಗಳೂರು

ಶಾಲಾ ಹಂತದಲ್ಲಿ ಹೊಸ ನೀತಿ ಅನುಷ್ಠಾನ ಸಾಧ್ಯವೇ?

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಶಿಕ್ಷಣದಲ್ಲಿ ಅಳವಡಿಸುವ ಇಂಗಿತವನ್ನು ಶಿಕ್ಷಣ ಸಚಿವರು ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ಆದರೆ, ಬಾಲ್ಯಪೂರ್ವ ಕಾಳಜಿ ಮತ್ತು ಶಿಕ್ಷಣ, ಬುನಾದಿ ಶಿಕ್ಷಣ ಹಂತವನ್ನು ಯಾವ ರೀತಿ ಅನುಷ್ಠಾನಗೊಳಿಸುತ್ತಾರೆ ಎಂಬುದರ ಆಧಾರದ ಮೇಲೆ ಈ ನೀತಿಯ ಭವಿಷ್ಯ ನಿರ್ಧಾರವಾಗುತ್ತದೆ.

ಬುನಾದಿ ಶಿಕ್ಷಣವನ್ನು ಯಶಸ್ವಿಗೊಳಿಸಬೇಕಾದರೆ ಮೊದಲು ಅಂಗನವಾಡಿ, ಪೂರ್ವ ಪ್ರಾಥಮಿಕದಲ್ಲಿ ಈಗ ನೀಡುತ್ತಿರುವ ಶಿಕ್ಷಣದ ಹಂತದಲ್ಲಿ ಈಗಿನಿಂದಲೇ ಪೂರ್ವ ತಯಾರಿ ನಡೆಸಬೇಕಾಗುತ್ತದೆ. ಏಕೆಂದರೆ, ಅಲ್ಲಿ 3 ವರ್ಷದಿಂದ 6 ವರ್ಷದವರೆಗೆ ನೀಡುವ ಬುನಾದಿ ಶಿಕ್ಷಣವನ್ನು ಪ್ರತ್ಯೇಕವಾಗಿ ಮಾಡಬೇಕೋ ಅಥವಾ ಈಗಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇರಿಸಬೇಕೋ? ಯಾವ ಶಿಕ್ಷಕರನ್ನು ನೇಮಕ ಮಾಡಬೇಕು? ಅಂಗನವಾಡಿ ಶಿಕ್ಷಕಿಯರನ್ನೇ ಮುಂದುವರಿಸಬೇಕೇ ಎಂಬಂಥ ಅಂಶಗಳೆಲ್ಲ ಮುಖ್ಯವಾಗುತ್ತವೆ.

ನಿಂಗಪ್ಪ ಮಾಳಶೆಟ್ಟಿ, ವ್ಯಾಸನಕೆರೆ, ಹೊಸಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಕ್ಷಗಳ ಆದಾಯ ಅನಾಮಧೇಯ

ದೇಣಿಗೆಯೇ ರಾಜಕೀಯ ಪಕ್ಷಗಳ ಆದಾಯದ ಪ್ರಧಾನ ಮೂಲ. 2019-20ನೇ ಸಾಲಿನಲ್ಲಿ ದೇಶದ ಪ್ರಮುಖ, ಏಳು ರಾಜಕೀಯ ಪಕ್ಷಗಳು ಒಟ್ಟು ₹ 4758 ಕೋಟಿ ಆದಾಯವನ್ನು ಸಂಗ್ರಹಿಸಿವೆ. ಇದರಲ್ಲಿ ಶೇ 92ಕ್ಕೂ ಹೆಚ್ಚು ಆದಾಯವನ್ನು ದೇಣಿಗೆ ಮೂಲಕ ಸಂಗ್ರಹಿಸಿವೆ. ಆದರೆ ಒಟ್ಟು ಆದಾಯದಲ್ಲಿ ಶೇ 70ಕ್ಕೂ ಹೆಚ್ಚು ದೇಣಿಗೆಯನ್ನು ನೀಡಿದವರು ಯಾರು ಎಂಬ ವಿವರ ಲಭ್ಯವಿಲ್ಲ. ಆ ವಿವರವನ್ನು ಕಡ್ಡಾಯವಾಗಿ ನೀಡಲೇಬೇಕು ಎಂಬ ಕಾನೂನು ದೇಶದಲ್ಲಿ ಇಲ್ಲ. ಹೀಗಾಗಿ ರಾಜಕೀಯ ಪಕ್ಷಗಳು ತಮ್ಮ ಆದಾಯದ ಬಹುಪಾಲು ಮೂಲವನ್ನು ಪೂರ್ಣ ಪ್ರಮಾಣದಲ್ಲಿ ಘೋಷಿಸುವುದೇ ಇಲ್ಲ

ಆದಾಯ ಮೂಲ

ಏಳು ರಾಷ್ಟ್ರೀಯ ಪಕ್ಷಗಳು 2019-20ರಲ್ಲಿ ಸಂಗ್ರಹಿಸಿರುವ ವಿವಿಧ ಮೂಲದ ಆದಾಯಕ್ಕೆ ಸಂಬಂಧಿಸಿದ ವಿವರವನ್ನು ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಗೆ ನೀಡಿವೆ. ಈ ಲೆಕ್ಕಪತ್ರಗಳ ಪ್ರಕಾರ, ಈ ಅವಧಿಯಲ್ಲಿ ಸಂಗ್ರಹಿಸಿದ ಆದಾಯದಲ್ಲಿ ಅನಾಮಧೇಯ ಮತ್ತು ಅಘೋಷಿತ ವ್ಯಕ್ತಿಗಳು ನೀಡಿದ ದೇಣಿಗೆಯ ಪ್ರಮಾಣವು ಶೇ 70ರಷ್ಟನ್ನು ದಾಟುತ್ತದೆ.



- ರಾಜಕೀಯ ಪಕ್ಷಗಳಿಗೆ ಯಾವುದೇ ವ್ಯಕ್ತಿ ನಗದು ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ₹20,000ಕ್ಕಿಂತ ಕಡಿಮೆ ಇದ್ದರೆ, ಅವರ ಹೆಸರನ್ನು ಪಕ್ಷಗಳು ಬಹಿರಂಗಪಡಿಸಬೇಕಿಲ್ಲ
- ಚುನಾವಣಾ ಬಾಂಡ್ ಮೂಲಕ ನೀಡಲಾದ ದೇಣಿಗೆಯು ಎಷ್ಟೇ ಮೊತ್ತದ್ದು ಆಗಿದ್ದರೂ, ದೇಣಿಗೆ ನೀಡಿದವರ ವಿವರವನ್ನು ರಾಜಕೀಯ ಪಕ್ಷಗಳು ಬಹಿರಂಗಪಡಿಸಬೇಕಿಲ್ಲ
- ಈ ಎರಡು ಮೂಲದಿಂದ ಪಡೆದ ದೇಣಿಗೆಯ ಮೊತ್ತವೇ, ರಾಜಕೀಯ ಪಕ್ಷಗಳ ಆದಾಯದ ಪ್ರಧಾನ ಮೂಲವಾಗಿದೆ. ಆದರೆ, ಇವುಗಳ ಬಗ್ಗೆ ವಿವರ ನೀಡಲೇಬೇಕಾದ ಒತ್ತಡ ರಾಜಕೀಯ ಪಕ್ಷಗಳ ಮೇಲೆ ಇಲ್ಲ

ಚುನಾವಣಾ ಬಾಂಡ್‌ನದ್ದು ಸಿಂಹಪಾಲು



- ರಾಜಕೀಯ ಪಕ್ಷಗಳ ಅನಾಮಧೇಯ ಮೂಲಗಳ ಆದಾಯದಲ್ಲಿ ಚುನಾವಣಾ ಬಾಂಡ್ ಮೂಲಕ ದೊರೆತ ದೇಣಿಗೆಯ ಪ್ರಮಾಣ ಶೇ 88ಕ್ಕೂ ಹೆಚ್ಚು
- ಚುನಾವಣಾ ಬಾಂಡ್‌ಗಳನ್ನು ಚುನಾವಣೆಯ ಸಂದರ್ಭದಲ್ಲಷ್ಟೇ ಹೊರಡಿಸಲಾಗುತ್ತದೆ. 2019-20ರಲ್ಲಿ 5 ಬಾರಿ ಚುನಾವಣಾ ಬಾಂಡ್‌ಗಳನ್ನು ಹೊರಡಿಸಲಾಗಿದೆ. ಎಸ್‌ಬಿಐ ಮಾತ್ರವೇ ಈ ಬಾಂಡ್‌ಗಳನ್ನು ಹೊರಡಿಸುತ್ತದೆ
- ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡುವವರ ವಿವರವನ್ನು ಪಕ್ಷಗಳು ಘೋಷಿಸಬೇಕಿಲ್ಲ
- ಚುನಾವಣಾ ಬಾಂಡ್ ಮೂಲಕ ₹ 1 ರೂ ದೇಣಿಗೆ ನೀಡಿದರೂ, ₹ 1 ಕೋಟಿ ದೇಣಿಗೆ ನೀಡಿದರೂ ಅವರ ಹೆಸರನ್ನು ಬಹಿರಂಗಪಡಿಸಬೇಕಿಲ್ಲ. ಎಸ್‌ಬಿಐ ಈ ಬಾಂಡ್‌ಗಳನ್ನು ನೀಡುವಾಗ ದೇಣಿಗೆ ನೀಡುವವರ ಹೆಸರು, ಪ್ಯಾನ್ ವಿವರ, ಆಧಾರ್ ವಿವರ ಸಂಗ್ರಹಿಸುವುದಿಲ್ಲ. ಹೀಗಾಗಿ ಚುನಾವಣಾ ಬಾಂಡ್ ಖರೀದಿಸಿದವರು ಯಾರು ಎಂಬ ವಿವರ ಎಲ್ಲಿಯೂ ದಾಖಲಾಗುವುದೇ ಇಲ್ಲ
- ಹೀಗಾಗಿ ಚುನಾವಣಾ ಬಾಂಡ್ ಮೂಲಕ ನೀಡಲಾಗುವ ದೇಣಿಗೆಗೆ ಮೂಲವೇ ಇಲ್ಲದಂತಾಗುತ್ತದೆ

ಅನಾಮಧೇಯ ದೇಣಿಗೆ ಬಿಜೆಪಿಗೇ ಹೆಚ್ಚು

ಅನಾಮಧೇಯ ಮೂಲದ ಆದಾಯ ಪಡೆದ ಪಕ್ಷಗಳ ಪಟ್ಟಿಯಲ್ಲಿ ಬಿಜೆಪಿ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಉಳಿದ ಆರು ರಾಜಕೀಯ ಪಕ್ಷಗಳು ಪಡೆದ ಒಟ್ಟು ಅನಾಮಧೇಯ ಮೂಲದ ಆದಾಯಕ್ಕಿಂತ 3.5 ಪಟ್ಟು ಹೆಚ್ಚು ಆದಾಯವನ್ನು ಬಿಜೆಪಿ ಪಡೆದಿದೆ

₹3,377.41 ಕೋಟಿ — ಏಳು ರಾಜಕೀಯ ಪಕ್ಷಗಳು ಪಡೆದ ಆದಾಯದಲ್ಲಿ ಅನಾಮಧೇಯ ಮೂಲದ ದೇಣಿಗೆಯ ಮೊತ್ತ

₹2,642.63 ಕೋಟಿ — ಒಟ್ಟು ಅನಾಮಧೇಯ ಮೂಲದ ದೇಣಿಗೆಯಲ್ಲಿ ಬಿಜೆಪಿ ಪಡೆದ ದೇಣಿಗೆಯ ಮೊತ್ತ

₹734.78 ಕೋಟಿ — ಒಟ್ಟು ಅನಾಮಧೇಯ ಮೂಲದ ದೇಣಿಗೆಯಲ್ಲಿ ಉಳಿದ ಆರು ಪಕ್ಷಗಳು ಪಡೆದ ದೇಣಿಗೆಯ ಮೊತ್ತ (ಕಾಂಗ್ರೆಸ್, ಎನ್‌ಪಿ, ಬಿಎಸ್‌ಪಿ, ಎನ್‌ಸಿಪಿ, ಟಿಎಂಸಿ ಮತ್ತು ಸಿಪಿಐ)

ಚುನಾವಣಾ ಬಾಂಡ್‌ನಿಂದ ಗಳಿಸಿದ ಆದಾಯ (₹ಕೋಟಿಗಳಲ್ಲಿ)

- 2018ರಲ್ಲಿ ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ಪ್ರಕ್ರಿಯೆ ಆರಂಭವಾದ ಬಳಿಕ ಇಲ್ಲಿವರೆಗೆ ಸುಮಾರು ₹6 ಸಾವಿರ ಕೋಟಿ ಸಂಗ್ರಹವಾಗಿದೆ. ಇಲ್ಲಿಯೂ ಬಿಜೆಪಿ ಮುಂಚೂಣಿಯಲ್ಲಿದೆ.
- ಮೂರು ವರ್ಷಗಳ ಅವಧಿಯಲ್ಲಿ ಬಿಜೆಪಿಯೊಂದೇ ₹4 ಸಾವಿರ ಕೋಟಿಗೂ ಹೆಚ್ಚು ಆದಾಯ ಗಳಿಸಿದೆ. 2017-18ರ ಸಾಲಿನಲ್ಲಿ ಸಂಗ್ರಹವಾದ ₹221 ಕೋಟಿ ಆದಾಯದಲ್ಲಿ ಬಿಜೆಪಿ ಪಾಲೇ ₹210 ಕೋಟಿ ಇತ್ತು.
- ಟಿಆರ್‌ಎಸ್, ಬಿಜೆಡಿ ಹಾಗೂ ಜೆಡಿಎಸ್ ಪಕ್ಷಗಳು ಚುನಾವಣಾ ಬಾಂಡ್‌ಗಳಿಂದ ಸಂಗ್ರಹಿಸಿದ ಹಣವು 2018-19ಕ್ಕೆ ಹೋಲಿಸಿದರೆ, 2019-20ರಲ್ಲಿ ಅರ್ಧಕ್ಕಿಂತ ಕಡಿಮೆಯಾಗಿದೆ.



ರಾಜಕೀಯ ಪಕ್ಷಗಳ ಆದಾಯ (2014-15ರಿಂದ 2019-20ರವರೆಗೆ) (₹ಕೋಟಿಗಳಲ್ಲಿ)

- ದೇಣಿಗೆ ಪಡೆದ ರಾಜಕೀಯ ಪಕ್ಷಗಳ ಸಾಲಿನಲ್ಲಿ ಬಿಜೆಪಿ ಎಲ್ಲ ಪಕ್ಷಗಳಿಗಿಂತ ಮುಂದಿದೆ; 2014-15ನೇ ಸಾಲಿನಿಂದ ಆರಂಭಿಸಿ, 2019-2020ನೇ ಸಾಲಿನವರೆಗೂ ಇದು ಮುಂಚೂಣಿ ಸ್ಥಾನ ಕಾಯ್ದುಕೊಂಡಿದೆ. ಕಳೆದ ಐದು ವರ್ಷಗಳ ಹಿಂದಿನ ಆದಾಯಕ್ಕೆ ಹೋಲಿಸಿದರೆ ಈ ಬಾರಿ 6 ಪಟ್ಟು ಆದಾಯ ಹೆಚ್ಚಳವಾಗಿದೆ.
- ಬಿಜೆಪಿ ಮೂರು ವರ್ಷಗಳಲ್ಲಿ ಸಾವಿರ ಕೋಟಿ ರೂಪಾಯಿ ಆದಾಯ ದಾಖಲಿಸಿದೆ. ಆದರೆ ಬೇರೆ ಯಾವುದೇ ಪಕ್ಷಕ್ಕೆ ಇದು ಸಾಧ್ಯವಾಗಿಲ್ಲ. ಕಾಂಗ್ರೆಸ್ ಒಮ್ಮೆ ಮಾತ್ರ ₹918 ಕೋಟಿ ದಾಖಲಿಸಿದೆ.
- 2018-19ರಲ್ಲಿ ಟಿಎಂಸಿ ಆದಾಯವು ಮೂರಂಕಿಗೆ ತಲುಪಿತು. ಈ ಬಾರಿ ₹150 ಕೋಟಿ ಸನಿಹದಲ್ಲಿದೆ. ವಿಶೇಷವೆಂದರೆ, ಮೂರಂಕಿಯಲ್ಲಿದ್ದ ಬಿಎಸ್‌ಪಿ ಆದಾಯವು ಇತ್ತೀಚಿನ ವರ್ಷಗಳಲ್ಲಿ ಎರಡಂಕಿಗೆ ಇಳಿಕೆಯಾಗಿದೆ.



ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್

ಆರ್‌ಟಿಐ ಅರ್ಜಿಗೆ ಕೇಂದ್ರದ ಉತ್ತರ

ವೆಂಟಿಲೇಟರ್ ಬಳಕೆ: ಕೇಂದ್ರದಲ್ಲಿ ಮಾಹಿತಿಯೇ ಇಲ್ಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನ್ಯಾಟ್‌ಕನೆಕ್ಟ್ ಎಂಬ ಎನ್‌ಜಿಒ ಸಲ್ಲಿಸಿದ್ದ ಅರ್ಜಿ
- ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮಾಹಿತಿ
- ಮೇಲ್ಮನವಿ ಸಲ್ಲಿಸಿದಾಗಲೂ ಮಾಹಿತಿ ಅಲಭ್ಯ ಎಂದು ದೃಢಪಡಿಸಲಾಗಿದೆ

ಮುಂಬೈ: ಕೋವಿಡ್-19 ಸಾಂಕ್ರಾಮಿಕಕ್ಕೆ ಸಂಬಂಧಿಸಿದಂತೆ ವೆಂಟಿಲೇಟರ್‌ಗಳಲ್ಲಿ ಸಂಭವಿಸಿದ ಸಾವುಗಳು ಮತ್ತು ವೆಂಟಿಲೇಟರ್ ಬಳಕೆ ಕುರಿತಾದ ಮಾಹಿತಿಗಳು ಕೇಂದ್ರ ಗೃಹ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಗಳ ಬಳಿ ಇಲ್ಲ ಎಂದು ನ್ಯಾಟ್‌ಕನೆಕ್ಟ್ ಫೌಂಡೇಷನ್ ಎಂಬ ಎನ್‌ಜಿಒ ಹೇಳಿದೆ.

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಈ ಎನ್‌ಜಿಒ ಸಲ್ಲಿಸಿದ್ದ ಅರ್ಜಿಗೆ ಉತ್ತರಿಸಿರುವ ಸಚಿವಾಲಯ ತನ್ನ ಬಳಿ ಮಾಹಿತಿ ಇಲ್ಲ ಎಂದು ಹೇಳಿದೆ.

ಕೋವಿಡ್ -19 ಸಾಂಕ್ರಾಮಿಕದ ಎರಡೂ ಅಲೆಗಳ ಸಂದರ್ಭದಲ್ಲಿ ವೆಂಟಿಲೇಟರ್‌ಗಳಲ್ಲಿ ಇರಿಸಿ ಚಿಕಿತ್ಸೆ ನೀಡಿದ ರೋಗಿಗಳ ಕುರಿತು ಎನ್‌ಜಿಒ ಮಾಹಿತಿ ಕೇಳಿತ್ತು. ಇದಕ್ಕೆ ಉತ್ತರಿಸಿದ್ದ ಸಚಿವಾಲಯ, ಕೇಂದ್ರ ಗೃಹ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ ಈ ಕುರಿತ ಮಾಹಿತಿ ಇಲ್ಲ ಎಂದು ಹೇಳಿದೆ.

ಈ ಪ್ರತಿಕ್ರಿಯೆ ಕುರಿತು ಆಶ್ಚರ್ಯ ವ್ಯಕ್ತಪಡಿಸಿರುವ ನೆಟ್‌ಕನೆಕ್ಟ್ ನಿರ್ದೇಶಕ ಬಿ.ಎನ್. ಕುಮಾರ್, 'ಸಚಿವಾಲಯದ ಬಳಿಯೇ ಈ ಕುರಿತು ಮಾಹಿತಿ ಲಭ್ಯ ಇಲ್ಲದಿದ್ದರೆ ಬೇರೆ ಯಾರ ಬಳಿ ಇರುತ್ತದೆ. ಮೊದಲನೆಯದಾಗಿ, ಪ್ರತಿಕ್ರಿಯೆ ನೀಡಲು ಮೂರು ತಿಂಗಳ ಸುದೀರ್ಘ ಸಮಯಾವಕಾಶವನ್ನು ಸಚಿವಾಲಯ ತೆಗೆದುಕೊಂಡಿತು. ಜೊತೆಗೆ, ಪ್ರತಿಕ್ರಿಯೆ ಕೂಡ ತೃಪ್ತಿದಾಯಕವಲ್ಲ' ಎಂದಿದ್ದಾರೆ.

ನಿರಂತರವಾಗಿ ಬಾಧಿಸುತ್ತಿರುವ ಕೋವಿಡ್ ಸಾಂಕ್ರಾಮಿಕದ ಕುರಿತು ಯಾವೆಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಆರೋಗ್ಯ ಸೇವಾ ವಲಯ ತೆಗೆದುಕೊಂಡಿದೆ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವೆಂಟಿಲೇಟರ್ ಚಿಕಿತ್ಸೆ ಎಷ್ಟು ಫಲಪ್ರದವಾಗಿದೆ ಎಂದು ತಿಳಿಯುವುದಕ್ಕಾಗಿ ಈ ಅರ್ಜಿಯನ್ನು ಸಲ್ಲಿಸಲಾಗಿತ್ತು. ವೆಂಟಿಲೇಟರ್ ಮತ್ತು ಆಮ್ಲಜನಕದ ಕೊರತೆಯಿಂದ ಕೋವಿಡ್-19 ರೋಗಿಗಳಲ್ಲಿ ಹಲವರು ಮೃತಪಟ್ಟ ಹಿನ್ನೆಲೆಯಲ್ಲಿ ಈ ಮಾಹಿತಿಗಳನ್ನು ಪಡೆಯುವುದು ಮಹತ್ವ ಪಡೆದಿದೆ ಎಂದು ಅವರು ಹೇಳಿದರು. ಅಲ್ಲದೇ, ಹೈದರಾಬಾದ್‌ನ ಆಸ್ಪತ್ರೆಯೊಂದರಲ್ಲಿ ಗಾಲಿಕುರ್ಚಿಯ ಮೇಲೆಯೇ ಪ್ರಾಣ ಬಿಟ್ಟ ಪತ್ರಕರ್ತನನ್ನು ಅವರು ನೆನಪು ಮಾಡಿಕೊಂಡರು.

ಈಗಲಾದರೂ ಕೇಂದ್ರ ಸಚಿವಾಲಯ ವೆಂಟಿಲೇಟರ್‌ಗಳಲ್ಲಿ ನಡೆದ ಸಾವಿನ ಕುರಿತು ಅಗತ್ಯ ಮಾಹಿತಿ ಕಲೆಹಾಕುತ್ತದೆ ಮತ್ತು ಮೂರನೇ ಅಲೆ ವಿರುದ್ಧ ಹೋರಾಡಲು ಅಗತ್ಯ ತಯಾರಿ ಮಾಡಿಕೊಳ್ಳುತ್ತದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

2020ರ ಏಪ್ರಿಲ್-ಡಿಸೆಂಬರ್‌ನಲ್ಲಿ ಕೋವಿಡ್‌ಗೆ ಒಳಗಾದ ಶೇ 25ರಷ್ಟು ರೋಗಿಗಳು ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಪಡೆದು ಬದುಕುಳಿದಿದ್ದಾರೆ. 2021ರ ಜನವರಿಯಿಂದ ಏಪ್ರಿಲ್‌ನಲ್ಲಿ ಶೇ 28ರಷ್ಟು ರೋಗಿಗಳು ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಪಡೆದು ಬದುಕುಳಿದಿದ್ದಾರೆ ಎಂದು ಭೋಪಾಲ್‌ನ ಏಮ್ಸ್ ತಿಳಿಸಿದೆ. ಮೊದಲನೇ ಅಲೆಯಲ್ಲಿ ಶೇ 42ರಷ್ಟು ರೋಗಿಗಳು ಮತ್ತು ಎರಡನೇ ಅಲೆಯಲ್ಲಿ ಶೇ 21ರಷ್ಟು ರೋಗಿಗಳು ವೆಂಟಿಲೇಟರ್‌ನಲ್ಲಿ ಬದುಕುಳಿದಿದ್ದಾರೆ ಎಂದು ಭುವನೇಶ್ವರದ ಏಮ್ಸ್ ಹೇಳಿದೆ. ನ್ಯಾಟ್‌ಕನೆಕ್ಟ್ ಕೇಳಿದ್ದ ಪ್ರಶ್ನೆಯನ್ನು ಕೇಂದ್ರ ಸಚಿವಾಲಯ ಈ ಆಸ್ಪತ್ರೆಗಳಿಗೆ ವರ್ಗಾಯಿಸಿದ ಬಳಿಕ ಈ ಪ್ರತಿಕ್ರಿಯೆಗಳು ದೊರೆತಿವೆ ಎನ್ನಲಾಗಿದೆ.

ಕೋವಿಡ್ 2ನೇ ಅಲೆಯು ತೀವ್ರವಾಗಿದ್ದ ಸಂದರ್ಭದಲ್ಲಿ ವಿವಿಧ ದೇಶಗಳು ವೆಂಟಿಲೇಟರ್ ಸೇರಿದಂತೆ ವೈದ್ಯಕೀಯ ಉಪಕರಣಗಳನ್ನು ಭಾರತಕ್ಕೆ ಕಳುಹಿಸಿದ್ದವು ಪಿಟಿಐ ಚಿತ್ರ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಇಡೀ ಅಫ್ಗಾನಿಸ್ತಾನವು** ತಾಲಿಬಾನ್ ತೆಕ್ಕೆಯಲ್ಲಿದ್ದರೂ, ಪಂಜ್‌ಶಿರ್ ಪ್ರಾಂತ್ಯ ಮಾತ್ರ ಪ್ರತಿರೋಧ ತೋರುತ್ತಿದೆ. ಅಲ್ಲಿನ ಎಲ್ಲ ವಯೋಮಾನದವರೂ ತಾಲಿಬಾನಿಗಳ ವಿರುದ್ಧ ತೊಡೆತಟ್ಟಿದ್ದಾರೆ. ಸಣ್ಣ ವಯಸ್ಸಿನ ಬಾಲಕಿಯೊಬ್ಬಳು ಬಂದೂಕು ಹಿಡಿದಿರುವ ಚಿತ್ರವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಾಲಕಿಯರೂ ತಾಲಿಬಾನ್‌ಗಳಿಗೆ ಶಸ್ತ್ರಸಜ್ಜಿತ ತಿರುಗೇಟು ನೀಡುತ್ತಿದ್ದಾರೆ ಎಂಬುದಾಗಿ ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ.

✓ **ಈ ಚಿತ್ರವನ್ನು** ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಸದ್ಯದ ತಾಲಿಬಾನ್ ಸಂಘರ್ಷಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ನ್ಯೂಸ್ ಮೀಟರ್ ಸೇರಿದಂತೆ ವಿವಿಧ ವೆಬ್‌ಸೈಟ್‌ಗಳು ಸ್ಪಷ್ಟಪಡಿಸಿವೆ. ಈ ಚಿತ್ರಕ್ಕೆ ಸಂಬಂಧಿಸಿದ ಮೂಲ ವಿಡಿಯೊ ಒಂದು ವರ್ಷ ಹಳೆಯದು. ಈ ವಿಡಿಯೊವನ್ನು 2020ರ ಜನವರಿಯಲ್ಲಿ ಯೂಟ್ಯೂಬ್, ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ವಿಡಿಯೊದ ಹಿನ್ನೆಲೆ ಬಗ್ಗೆ ಅಷ್ಟಾಗಿ ಮಾಹಿತಿ ದೊರಕದಿದ್ದರೂ, ಈಗಿನ ಅಫ್ಗನ್ ಸನ್ನಿವೇಶಕ್ಕೂ, ಇದಕ್ಕೂ ಸಂಬಂಧವಿಲ್ಲ ಎಂದು ಹೇಳಬಹುದು ಎಂದು ಫ್ಯಾಕ್ಟ್‌ಚೆಕ್ ವೆಬ್‌ಸೈಟ್‌ಗಳು ಅಭಿಪ್ರಾಯಪಟ್ಟಿವೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ದಾಸ್ಯದಿಂದ ಬಿಡುಗಡೆ

ಮೊಮ್ಮಕ್ಕಳ ಮಾತಿನಿಂದ ದುಃಖತಪ್ತನಾದ ರಾಜ, 'ಮಕ್ಕಳೇ, ನೀವಿಬ್ಬರೂ ಹೀಗೆ ಮಾತನಾಡಬೇಡಿ. ನನ್ನ ಹೃದಯ ಹೊತ್ತಿಕೊಂಡು ಉರಿಯುತ್ತಿದೆ. ನಾನು ಸಿಂಹಾಸನದ ಮೇಲೆ ಕುಳಿತಿದ್ದರೂ, ಚಿತೆಯ ಮೇಲೆ ಕುಳಿತಂತೆ ಭಾಸವಾಗುತ್ತಿದೆ. ನಿಮ್ಮ ಮಾತುಗಳಿಂದ ನನ್ನ ಸಂತಾಪ ಇನ್ನೂ ಹೆಚ್ಚಾಗುತ್ತಿದೆ. ಅದೇನೇ ಆಗಲಿ, ಈ ಮುದುಕ ಬ್ರಾಹ್ಮಣನಿಂದ ನಿಮ್ಮನ್ನು ಬಿಡಿಸಿಕೊಳ್ಳುತ್ತೇನೆ. ಇನ್ನು ಮೇಲೆ ನೀವು ದಾಸರಾಗಿರುವುದಿಲ್ಲ. ಹೇಳಿ, ನಿಮ್ಮ ತಂದೆ ದಾಸತ್ವದ ಬಿಡುಗಡೆಗೆ ಅದೆಷ್ಟು ಬೆಲೆ ನಿಗದಿ ಮಾಡಿದ್ದ? ನೀವು ಅದನ್ನು ಹೇಳಿದ ತಕ್ಷಣ ಅದನ್ನು ಬ್ರಾಹ್ಮಣನಿಗೆ ಕೊಟ್ಟು ನಿಮ್ಮನ್ನು ದಾಸ್ಯದಿಂದ ಬಿಡುಗಡೆ ಮಾಡುತ್ತೇನೆ' ಎಂದ. ಮಗು ಜಾಲಿಕುಮಾರ ಹೇಳಿದ, 'ಮಹಾರಾಜಾ, ನನ್ನ ಬಿಡುಗಡೆಗೆ ಸಾವಿರ ನಿಕಷಗಳನ್ನು ಕೊಡಬೇಕು'. ತಕ್ಷಣವೇ ರಾಜ ಬ್ರಾಹ್ಮಣನಿಗೆ ಸಾವಿರ ನಿಕಷಗಳನ್ನು ಕೊಡಿಸಿಬಿಟ್ಟು, ಮೊಮ್ಮಗನನ್ನು ತನ್ನ ಕಡೆಗೆ ಕರೆದುಕೊಂಡ. ನಂತರ ಮಗು ಕೃಷ್ಣಾಜಿನಳು, 'ತಾತಾ, ನನ್ನ ಬಿಡುಗಡೆಗೆ ತಂದೆ ಮಾಡಿದ ಬೆಲೆ ತುಂಬ ದೊಡ್ಡದು. ಈ ಬ್ರಾಹ್ಮಣನಿಗೆ ನೂರು ದಾಸರು, ನೂರು ದಾಸಿಯರು, ನೂರು ಆನೆಗಳು, ನೂರು ಕುದುರೆಗಳು ಹಾಗೂ ನೂರು ನಿಕಷಗಳನ್ನು ಕೊಡಬೇಕಾಗುತ್ತದೆ' ಎಂದಳು. ತಕ್ಷಣ ರಾಜ ತನ್ನ ಕೋಶಾಧಿಕಾರಿಗೆ ಮತ್ತು ಕರ್ಮಚಾರಿಗೆ ಆಜ್ಞೆ ಮಾಡಿದ, 'ನೀವು ಈಗಿಂದಲೇ ಈ ಬ್ರಾಹ್ಮಣನಿಗೆ ನೂರು ದಾಸ, ದಾಸಿಯರು, ನೂರು ಆನೆಗಳು, ನೂರು ಕುದುರೆಗಳು ಹಾಗೂ ನೂರು ನಿಕಷಗಳನ್ನು ಒಪ್ಪಿಸಿಬಿಡಿ'. ಅವರು ಅರ್ಧಗಂಟೆಯಲ್ಲಿ ಅವೆಲ್ಲವನ್ನು ತಂದು ಬ್ರಾಹ್ಮಣನಿಗೆ ಕೊಟ್ಟು ಅವನನ್ನು ಕಳುಹಿಸಿಬಿಟ್ಟರು.

ನಂತರ ಮಕ್ಕಳನ್ನು ಅರಮನೆಗೆ ಕರೆತಂದು ಅವರಿಗೆ ಸುವಾಸಿತವಾದ ಎಣ್ಣೆಯಿಂದ ಮೈ ತಿಕ್ಕಿಸಿ, ತಲೆಗೆ ಸ್ನಾನ ಮಾಡಿಸಿ, ಹೊಸ ಬಟ್ಟೆಗಳನ್ನು ಉಡಿಸಿ, ಸಮಸ್ತ ಅಲಂಕಾರಗಳನ್ನು ತೊಡಿಸಿ, ಅವರಿಬ್ಬರನ್ನೂ ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ಸಿಂಹಾಸನದ ಮೇಲೆ ರಾಜ ವಿರಾಜಮಾನನಾದ. ಆಗ ಮಕ್ಕಳಿಗೆ ವೃದ್ಧರಾಜ ಕೇಳಿದ, 'ಮಕ್ಕಳೇ ಆ ದಟ್ಟವಾದ ಕಾಡಿನಲ್ಲಿ ನಿಮ್ಮ ತಂದೆ-ತಾಯಿಯರು ಹೇಗಿದ್ದಾರೆ? ಅವರು ನಿರೋಗಿಗಳಾಗಿದ್ದಾರೆಯೇ? ಅಲ್ಲಿ ಫಲಮೂಲಗಳು ಸಾಕಷ್ಟು ದೊರಕುತ್ತವೆಯೇ? ಸೊಳ್ಳೆ ಮತ್ತು ರಕ್ತಹೀರುವ ಹುಳಗಳು ಹೆಚ್ಚಿವೆಯೇ? ಕಾಡುಪ್ರಾಣಿಗಳಿಂದ ತುಂಬ ಹಿಂಸೆಯಾಗುತ್ತದೆಯೇ?' ಜಾಲಿಕುಮಾರ ಹೇಳಿದ, 'ಹೇ ತಾತಾ, ನನ್ನ ತಂದೆ-ತಾಯಿಗಳಿಬ್ಬರೂ ನಿರೋಗಿಗಳಾಗಿದ್ದಾರೆ. ಅವರು ಕೇವಲ ಫಲಮೂಲಗಳನ್ನು ತಿಂದು ಬದುಕುತ್ತಿದ್ದಾರೆ. ಆಶ್ರಮದ ಸುತ್ತಮುತ್ತ ಫಲಮೂಲಗಳು ಹೇರಳವಾಗಿವೆ. ರಕ್ತಹೀರುವ ಹುಳುಗಳು ಹೆಚ್ಚಾಗಿಲ್ಲ. ಕಾಡುಪ್ರಾಣಿಗಳು ಆಶ್ರಮದ ಒಳಗೆ ಬರುವುದಿಲ್ಲ. ಅವುಗಳಿಂದ ಯಾವ ತೊಂದರೆಯೂ ಆಗಿಲ್ಲ. ನನ್ನ ಅಮ್ಮ ಬೆಳಗಿನಿಂದ ಸಾಯಂಕಾಲದ ವರೆಗೆ ಕಾಡು ಮೇಡುಗಳನ್ನು ಸುತ್ತಿ ಹಣ್ಣು ಹಂಪಲಗಳನ್ನು, ಗೆಡ್ಡೆ-ಗೆಣಸುಗಳನ್ನು ಆರಿಸಿಕೊಂಡು ತರುತ್ತಾಳೆ. ಬಿಸಿಲಿನಲ್ಲಿ ತಿರುಗಾಡಿ ಅಮ್ಮ ಕಪ್ಪಾಗಿ ಬಿಟ್ಟಿದ್ದಾಳೆ. ಅವಳು ಬಿಸಿಲಿಗೆ ಮುರುಟಿಹೋದ ಕಮಲದಂತೆ ಕಾಣುತ್ತಾಳೆ. ಆಕೆ ಏನನ್ನೇ ತಂದರೂ ನಾವೆಲ್ಲ ರಾತ್ರಿ ಒಟ್ಟಿಗೆ ಕುಳಿತು ತಿನ್ನುತ್ತೇವೆ. ಆದ್ದರಿಂದ ಒಟ್ಟಿನಲ್ಲಿ ಅವರು ಸಂತೋಷವಾಗಿದ್ದಾರೆಂದೇ ಹೇಳಬೇಕು'. ❖

ದಿನ ಭವಿಷ್ಯ

ಮಂಗಳವಾರ ಸೆಪ್ಟೆಂಬರ್ 7, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ಅಮಾವಾಸೆ ಗಂ. 0-2 (ಬೆ. 6-16) ಉಪರಿ ಪ್ರತಿಪದೆ ಗಂ. 57-21 (ಬೆ.ಝಾ. 5-12 ಮಂಗಳವಾರ ನಿತ್ಯ ನಕ್ಷತ್ರ ಪೂರ್ವ ಫಲ್ಗುಣಿ ಗಂ. 30-16 (ಸಾ. 6-21) ಸಿದ್ಧ ನಾಮ ಯೋಗ ಗಂ. 1-16 ಉಪರಿ ಸಾಧ್ಯ ನಾಮ ಯೋಗ ಗ. 55-13 ನಾಗ ಕರಣ ಗಂ. 0-2 ಉಪರಿ ಕಿಮಸ್ತುಘ್ನ ಕರಣ ಗಂ. 28-40 ವಿಷ ಗಂ. 48-1 ಅಮೃತ ಗಂ. 13-34 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-12 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 3

ಮೇಷ: ಹೊಸ ಅವಕಾಶಗಳ ಬಾಗಿಲು ತೆರೆಯುವುದರಿಂದ ನಿಯೋಜಿತ ಕೆಲಸಗಳನ್ನು ಆಸಕ್ತಿಯಿಂದ ಒಪ್ಪಿಕೊಳ್ಳುವಿರಿ. ಆತ್ಮವಿಶ್ವಾಸ ಮೂಡಿಬರಲಿದೆ. ಗುತ್ತಿಗೆ ವ್ಯವಹಾರ ನಡೆಸುತ್ತಿರುವವರಿಗೆ ಮತ್ತೊಂದು ಹೊಸ ಕೆಲಸ ಬರಲಿದೆ.

ವೃಷಭ: ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ತಯಾರಕರಿಗೆ ದುರಸ್ತಿ ಮಾಡುವವರಿಗೆ ಹೆಚ್ಚಿನ ಆದಾಯ ತರುವ ದಿನ. ಮನೆಯಲ್ಲಿ ನಡೆಯಬೇಕಾದ ಮಂಗಳ ಕಾರ್ಯಗಳಿಗೆ ತಯಾರಿ.

ಮಿಥುನ: ಕಾರ್ಯಕ್ಷೇತ್ರದಲ್ಲಿನ ಕೆಲಸಗಳನ್ನು ಶೀಘ್ರವಾಗಿ ಮುಗಿಸಲಿದ್ದೀರಿ. ಮನೆಯಲ್ಲಿ ನಡೆಯಬೇಕಾದ ಮದುವೆ ಮುಂಜಿ ಮುಂತಾದ ಮಂಗಳ ಕಾರ್ಯಗಳ ಜವಾಬ್ದಾರಿ ನಿಭಾಯಿಸುವ ಧಾವಂತ ಉಂಟಾಗಲಿದೆ.

ಕರ್ಕಾಟಕ: ಸಹೋದ್ಯೋಗಿಗಳೊಡನೆ ಹೊಂದಾಣಿಕೆಯ ಅಗತ್ಯ ಕಂಡುಬರುವುದು. ಕೆಲಸದ ಒತ್ತಡ ಕಡಿಮೆಯಾಗಿ ನೆಮ್ಮದಿಯನ್ನು ತರಲಿದೆ. ಉದ್ಯೋಗದಲ್ಲಿ ಲಾಭವನ್ನು ಕಾಣಲಿದ್ದೀರಿ.

ಸಿಂಹ: ನಿಮ್ಮ ಕಾರ್ಯತಂತ್ರವನ್ನು ತಡಮಾಡದೇ ಕಾರ್ಯರೂಪಕ್ಕೆ ತರಲಿದ್ದೀರಿ. ಈ ದಿನ ನೀವು ವಿಚಾರ ಮಾಡಿ ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳು ಸರಿಯಾಗಿದ್ದು ಶುಭಫಲಗಳನ್ನೇ ತರಲಿವೆ.

ಕನ್ಯಾ: ಪೀಠೋಪಕರಣಗಳು ಮತ್ತು ಅಲಂಕಾರಿಕ ವಸ್ತುಗಳ ಖರೀದಿ ಮಾಡುವ ಸಾಧ್ಯತೆ. ಆಯುಧಗಳ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳಿತು. ಮಕ್ಕಳ ಆರೋಗ್ಯದ ಕಡೆ ಗಮನ ಅಗತ್ಯ.

ತುಲಾ: ವ್ಯವಹಾರದಲ್ಲಿ ಬದಲಾವಣೆಗಳನ್ನು ನಿರೀಕ್ಷಿಸಲಾಗದು. ಈ ದಿನದ ಕಷ್ಟದ ಕ್ಷಣಗಳು ನಿಮ್ಮ ನಾಳಿನ ಬದುಕಿನ ಸುಖಕ್ಕೆ ನಾಂದಿಯಾಗಲಿದೆ. ತಾಳ್ಮೆಯೇ ಈ ದಿನದ ಶುಭ ಫಲಕ್ಕೆ ಹೇತುವಾಗಲಿದೆ.

ವೃಶ್ಚಿಕ: ಚಿನ್ನಾಭರಣ ಖರೀದಿಸುವ ಸಾಧ್ಯತೆ. ಆದಾಯದಲ್ಲಿ ಹೆಚ್ಚಳ ಉಂಟಾಗಲಿದೆ. ತಂದೆಯ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣುವಿರಿ. ಮಕ್ಕಳ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ.

ಧನು: ನಿಮ್ಮ ಪ್ರತಿಭೆಯ ತೀಕ್ಷ್ಣತೆಯು ಸಂಬಂಧಪಟ್ಟವರ ಗಮನ ಸೆಳೆಯಲಿದೆ. ತಾಂತ್ರಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಹೆಚ್ಚಿನ ಬಡ್ತಿಯನ್ನು ನಿರೀಕ್ಷಿಸಬಹುದು. ಸಮಾಧಾನದ ನಡೆ ಅವಶ್ಯಕ.

ಮಕರ: ಹಿರಿಯರು ನಿಮ್ಮ ನಿರ್ಧಾರಕ್ಕೆ ನಿಮ್ಮೊಂದಿಗಿದ್ದಾರೆಂಬ ಭರವಸೆಯಿಂದ ಕೆಲಸ ನಿರ್ವಹಿಸಲಿದ್ದೀರಿ. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಾಲೋಚನೆ ಮಾಡುವುದು ಉತ್ತಮ.

ಕುಂಭ: ಮಹಿಳೆಯರಿಗೆ ವಿಶೇಷ ದಿನವಾಗಿ ಕಂಡುಬರುವುದು. ಹಣಕಾಸಿನ ವಿಷಯಗಳಲ್ಲಿ ತೊಂದರೆ ಉಂಟಾಗದು. ಷೇರು ಮಾರುಕಟ್ಟೆಯಲ್ಲಿ ವಿಚಾರ ವಿಮರ್ಶೆ ಮಾಡಿ ಹಣ ತೊಡಗಿಸಿಕೊಳ್ಳುವುದು ಉತ್ತಮ.

ಮೀನ: ಸ್ನೇಹ ಸಂಬಂಧಗಳು ಗಟ್ಟಿಯಾಗಿ ಹೊಸ ಚೈತನ್ಯ ಮೂಡುವುದರಿಂದ ಸಹಾಯ ಸಹಕಾರಗಳು ನಿರೀಕ್ಷೆಗೂ ಮೀರಿ ದೊರಕಲಿದೆ. ಪ್ರಿಯರಿಂದ ಉಡುಗೊರೆ ಲಭ್ಯ. ಕಲಾವಿದರಿಗೆ ಆದಾಯದಲ್ಲಿ ಹೆಚ್ಚಳ.

ನಿಮ್ಮ ಜನ್ಮದಿನ 7-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಮಹಿಳೆಯರಿಗೆ ಗೌರವ ಪ್ರತಿಷ್ಠೆಗಳು ಹೆಚ್ಚಲಿವೆ. ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿದ್ವಾಂಸರಿಗೆ ಮನ್ನಣೆ, ಗೌರವಗಳು ಹೆಚ್ಚುವುದು. ಆತ್ಮೀಯರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ನಿಮ್ಮದಾಗಲಿದೆ.

ಪದಬಂಧ 4712
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಂಬಲವೇ ಚಟವಾದೀತು! (3)
4. ಧಣಿ ನೋಡಲು ನೆರೆದ ಸಮೂಹ (3)
6. ಇದೊಂದು ಚರ್ಮವಾದ್ಯ (4)
8. ಭಜನೆ ಮಾಡುತ್ತಲೇ ಬೇರೆಯಾಗುವಿಕೆ! (4)
10. ನಿಜವಾಗಿಯೂ ಇದು ರಾತ್ರಿ ! (3)
13. ಮೋಕ್ಷಕ್ಕೊಂದು ಪರ್ಯಾಯ ಪದ (3)
15. ಇದಿನ್ನೂ ಎಳೆ ಮಗು (4)
19. ಕೊಬ್ಬಿದ ಆನೆ ಇಲ್ಲಿದೆ (4)
21. ಬಣ್ಣ ಹಚ್ಚಿ ಮಾಡಿರುವ ವಿಸ್ತಾರ ನಿರೂಪಣೆ (3)
22. ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ
1. ಕೂದಲನ್ನು ಬಾಚುವ ಸಾಧನ (3)
2. ಸರ ತಂದದ್ದಕ್ಕೇ ಈ ಸಂಭ್ರಮವೇ! (4)
3. ನಾಗರೀಕರು ಹಿಡಿದಿರುವ ಗುಂಜು (2)
5. ಅನುಜನ ಬಳಿಯಿರುವ ರಾಕ್ಷಸ (3)
7. ಅಂಗವಿಕಲನು ಪ್ರವೇಶಿಸಿರುವ ಗುಹೆ (2)
9. ಬೆಳಕಿನೆದುರು ಬೀಳುವ ಪ್ರತಿಕೃತಿ (3)
11. ವಾಸಸ್ಥಾನ ಇಲ್ಲಿದೆ (3)
12. ಸಿದ್ಧತೆ ಅಥವಾ ಸಜ್ಜು (3)
14. ಎಳ್ಳು ನೀರು ಬಿಡುವಿಕೆ (4)
16. ಪರ್ಣ ಶಾಲೆಯಲ್ಲಿ ಕಾಣಿಸಿದ ಗರುಡ (3)
17. ಸುಗಮವಾಗಿ ಕಿತ್ತಿರುವ ಹೂ (2)
18. ಇದೊಂದು ಬಗೆಯ ಮೆಟ್ಟು (3)
20. ಪ್ರದಕ್ಷಿಣೆ ಹಾಕುತ್ತಿರುವವ ಬಲು ಸಮರ್ಥ! (2)

4711ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಗಲುಗನಸು 4.ಖಲಿಂದರ 5.ಗರೀಬ 7.ಪ್ರತೀಕ 9.ಲಹರಿ 12.ಕಮರಿ 13. ಪರಸತಿ 15.ಲಲಾಟಲಿಖಿತ

ಮೇಲಿಂದ ಕೆಳಕ್ಕೆ: 1.ಹದ್ದುಗಣ್ಣು 2.ಸುಖ 3.ಎರವು 6.ಬರಗಾಲ 7.ಪ್ರಹರಿ 8.ಕರಣಿಕ 10.ಪರಿಚಿತ 11.ತಪಸ್ಸು 14.ತಿಲ

ಸುಡೊಕು 5098

					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5097 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಬೀದರ್‌ನಲ್ಲಿ ಗಗನಯಾತ್ರಿಗಳಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಚೊಚ್ಚಲ ಗಗನಯಾನಕ್ಕೆ ಆಯ್ಕೆಯಾಗಿರುವ ನಾಲ್ವರು ಗಗನಯಾತ್ರಿಗಳಿಗೆ ಬೀದರ್‌ನಲ್ಲಿರುವ ಭಾರತೀಯ ವಾಯುಪಡೆಯ ವಾಯು ನೆಲೆಯಲ್ಲಿ ಪ್ರಾಥಮಿಕ ಹಂತದ ತರಬೇತಿ ಆರಂಭಗೊಳ್ಳಲಿದೆ.

ಈ ವಾರವೇ ಯುದ್ಧ ವಿಮಾನಗಳಲ್ಲಿ ಆರಂಭಿಕ ತರಬೇತಿ ಪೂರ್ಣಗೊಳ್ಳಲಿದೆ ಎಂದು ಮೂಲಗಳು ಹೇಳಿವೆ.

ಕೋವಿಡ್ ಕಾರಣದಿಂದಾಗಿ ಗಗನ ಯಾನ ಯೋಜನೆಯನ್ನು ಮುಂದೂಡಲಾಗಿತ್ತು. ಇದರಿಂದಾಗಿ ತರಬೇತಿಯೂ ತಡವಾಗಿತ್ತು. ತರಬೇತಿ ಆರಂಭವಾಗುತ್ತಿರುವ ವಿಚಾರವನ್ನು ಇಸ್ರೊ ಅಧ್ಯಕ್ಷ ಕೆ.ಶಿವನ್ ಅವರು ಖಚಿತಪಡಿಸಿದ್ದಾರೆ.

ನಾಲ್ವರು ಪೈಲಟ್‌ಗಳು ಕಳೆದ ವಾರವೇ ಬೀದರ್‌ಗೆ ಬಂದು ಬೀಡು ಬಿಟ್ಟಿದ್ದಾರೆ. ಈ ವಾರ ತರಬೇತಿ ಮುಗಿದ ತಕ್ಷಣವೇ ಅವರಿಗೆ ಗಗನಯಾನಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ತರಗತಿಗಳೂ ಆರಂಭವಾಗುತ್ತದೆ. ಉನ್ನತ ಮಟ್ಟದ ತರಬೇತಿಗೆ ಇವರನ್ನು ರಷ್ಯಾಗೆ ಕಳುಹಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಮಾನವರನ್ನು ಬಾಹ್ಯಾಕಾಶಕ್ಕೆ ಕಳಿಸುವುದಕ್ಕೆ ಮುನ್ನ ಎರಡು ಮಾನವ ರಹಿತ ರಾಕೆಟ್‌ಗಳನ್ನು ಪ್ರಾಯೋಗಿಕವಾಗಿ ಉಡಾವಣೆ ಮಾಡಿ ಅದರ ಸಾಮರ್ಥ್ಯವನ್ನು ಪರೀಕ್ಷೆ ಮಾಡಿ, ನೌಕೆಯ ಕ್ಷಮತೆಯನ್ನು ನಿರ್ಧರಿಸಬೇಕಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

SAD DEMISE

With profound grief we regret to announce the sad demise of
Smt. Nanjamma Ramanna
W/o. Late Sri Ramanna A. (Pallavi Constructions)
On 6th September, 2021

Mother-in-law of
Dr. Ramchandra C.
Director of Kidwai Memorial Institute of Oncology

Mother of
Dr. Pallavi Ramachandra
Gynaecology HOD
Kidwai Memorial Institute of Oncology

Deeply mourned by:
Dr Thejavanthi V Narayan
And Nirman Group of Institutions

LOOKING FOR JOB OPPORTUNITY
Refer Classifieds on Wednesday

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾಕೀತು

‘ಮಾಫಿಯಾ ಜತೆ ನಂಟು ಕೂಡದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗಳ್ಳರು, ಮರಳು ಕಳ್ಳಸಾಗಣೆದಾರರು ಸೇರಿ ಯಾವುದೇ ಮಾಫಿಯಾಗಳ ಜತೆ ಪೊಲೀಸರು ನಂಟು ಇರಿಸಿಕೊಳ್ಳುವುದನ್ನು ತಡೆಯುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಸೋಮವಾರ ನಡೆದ ಐಪಿಎಸ್ ಅಧಿಕಾರಿಗಳ ಸಮ್ಮೇಳನ ಉದ್ಘಾಟಿಸಿ, ಪೊಲೀಸ್ ಇಲಾಖೆಯ ಕಾರ್ಯವೈಖರಿ ಕುರಿತು ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಾವುದೇ ರೀತಿಯ ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರು ಮತ್ತು ಅವರ ಏಜೆಂಟರ ಜತೆ ಪೊಲೀಸರ ನಂಟು ಇರಕೂಡದು ಎಂದು ತಾಕೀತು ಮಾಡಿದ್ದೇನೆ’ ಎಂದರು.

ಬೆಂಗಳೂರು ನಗರ ಮತ್ತು ಸುತ್ತ ಮುತ್ತ ಭೂಗಳ್ಳರ ಮಾಫಿಯಾ ಜೋರಾಗಿ ಕೆಲಸ ಮಾಡುತ್ತಿದೆ. ಭೂಕಬಳಿಕೆ ಮಾಡುವವರ ಜತೆ ಕೈ ಜೋಡಿಸದಂತೆ ಪೊಲೀಸರಿಗೆ ಸೂಚಿಸಲಾಗಿದೆ. ರಾಜ್ಯದ ವಿವಿಧೆಡೆ ಮರಳು ಕಳ್ಳಸಾಗಣೆಯೂ ನಡೆಯುತ್ತಿರುವ ಆರೋಪವಿದೆ.

ಬೆಂಗಳೂರಿನ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸೋಮವಾರ ನಡೆದ ಐಪಿಎಸ್ ಅಧಿಕಾರಿಗಳ ಸಮ್ಮೇಳನ ಉದ್ಘಾಟಿಸಲು ಬಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಐಪಿಎಸ್ ಅಧಿಕಾರಿಗಳು ಸಲ್ಯೂಟ್‌ನೊಂದಿಗೆ ಸ್ವಾಗತಿಸಿದರು. ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಗೃಹ ಸಚಿವ ಆರಗ ಜ್ಞಾನೇಂದ್ರ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡ.ರಜನೀಶ್ ಗೋಯಲ್ ಜತೆಗಿದ್ದರು

ಮರಳು ಕಳ್ಳಸಾಗಣೆ ಮಾಡುವವರಿಗೆ ಪೊಲೀಸರು ಸಹಕಾರ ನೀಡಬಾರದು ಎಂಬ ನಿರ್ದೇಶನವನ್ನೂ ನೀಡಲಾಗಿದೆ ಎಂದು ಹೇಳಿದರು.

ಅಪರಾಧ ಪ್ರಕರಣಗಳ ತನಿಖೆಯಲ್ಲಿ ಯಾವುದೇ ರೀತಿಯಲ್ಲೂ ರಾಜಿ ಆಗ ಬಾರದು. ಸೈಬರ್ ಅಪರಾಧ, ಡ್ರಗ್ಸ್ ಮಾಫಿಯಾ ನಿಯಂತ್ರಣಕ್ಕೆ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ನಿಷ್ಪಕ್ಷಪಾತ ಮತ್ತು ನಿಷ್ಠುರವಾದ ತನಿಖೆಗೆ ಆದ್ಯತೆ ನೀಡುವಂತೆ ಸೂಚಿಸಲಾಗಿದೆ ಎಂದರು.

ಪ್ರತ್ಯೇಕ ಡ್ಯಾಶ್ ಬೋರ್ಡ್: ಇಲಾಖೆಯ ಎಲ್ಲ ಹಂತಗಳಲ್ಲೂ ವರದಿ ಮಾಡುವ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಿದೆ. ನಿತ್ಯ ದಾಖಲಾಗುವ ಪ್ರಕರಣಗಳ ಕುರಿತು ಕಿರಿಯ ಅಧಿಕಾರಿಗಳಿಂದ ಹಿರಿಯ ಅಧಿಕಾರಿಗಳಿಗೆ ವರದಿ ನೀಡುವುದು ಮತ್ತು ಹಿರಿಯ ಅಧಿಕಾರಿಗಳಿಂದ ಸೂಚನೆ, ಆದೇಶ ನೀಡುವ ಪ್ರಕ್ರಿಯೆಯಲ್ಲಿ ಕೆಲವು ಬದಲಾವಣೆಗಳನ್ನು ತರಲು ನಿರ್ದೇಶನ ನೀಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಪೊಲೀಸ್ ಮಹಾನಿರ್ದೇಶಕರು, ಎಲ್ಲ ನಗರ ಪೊಲೀಸ್ ಕಮಿಷನರ್‌ಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರತ್ಯೇಕವಾದ ಡ್ಯಾಶ್ ಬೋರ್ಡ್ ಹೊಂದಬೇಕು. ಅಪರಾಧ ಪ್ರಕರಣಗಳ ಪಟ್ಟಿ, ಬಂಧನ ಮತ್ತಿತರ ಮಾಹಿತಿಯನ್ನು ನೇರವಾಗಿ ಡ್ಯಾಶ್ ಬೋರ್ಡ್‌ನಿಂದಲೇ ಪಡೆದುಕೊಂಡು ಪರಿಶೀಲಿಸಲು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

ಜನಸ್ನೇಹಿ ವರ್ತನೆ: ಪೊಲೀಸರು ಜನಸ್ನೇಹಿಯಾಗಿ ವರ್ತಿಸಬೇಕು. ಇಲಾಖೆಯ ಹಿರಿಯ ಅಧಿಕಾರಿಗಳು ಕೂಡ ಕಿರಿಯ ಸಿಬ್ಬಂದಿ ಜೊತೆ ಸೌಜನ್ಯದಿಂದ ವರ್ತಿಸಬೇಕು. ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಪೂರಕವಾಗಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ವರ್ತನೆಯಲ್ಲಿ ಬದಲಾವಣೆ ತರುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ರಾಜ್ಯ ಪೊಲೀಸ್ ಇಲಾಖೆ ಕುರಿತ ಕಾಫಿ ಟೇಬಲ್ ಪುಸ್ತಕ ಮತ್ತು ಸೇವೆಯಲ್ಲಿದ್ದಾಗ ಮೃತರಾದ ಪೊಲೀಸ್ ಸಿಬ್ಬಂದಿಗೆ ನೀಡಿರುವ ಪರಿಹಾರದ ವಿವರದ ಕಿರು ಪುಸ್ತಕ ಬಿಡುಗಡೆ ಮಾಡಲಾಯಿತು. ಅಪರಾಧ ಹಿನ್ನೆಲೆಯ ವ್ಯಕ್ತಿಗಳ ಮುಖ ಚಹರೆ ಗುರುತಿಸುವ ‘ಫೇಸ್ ರೆಕಗ್ನಿಷನ್’ ವ್ಯವಸ್ಥೆಗೆ ಮುಖ್ಯಮಂತ್ರಿ ಚಾಲನೆ ನೀಡಿದರು.

ಪ್ರತ್ಯೇಕ ತಾಂತ್ರಿಕ ವಿಭಾಗ

ಆರ್ಥಿಕ ಮತ್ತು ಸೈಬರ್ ಅಪರಾಧ ನಿಯಂತ್ರಣಕ್ಕೆ ಪ್ರತ್ಯೇಕ ತಾಂತ್ರಿಕ ವಿಭಾಗ ರಚಿಸುವಂತೆ ಗೃಹ ಇಲಾಖೆಗೆ ಸೂಚನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಆಂತರಿಕ ಭದ್ರತಾ ವಿಭಾಗದ ಬಲವರ್ಧನೆ, ಕರಾವಳಿ ಕಾವಲು ಪಡೆಗೆ ಹೈಸ್ಪೀಡ್ ದೋಣಿಗಳ ಖರೀದಿ, ಕಿರಿಯ ಅಧಿಕಾರಿಗಳಿಗೆ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ತರಬೇತಿ ನೀಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಆರು ವಿಧಿ ವಿಜ್ಞಾನ ಪ್ರಯೋಗಾಲಯ ಆರಂಭಿಸಲಾಗುತ್ತಿದೆ ಎಂದರು.

‘ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲೇ ಎದುರಿಸಲಿದ್ದು, ಇದಕ್ಕೆ ಬಿ.ಎಸ್.ಯಡಿಯೂರಪ್ಪ ಅವರ ಮಾರ್ಗದರ್ಶನ ನೀಡಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದ್ದಾರೆ.

ಬೊಮ್ಮಾಯಿ ನೇತೃತ್ವದಲ್ಲೇ ವಿಧಾನ ಸಭೆ ಚುನಾವಣೆ ಎದುರಿಸಲಾಗುವುದು ಎಂದು ಇತ್ತೀಚೆಗೆ ದಾವಣಗೆರೆಯಲ್ಲಿ ಗೃಹ ಸಚಿವ ಅಮಿತ್ ಶಾ ಹೇಳಿದ್ದರು. ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಆಕ್ಷೇಪ ವ್ಯಕ್ತಪಡಿಸಿದ್ದರು. ಶಾಸಕ ಜಗದೀಶ ಶೆಟ್ಟರ್ ಅವರು ಯಡಿಯೂರಪ್ಪ ಜತೆ ಮಾತುಕತೆ ನಡೆಸಿದ್ದರು.

ನವದೆಹಲಿಗೆ ಸೋಮವಾರ ಭೇಟಿ ನೀಡಿದ್ದ ಕೆ.ಎಸ್. ಈಶ್ವರಪ್ಪ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಿದರು.

ಬಿಎಸ್‌ವೈ ಜತೆ ಪ್ರವಾಸ: ಗಣೇಶ ಹಬ್ಬದ ಬಳಿಕ ಶಾಸಕ ಬಿ.ಎಸ್. ಯಡಿಯೂರಪ್ಪ ನಡೆಸಲಿರುವ ರಾಜ್ಯ ಪ್ರವಾಸದಲ್ಲಿ ತಾವೂ ಭಾಗವಹಿಸುವುದಾಗಿ ನಳಿನ್ ಕಟೀಲ್ ತಿಳಿಸಿದರು. ರಾಜ್ಯ ಪ್ರವಾಸದ ಕುರಿತು ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು ಎಂದರು.

ವರಿಷ್ಠರು ಪ್ರವಾಸಕ್ಕೆ ಅನುಮತಿ ನೀಡಿಲ್ಲ. ಆದ್ದರಿಂದ ಪ್ರವಾಸ ಮಾಡುವ ಸಾಧ್ಯತೆ ಕಡಿಮೆ ಎಂದು ಹೇಳಲಾಗಿತ್ತು. ನಳಿನ್ ಅವರು ಪ್ರವಾಸದ ಕುರಿತಾದ ಗೊಂದಲ ನಿವಾರಿಸಿದ್ದಾರೆ.

ಶಾ ಹೇಳಿಕೆಗೆ ಬೆಂಬಲ : ಈಶ್ವರಪ್ಪ

ಬೆಂಗಳೂರು: ‘ಬೊಮ್ಮಾಯಿ ನಾಯಕತ್ವದಲ್ಲೇ ಮುಂದಿನ ವಿಧಾನಸಭೆ ಚುನಾವಣೆ ಎದುರಿಸಲಾಗುವುದು ಎಂಬ ನಮ್ಮ ರಾಷ್ಟ್ರೀಯ ನಾಯಕ ಅಮಿತ್ ಶಾ ಹೇಳಿಕೆಗೆ ನನ್ನ ಆಕ್ಷೇಪ ಇಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಪ್ರತಿಪಾದಿಸಿದರು.

ನವದೆಹಲಿಯಲ್ಲಿ ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಹಿಂದೆಲ್ಲ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಹುಮತ ಪಡೆಯಲು ಬಿಜೆಪಿ ವಿಫಲವಾಗಿತ್ತು. ಆ ಕಾರಣದಿಂದಾಗಿ, ಮುಂದಿನ ಚುನಾವಣೆಯಲ್ಲಿ ಸಾಮೂಹಿಕ ನಾಯಕತ್ವದಲ್ಲೇ ಹೋದರೆ ಗೆಲುವು ಸಾಧ್ಯ ಎಂದು ಸಲಹೆ ನೀಡಿದ್ದೆ. ಅದರರ್ಥ ಏನೆಂದರೆ, ಒಬ್ಬನೇ ವ್ಯಕ್ತಿ ಚುನಾವಣೆ ಕಾರ್ಯತಂತ್ರ ರೂಪಿಸುವ ಬದಲು ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಹಾಗೂ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಒಟ್ಟಾಗಿ ಕುಳಿತು ತಂತ್ರಗಾರಿಕೆ ಹೆಣೆದರೆ ಗೆಲುವು ಸಲೀಸು ಎಂಬುದಷ್ಟೆ. ಇದು ಪಕ್ಷದ ಕಾರ್ಯಕರ್ತರ ಮಧ್ಯೆ ಇರುವ ಸಾಮಾನ್ಯ ಅಭಿಪ್ರಾಯವೂ ಆಗಿದ್ದರಿಂದ ಹೀಗೆ ಸಲಹೆ ನೀಡಿದ್ದೆ’ ಎಂದು ಸಮಜಾಯಿಷಿ ನೀಡಿದರು.

ಬಿಜೆಪಿಗೆ ಅಲ್ಪತೃಪ್ತಿ, ಕಾಂಗ್ರೆಸ್‌ಗೆ ಹಿನ್ನಡೆ

ಒಂದನೇ ಪುಟದಿಂದ

ಬೆಳಗಾವಿಯಲ್ಲಿ ಬಿಜೆಪಿ ಆಕ್ರಮಣಕಾರಿಯಾಗಿ ಪ್ರಚಾರ ಮಾಡಿತ್ತು. ಆರ್‌ಎಸ್‌ಎಸ್ ಕೂಡಾ ಬಿಜೆಪಿಯನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಜಾರಕಿಹೊಳಿ ಸಹೋದರರ ನೆರವು ಇಲ್ಲದೇ ಚುನಾವಣೆ ಗೆಲ್ಲುವುದು ಕಷ್ಟ ಎಂಬ ಮಾತು ಹುಸಿಯಾಗಿದೆ.

ಬಿಜೆಪಿಯ ಇತರ ನಾಯಕರು ನಿರ್ಣಾಯಕ ಪಾತ್ರವಹಿಸಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯ ಆಟಾಟೋಪಕ್ಕೆ ಮತದಾರ ತಕ್ಕ ಉತ್ತರ ನೀಡಿದ್ದಾನೆ.

ಶಿವಸೇನೆಯ ಆಟ ಈ ಚುನಾವಣೆಯಲ್ಲಿ ನಡೆದಿಲ್ಲ. ಕಾಂಗ್ರೆಸ್‌ನ ಸ್ಥಳೀಯ ಮಟ್ಟದ ನಾಯಕರ ಒಳಜಗಳ ಆ ಪಕ್ಷಕ್ಕೆ ತೀವ್ರ ಹಿನ್ನಡೆ ತಂದಿದೆ.

> **ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದ ಸರ್ಕಾರದ ಜನೋಪಯೋಗಿ ಕಾರ್ಯಗಳಿಗೆ ಜನಮನ್ನಣೆ ಸಿಕ್ಕಿದೆ. ಮೂರೂ ಪಾಲಿಕೆಗಳಲ್ಲಿ ಬಿಜೆಪಿಯೇ ಅಧಿಕಾರ ಹಿಡಿಯಲಿದೆ**
> **ನಳಿನ್ ಕುಮಾರ್ ಕಟೀಲ್,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> **ಹಿಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮೆಲುಗೈ ಸಾಧಿಸಿತ್ತು. ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವನ್ನು ಮುಂದಿನ ಚುನಾವಣೆಯ ದಿಕ್ಸೂಚಿ ಎನ್ನಲಾಗದು**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು ‘Deccan Herald--Prajavani Relief Trust’ ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56 ಸಂಪರ್ಕಿಸಿ: 9606385001, 9606523337

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

General

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ.ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಪೊಲೀಸ್ ಸಿಬ್ಬಂದಿ ಕೊರತೆ ನೆಪ; ಮಕ್ಕಳ ಕಲ್ಯಾಣ ಸಮಿತಿ ನಿರ್ಲಕ್ಷ್ಯ

ಸಂತ್ರಸ್ತ ಬಾಲಕಿಯನ್ನು ಠಾಣೆಗೆ ಕಳಿಸಿದರು!

• ಕೆ.ನರಸಿಂಹಮೂರ್ತಿ

ಮೈಸೂರು: ಗರ್ಭ ಧರಿಸಿದ್ದ 14 ವರ್ಷ ವಯಸ್ಸಿನ ಮಗಳೊಂದಿಗೆ ದೂರು ನೀಡಲು ಬಂದಿದ್ದ ಪೋಷಕರನ್ನು ಮಕ್ಕಳ ಕಲ್ಯಾಣ ಸಮಿತಿಯು ಪೊಲೀಸ್ ಠಾಣೆಗೆ ಕಳಿಸಿ ದೂರು ದಾಖಲಿಸುವಂತೆ ಸೂಚಿಸಿದೆ. ಸಂತ್ರಸ್ತೆ ಬಾಲಕಿಯನ್ನು ಠಾಣೆಗೆ ಕಳಿಸುವಂತಿಲ್ಲ ಎಂಬ ಪೋಕ್ಸೊ ಕಾಯ್ದೆಯ ನಿಯಮವನ್ನು ಗಾಳಿಗೆ ತೂರಿದೆ.

ಉತ್ತರ ಕರ್ನಾಟಕದ ಜಿಲ್ಲೆಯೊಂದರಲ್ಲಿ ಸೋಮವಾರ ಈ ಘಟನೆ ನಡೆದಿದ್ದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಬಳಿಕ ಸಮಿತಿಯು ಬಾಲಕಿಯನ್ನು ಠಾಣೆಯಿಂದ ವಾಪಸು ಕರೆಸಿಕೊಂಡಿದೆ.

ಬಾಲಕಿ ಸದ್ಯ ಆರು ತಿಂಗಳ ಗರ್ಭಿಣಿ. ಆಕೆಯನ್ನು ತಾಯಿ ಹಾಗೂ ಮೈಸೂರಿನಲ್ಲಿದ್ದ ಆಕೆಯ ಸಂಬಂಧಿಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಕರೆ ತಂದಿದ್ದರು. ನಂತರ ಆಪ್ತಸಮಾಲೋಚನೆ ನಡೆಸಿದ ಸಮಿತಿ ಸದಸ್ಯರು, ಪತ್ರವೊಂದನ್ನು ಕೊಟ್ಟು, ಗ್ರಾಮಾಂತರ ಠಾಣೆಗೆ ಹೋಗಿ ದೂರು ದಾಖಲಿಸಿ, ಎಫ್‌ಐಆರ್ ಪ್ರತಿ ತರಲು ಸೂಚಿಸಿದ್ದರು. ಅವರ ಸೂಚನೆ ಮೇರೆಗೆ ಠಾಣೆಗೆ ತೆರಳಿದಾಗ ಪೊಲೀಸರು, ತಾಯಿಯೊಂದಿಗೆ ತೆರಳಿದ್ದ ಸಂಬಂಧಿಕರ ಮಾಹಿತಿಯನ್ನೂ ಸಂಗ್ರಹಿಸಲು ಆರಂಭಿಸಿದಾಗ ಅವರು ಆಕ್ಷೇಪಿಸಿ, ನಗರದ ಒಡನಾಡಿ ಸಂಸ್ಥೆಯ ನಿರ್ದೇಶಕ ಕೆ.ವಿ.ಸ್ಟ್ಯಾನ್ಲಿ ಅವರ ಗಮನಕ್ಕೆ ತಂದರು. ಅವರು ಕೂಡಲೇ ಆಯೋಗದ ಸದಸ್ಯ ಎಂ.ಎಲ್. ಪರಶುರಾಮ್ ಅವರಿಗೆ ಮಾಹಿತಿ ನೀಡಿದ್ದರು.

ಘಟನೆ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಸಮಿತಿ ಸದಸ್ಯೆ ಅನ್ನಪೂರ್ಣ ಗಾಣಿಗೇರ, ‘ಶ್ರಾವಣ ಮಾಸದ ಕೊನೆಯ ದಿನ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆಯುವುದರಿಂದ ಪೊಲೀಸ್ ಸಿಬ್ಬಂದಿ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದರು. ಪೋಷಕರೊಂದಿಗೆ ಸಂತ್ರಸ್ತೆಯನ್ನು ಠಾಣೆಗೆ ಕಳಿಸಿಕೊಡಿ ಎಂದು ಪೊಲೀಸರು ತಿಳಿಸಿದ್ದರಿಂದ ಅಲ್ಲಿಗೆ ಕಳಿಸಲಾಯಿತು. ಪೋಷಕರೊಂದಿಗೆ ಬಾಲಕಿಯನ್ನು ಠಾಣೆಗೆ ಕಳಿಸಲು ಅವಕಾಶವಿದೆ. ಸಮಿತಿಯಲ್ಲೂ ಸಿಬ್ಬಂದಿ ಲಭ್ಯರಿರಲಿಲ್ಲ’ ಎಂದು ಹೇಳಿದರು.

‘ಬೆಳಿಗ್ಗೆ 10.30ರ ವೇಳೆಗೆ ನಾವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ದೂರು ನೀಡಲು ಹೋಗಿದ್ದೆವು. ನಮ್ಮೊಂದಿಗೆ ಮಾತನಾಡಿದ ಅಧಿಕಾರಿಯು ಪತ್ರವೊಂದನ್ನು ಕೊಟ್ಟು ಠಾಣೆಗೆ ಹೋಗಿ ನೀಡುವಂತೆ ತಿಳಿಸಿದರು. ಠಾಣೆಯಲ್ಲಿರುವಾಗ ಕರೆ ಮಾಡಿದ ಅವರು ಕೂಡಲೇ ಬಾಲಕಿಯನ್ನು ವಾಪಸು ಕಳಿಸುವಂತೆ ಹೇಳಿದರು. ಮತ್ತೊಬ್ಬ ಸಂಬಂಧಿಯೊಂದಿಗೆ ಆಕೆಯನ್ನು ಆಟೊರಿಕ್ಷಾದಲ್ಲಿ ವಾಪಸು ಕಳಿಸಿದೆ’ ಎಂದು ಬಾಲಕಿಯ ಸಂಬಂಧಿ ಮಾಹಿತಿ ನೀಡಿದರು.

> **ಸಮಿತಿ ಸದಸ್ಯರು ತಾವು ಇದ್ದ ಸ್ಥಳಕ್ಕೇ ಪೊಲೀಸರನ್ನು ಕರೆಸಿಕೊಂಡು ಬಾಲಕಿಯಿಂದ ದೂರು, ಹೇಳಿಕೆ ಕೊಡಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ**
> **ಎಂ.ಎಲ್.ಪರಶುರಾಂ,** ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

> **ಸಂತ್ರಸ್ತೆ ಬಾಲಕಿಯೊಂದಿಗೆ ತೆರಳಿದ ಸಂಬಂಧಿಕರ ಮಾಹಿತಿ ಸಂಗ್ರಹಕ್ಕೆ ಪೊಲೀಸರು ಅನಗತ್ಯ ಒತ್ತು ನೀಡಿ ಆತಂಕ ಸೃಷ್ಟಿಸಿದ್ದಾರೆ**
> **ಕೆ.ವಿ.ಸ್ಟ್ಯಾನ್ಲಿ,** ನಿರ್ದೇಶಕ, ಒಡನಾಡಿ ಸಂಸ್ಥೆ, ಮೈಸೂರು

ಪ್ರಜಾವಾಣಿ ವಿಶೇಷ

ವಿದ್ಯಾರ್ಥಿಗಳ ಅನಿಸಿಕೆ

ಅಕ್ಷರ ದಾಸೋಹ

ಎಸ್ಸೆಸ್ಸೆಲ್ಸಿಯಲ್ಲಿ ಶೇ 90ರಷ್ಟು ಅಂಕ ಗಳಿಸಿದ ನನಗೆ ಶಿಕ್ಷಣ ಮುಂದುವರಿಸುವುದೇ ದೊಡ್ಡ ಚಿಂತೆಯಾಗಿತ್ತು. ಮನೆಯ ಆರ್ಥಿಕ ಪರಿಸ್ಥಿತಿ ನೆನೆದು ತಂದೆಯ ಬಳಿ ಹಣ ಕೇಳಲಾಗದೆ ಮಾನಸಿಕವಾಗಿ ತೊಳಲಾಡುತ್ತಿದೆ. ಆಗ ‘ಪ್ರಜಾವಾಣಿ’ಯು ಹಣಕಾಸು ನೆರವಿನ ಸಹಾಯಹಸ್ತ ಚಾಚಿ ಶಿಕ್ಷಣಕ್ಕೆ ದಾರಿ ತೋರಿತು. ನನ್ನಂತಹ ಬಡ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸುತ್ತಿರುವ ‘ಪ್ರಜಾವಾಣಿ’ಯ ಅಕ್ಷರ ದಾಸೋಹದ ಕಾರ್ಯ ನಿರಂತರವಾಗಿ ಸಾಗಲಿ.

ಎನ್.ಶ್ರೀಹರ್ಷ, ಕೋಲಾರ

‘ಪುಸ್ತಕ ಖರೀದಿಸಲು ಬಳಕೆ’

‘ತಾಯಿ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ಕುಟುಂಬ ನಿರ್ವಹಣೆಗೆ ಮತ್ತು ನನ್ನ ಶಿಕ್ಷಣಕ್ಕೆ ತಾಯಿಯ ದುಡಿಮೆಯೇ ಆಧಾರ. ಕೋವಿಡ್ ಮತ್ತು ಲಾಕ್‌ಡೌನ್ ಕಾರಣಕ್ಕೆ ಕಾರ್ಖಾನೆ ಬಂದ್ ಆಗಿದ್ದರಿಂದ ಮನೆ ನಡೆಸುವುದೇ ಕಷ್ಟವಾಗಿತ್ತು. ಅಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ‘ಪ್ರಜಾವಾಣಿ’ ನೀಡಿದ ಹಣಕಾಸು ನೆರವಿನಿಂದ ವಿದ್ಯಾಭ್ಯಾಸಕ್ಕೆ ಸಹಾಯವಾಯಿತು. ನನ್ನ ಓದಿಗೆ ನೆರವಾದ ಪತ್ರಿಕೆಗೆ ಧನ್ಯವಾದ.

ಸಿ.ವರ್ಷಾ, ಕೋಲಾರ

ಮಳೆ: ನೂರಾರು ಎಕರೆ ಬಾಳೆ ಜಲಾವೃತ

ಹುಬ್ಬಳ್ಳಿ: ಉತ್ತರ ಕನ್ನಡ ಜಿಲ್ಲೆ, ವಿಜಯಪುರ, ಹೊಸಪೇಟೆ ನಗರ, ಗ್ರಾಮೀಣ ಭಾಗಗಳಲ್ಲಿ ಮಳೆಯ ಆರ್ಭಟ ಸೋಮವಾರವೂ ಮುಂದುವರೆದಿದೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನಾದ್ಯಂತ ಭಾನುವಾರ ಸುರಿದ ಧಾರಾಕಾರ ಮಳೆಗೆ 18 ಮನೆಗಳು ಭಾಗಶಃ ಕುಸಿದಿವೆ.

ವಿಜಯನಗರ ಜಿಲ್ಲೆಯಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಗೆ ತಾಲ್ಲೂಕಿನ ಹಂಪಿ, ಕಡ್ಡಿರಾಂಪುರದಲ್ಲಿ ನೂರಾರು ಎಕರೆ ಬಾಳೆತೋಟ ಜಲಾವೃತವಾಗಿದೆ. ಕೆಲವೇ ದಿನಗಳಲ್ಲಿ ಮಾರುಕಟ್ಟೆಗೆ ಹೋಗಬೇಕಿದ್ದ ಯಾಲಕ್ಕಿ, ಸುಗಂಧಿ ಬಾಳೆ ಹಾನಿಯಾಗಿದ್ದು, ರೈತರು ನಷ್ಟದ ಭೀತಿ ಎದುರಿಸುತ್ತಿದ್ದಾರೆ. ಬಾಳೆ ಹಾನಿಯ ಮೌಲ್ಯದ ಬಗ್ಗೆ ತೋಟಗಾರಿಕೆ ಇಲಾಖೆ ಇನ್ನಷ್ಟೇ ಸಮೀಕ್ಷೆ ನಡೆಸಬೇಕಿದೆ. ಸತತ ಮಳೆಗೆ ಕೆರೆ, ಕಟ್ಟೆಗಳು ತುಂಬಿ ಹರಿಯುತ್ತಿವೆ. ತಗ್ಗು ಪ್ರದೇಶಗಳಲ್ಲಿ ನೀರು ತುಂಬಿದೆ. ಜನಜೀವನ ಅಸ್ತವ್ಯಸ್ತಗೊಂಡಿದೆ.

ಹೊಸಪೇಟೆ ತಾಲ್ಲೂಕಿನ ಕಡ್ಡಿರಾಂಪುರ ಬಳಿ ಬಾಳೆ ತೋಟ ಜಲಾವೃತವಾಗಿದೆ

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ಕುಮಟಾ ಭಾಗದಲ್ಲಿ ಮಳೆ ಜೋರಾಗಿತ್ತು. ಶಿರಸಿ, ಸಿದ್ದಾಪುರ, ಮುಂಡಗೋಡ, ಯಲ್ಲಾಪುರ ತಾಲ್ಲೂಕುಗಳಲ್ಲೂ ಮಳೆಯಾಯಿತು.

ಗದಗ ಜಿಲ್ಲೆಯ ವಿವಿಧೆಡೆ, ಲಕ್ಷ್ಮೇಶ್ವರ ತಾಲ್ಲೂಕಿನ ವಿವಿಧೆಡೆ ಧಾರಾಕಾರ ಮಳೆಯಾಗಿದೆ.

ವಿಜಯಪುರ ನಗರ, ಬಸವನ ಬಾಗೇವಾಡಿ, ತಾಳಿಕೋಟೆ, ದೇವರ ಹಿಪ್ಪರಗಿ, ತಿಕೋಟಾ, ಬಬಲೇಶ್ವರ, ಹೊರ್ತಿ, ಕೊಲ್ಹಾರ, ಇಂಡಿ ಸೇರಿದಂತೆ ಜಿಲ್ಲೆಯಾದ್ಯಂತ ಭಾರೀ ಮಳೆಯಾಗಿದೆ. ಜಿಲ್ಲೆಯಲ್ಲಿ ಇನ್ನೂ ಎರಡರಿಂದ ಮೂರು ದಿನ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೋಣಿಯಲ್ಲಿ 10.3 ಸೆಂ.ಮೀ ಮಳೆ (ಉಡುಪಿ ವರದಿ): ಕರಾವಳಿಯಾದ್ಯಂತ ಸೋಮವಾರ ಬೆಳಿಗ್ಗೆ ಬಿರುಸಿನ ಮಳೆಯಾಗಿದೆ. ಕುಂದಾಪುರ ತಾಲ್ಲೂಕಿನ ಕೋಣಿಯಲ್ಲಿ 10.3 ಸೆಂ.ಮೀ ಮಳೆಯಾಗಿದೆ. ಬ್ರಹ್ಮಾವರ ತಾಲ್ಲೂಕಿನ ಕುಮ್ರಗೋಡು, ವಡ್ಡರ್ಸೆ ಗ್ರಾಮದಲ್ಲಿ ಗಾಳಿ ಮಳೆಗೆ ಮನೆ ಕುಸಿದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	116.02	7,793	10,858
ಹಾರಂಗಿ	2,859	2,857.71	3,310	4,035
ಕಬಿನಿ	2,284	2,279.33	5,225	700
ಹೇಮಾವತಿ	2,922	2,915.27	2,373	5,272
ಲಿಂಗನಮಕ್ಕಿ	1,819	1,812.95	95	-
ಸೂಪಾ (ಮೀ)	564	554.96	8,870	2,828
ಮಾಣಿ	594.36	586.40	1,648	-
ತುಂಗಭದ್ರಾ	1,633	1,632.94	14,758	17,130
ಮಲಪ್ರಭಾ	2,079.50	2,078.70	1,394	1,394
ಘಟಪ್ರಭಾ	2,175	2,175	1,426	1,426
ಭದ್ರಾ	186	185.40	3,450	3,751
ಆಲಮಟ್ಟಿ (ಮೀ)	519.60	519.60	2,141	2,141
ನಾರಾಯಣಪುರ (ಮೀ)	492.25	491.71	1,930	5,430

* ನೆಲಮಟ್ಟದಿಂದ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸಂವಾದ ಬೆಳಿಗ್ಗೆ 11ರಿಂದ 12
2023ರ ಚುನಾವಣೆಯನ್ನು ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಎದುರಿಸಲಿದೆಯೆ?
ಭಾಗವಹಿಸುವವರು: ಈರಣ್ಣ ಕಡಾಡಿ, ಸಂಸದ, ಬಿಜೆಪಿ., ಪೃಥ್ವಿ ರೆಡ್ಡಿ, ರಾಜ್ಯ ಸಂಚಾಲಕ, ಆಮ್ ಆದ್ಮಿ ಪಕ್ಷ., ಬಂಡೆಪ್ಪ ಕಾಶೆಂಪೂರ್, ಶಾಸಕ, ಜೆಡಿಎಸ್., ರವೀಂದ್ರ ರೇಷ್ಮೆ, ರಾಜಕೀಯ ವಿಶ್ಲೇಷಕ
ಪಾಡ್‌ಕಾಸ್ಟ್: ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ ಬುಲಿಟಿನ್, ಸಂಪಾದಕೀಯ, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ಪಂಜ್‌ಶಿರ್ ಕಣಿವೆಯ ಪ್ರತಿರೋಧ ಅಂತ್ಯ: ಬಂಡಾಯ ಸಹಿಸುವುದಿಲ್ಲ ಎಂಬ ಎಚ್ಚರಿಕೆ

ಅಫ್ಗನ್ ಪೂರ್ಣ ವಶಕ್ಕೆ: ತಾಲಿಬಾನ್

ಕಾಬೂಲ್ (ಎಎಫ್‌ಪಿ): ಪಂಜ್‌ಶಿರ್ ಕಣಿವೆಯನ್ನು ವಶಕ್ಕೆ ಪಡೆಯಲಾಗಿದೆ. ಇದರಿಂದಾಗಿ ಅಫ್ಗಾನಿಸ್ತಾನ ಸಂಪೂರ್ಣವಾಗಿ ತನ್ನ ನಿಯಂತ್ರಣಕ್ಕೆ ಬಂದಿದೆ ಎಂದು ತಾಲಿಬಾನ್ ಸೋಮವಾರ ಹೇಳಿದೆ. ರಾಜಧಾನಿ ಕಾಬೂಲ್ ಅನ್ನು ಆಗಸ್ಟ್ 15ರಂದು ವಶಕ್ಕೆ ಪಡೆದಿದ್ದ ತಾಲಿಬಾನ್ ವಿರುದ್ಧ ಪಂಜ್‌ಶಿರ್ ಪ್ರಾಂತ್ಯದಲ್ಲಿ ಪ್ರತಿರೋಧ ವ್ಯಕ್ತವಾಗಿತ್ತು.

ಪಂಜ್‌ಶಿರ್ ಪ್ರಾಂತ್ಯದ ಗವರ್ನರ್ ಕಚೇರಿಯಲ್ಲಿ ತನ್ನ ಸೈನಿಕರು ಇರುವ ಚಿತ್ರವನ್ನು ತಾಲಿಬಾನ್ ಬಿಡುಗಡೆ ಮಾಡಿದೆ. ಈ ಪ್ರಾಂತ್ಯವು 1980ರ ದಶಕದಲ್ಲಿ ಸೋವಿಯತ್ ರಷ್ಯಾ ಪಡೆಗಳು ಮತ್ತು 1990ರ ದಶಕದಲ್ಲಿ ತಾಲಿಬಾನ್ ಪಡೆಯ ವಿರುದ್ಧ ನಿಂತಿತ್ತು. ಈ ಎರಡೂ ಸಂದರ್ಭಗಳಲ್ಲಿಯೂ ಪ್ರಾಂತ್ಯದ ಪ್ರತಿರೋಧವನ್ನು ದಮನ ಮಾಡಲು ಸಾಧ್ಯವಾಗಿರಲಿಲ್ಲ.

ತಾಲಿಬಾನ್ ವಿರೋಧಿ ಹೋರಾಟಗಾರರು ಮತ್ತು ಅಫ್ಗಾನಿಸ್ತಾನ ಭದ್ರತಾ ಪಡೆಯ ಸೈನಿಕರು ಜತೆಯಾಗಿ ನ್ಯಾಷನಲ್ ರೆಸಿಸ್ಟೆನ್ಸ್ ಫ್ರಂಟ್ (ಎನ್‌ಆರ್‌ಎಫ್) ರೂಪಿಸಿದ್ದರು. ಪಂಜ್‌ಶಿರ್ ಪ್ರದೇಶವನ್ನು ಎನ್‌ಆರ್‌ಎಫ್ ತನ್ನ ವಶದಲ್ಲಿ ಇರಿಸಿಕೊಂಡಿತ್ತು.

ಯುದ್ಧದಲ್ಲಿ ಭಾರಿ ಹಿನ್ನಡೆ ಆಗಿದೆ ಎಂದು ಎನ್‌ಆರ್‌ಎಫ್ ಭಾನುವಾರ ಹೇಳಿತ್ತು. ಕದನ ವಿರಾಮದ ಬೇಡಿಕೆಯನ್ನೂ ಮುಂದಿರಿಸಿತ್ತು. ಆದರೆ, ತನ್ನ ಸೈನಿಕರು ಪಂಜ್‌ಶಿರ್ ಕಣಿವೆಯ ಪ್ರಮುಖ ಸ್ಥಳಗಳಲ್ಲಿ ನೆಲೆಯಾಗಿದ್ದಾರೆ ಮತ್ತು ಹೋರಾಟ ಮುಂದುವರಿಯಲಿದೆ ಎಂದು ಸೋಮವಾರ ಎನ್‌ಆರ್‌ಎಫ್ ಟ್ವೀಟ್ ಮಾಡಿದೆ.

1980ರ ದಶಕದಿಂದಲೇ ದೇಶದ ಪರವಾಗಿ ಹೋರಾಟ ನಡೆಸಿದ್ದ ಕಮಾಂಡರ್ ಅಹ್ಮದ್ ಶಾ ಮಸೂದ್ ಅವರ ಮಗ ಅಹ್ಮದ್ ಮಸೂದ್ ಅವರಿಗೆ ನಿಷ್ಠರಾದ ಸೈನಿಕರು ಎನ್‌ಆರ್‌ಎಫ್‌ನಲ್ಲಿ ಇದ್ದಾರೆ.

ಫೈಜ್–ಬರದರ್ ಭೇಟಿ ದೃಢ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಮುಖ್ಯಸ್ಥ ಲೆ.ಜ. ಫೈಜ್ ಹಮೀದ್ ಅವರು ತಾಲಿಬಾನ್ ನಾಯಕ ಮುಲ್ಲಾ ಅಬ್ದುಲ್ ಘನಿ ಬರದರ್ ಅವರನ್ನು ಕಾಬೂಲ್‌ನಲ್ಲಿ ಭೇಟಿಯಾಗಿದ್ದಾರೆ ಎಂಬ ವರದಿಗಳನ್ನು ಝಬೀವುಲ್ಲ ಮುಜಾಹಿದ್ ದೃಢಪಡಿಸಿದ್ದಾರೆ.

ಫೈಜ್ ಅವರು ಕಳೆದ ವಾರ ಕಾಬೂಲ್‌ಗೆ ದಿಢೀರ್ ಭೇಟಿ ಕೊಟ್ಟಿದ್ದರು. ಅಫ್ಗಾನಿಸ್ತಾನವು ತಾಲಿಬಾನ್ ವಶವಾದ ಬಳಿಕ ಆ ದೇಶಕ್ಕೆ ವಿದೇಶದ ಹಿರಿಯ ಅಧಿಕಾರಿಯೊಬ್ಬರು ಭೇಟಿ ನೀಡಿದ್ದು ಅದೇ ಮೊದಲು.

ಸರ್ಕಾರ ರಚನೆಗೆ ಸಂಬಂಧಿಸಿ ಬರದರ್ ಮತ್ತು ಹಖ್ಖಾನಿ ಗುಂಪಿನ ನಡುವೆ ಭಿನ್ನಮತವಿದೆ. ಈ ಎರಡು ಗುಂಪುಗಳ ನಡುವೆ ಮಧ್ಯಸ್ಥಿಕೆ ವಹಿಸುವುದಕ್ಕಾಗಿ ಫೈಜ್ ಅವರು ಕಾಬೂಲ್‌ಗೆ ಹೋಗಿದ್ದರು ಎನ್ನಲಾಗಿದೆ.

ಕಾಬೂಲ್‌ನಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಸೋಮವಾರದಿಂದ ಪುನರಾರಂಭವಾಗಿದ್ದು, ವಿದ್ಯಾರ್ಥಿಗಳು ತರಗತಿಗೆ ಹಾಜರಾದರು. ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿಗಳು ಇರಬೇಕು ಇಲ್ಲವೇ ಅವರ ನಡುವೆ ಪರದೆ ಹಾಕಿರಬೇಕು ಎಂಬ ಷರತ್ತನ್ನು ತಾಲಿಬಾನ್ ವಿಧಿಸಿದೆ. ಸದ್ಯ ಅಂತಹ ವ್ಯವಸ್ಥೆ ಮಾಡಿದಂತಿಲ್ಲ –ಎಎಫ್‌ಪಿ ಚಿತ್ರ

ಮಹಿಳಾ ಪೊಲೀಸ್ ಹತ್ಯೆ

ಮಹಿಳಾ ಪೊಲೀಸ್ ಸಿಬ್ಬಂದಿಯೊಬ್ಬರನ್ನು ಘೋರ್ ಪ್ರಾಂತ್ಯದಲ್ಲಿ ತಾಲಿಬಾನ್ ಸೈನಿಕರು ಗುಂಡಿಟ್ಟು ಕೊಂದಿದ್ದಾರೆ ಎಂದು ಸ್ಥಳೀಯ ಪತ್ರಕರ್ತರೊಬ್ಬರು ಟ್ವೀಟ್ ಮಾಡಿದ್ದಾರೆ. ಮಹಿಳೆಯು ಆರು ತಿಂಗಳ ಗರ್ಭಿಣಿ ಎಂದು ಹೇಳಲಾಗಿದೆ. ನಿಗರ ಎಂಬ ಹೆಸರಿನ ಈ ಮಹಿಳೆಯ ಗಂಡ ಮತ್ತು ಮಕ್ಕಳ ಎದುರೇ ಹತ್ಯೆ ಮಾಡಲಾಗಿದೆ.

ದೇಶದ ಒಳಗೆ ಅಥವಾ ಹೊರಗೆ ಎಲ್ಲೇ ಇರಿ, ದೇಶದ ಘನತೆ, ಸ್ವಾತಂತ್ರ್ಯ ಮತ್ತು ಸಮೃದ್ಧಿಗಾಗಿ ರಾಷ್ಟ್ರವ್ಯಾಪಿ ಚಳವಳಿ ನಡೆಸಬೇಕಾದ ಅಗತ್ಯ ಇದೆ
ಅಹ್ಮದ್ ಮಸೂದ್, ನ್ಯಾಷನಲ್ ರೆಸಿಸ್ಟೆನ್ಸ್ ಫ್ರಂಟ್‌ನ ಕಮಾಂಡರ್

ಬಂಡಾಯದ ಬಗ್ಗೆ ತಾಲಿಬಾನ್ ನಿಲುವು ಕಠಿಣ. ಬಂಡಾಯಕ್ಕೆ ಯತ್ನಿಸಿದರೆ ತಕ್ಕ ಪಾಠ ಕಲಿಸುತ್ತೇವೆ, ಇನ್ನೊಂದು ಬಂಡಾಯಕ್ಕೆ ಅವಕಾಶವೇ ಇಲ್ಲ
ಝಬೀವುಲ್ಲಾ ಮುಜಾಹಿದ್ ತಾಲಿಬಾನ್ ವಕ್ತಾರ

‘ಮಧ್ಯಂತರ ಸರ್ಕಾರ ಶೀಘ್ರ ಅಸ್ತಿತ್ವಕ್ಕೆ’

ಕಾಬೂಲ್ ಅನ್ನು ವಶಪಡಿಸಿಕೊಂಡು ಮೂರು ವಾರಗಳಾಗಿದ್ದರೂ ಹೊಸ ಸರ್ಕಾರ ರಚಿಸುವುದು ತಾಲಿಬಾನ್‌ಗೆ ಸಾಧ್ಯವಾಗಿಲ್ಲ. ಅಫ್ಗಾನಿಸ್ತಾನದ ಪ್ರಮುಖ ಸಂಸ್ಥೆಗಳನ್ನು ತಾಲಿಬಾನ್ ತನ್ನ ನಿಯಂತ್ರಣಕ್ಕೆ ಪಡೆದಿದೆ.

ಮಧ್ಯಂತರ ಸರ್ಕಾರವು ಶೀಘ್ರ ಅಸ್ತಿತ್ವಕ್ಕೆ ಬರಲಿದೆ. ಮುಂದೆ ಬದಲಾವಣೆಗೆ ಅವಕಾಶ ಕಲ್ಪಿಸಿ ಈ ಸರ್ಕಾರ ರಚಿಸಲಾಗುವುದು. ಮಹತ್ವದ ನಿರ್ಧಾರಗಳೆಲ್ಲವೂ ಆಗಿವೆ. ತಾಂತ್ರಿಕ ವಿಚಾರಗಳು ಮಾತ್ರ ಅಂತಿಮಗೊಳ್ಳಬೇಕಿದೆ ಎಂದು ತಾಲಿಬಾನ್ ವಕ್ತಾರ ಝಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ.

1996ರಿಂದ 2001 ನಡುವೆ ತಾಲಿಬಾನ್ ನೇತೃತ್ವದ ಸರ್ಕಾರ ಇದ್ದಾಗ ಕಠಿಣ ನಿಯಮಗಳು ಜಾರಿಯಲ್ಲಿದ್ದವು ಮತ್ತು ಕ್ರೂರವಾದ ಶಿಕ್ಷಾ ವ್ಯವಸ್ಥೆ ಇತ್ತು. ಮಹಿಳೆಯರಿಗೆ ಯಾವುದೇ ಸ್ವಾತಂತ್ರ್ಯ ಇರಲಿಲ್ಲ. ಈ ಬಾರಿ, ಸರ್ಕಾರವು ಎಲ್ಲರನ್ನೂ ಒಳಗೊಳ್ಳಲಿದೆ ಮತ್ತು ಅಫ್ಗಾನಿಸ್ತಾನದ ಸಂಕೀರ್ಣವಾದ ಬುಡಕಟ್ಟು ಗುಂಪುಗಳಿಗೆ ಪ್ರಾತಿನಿಧ್ಯ ದೊರೆಯಲಿದೆ ಎಂದು ತಾಲಿಬಾನ್ ಹೇಳಿದೆ.

ಆಹ್ವಾನ: ಚೀನಾ ಮೌನ

ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗಿಯಾಗುವಂತೆ ಚೀನಾ, ಪಾಕಿಸ್ತಾನ, ರಷ್ಯಾ, ಟರ್ಕಿ, ಇರಾನ್ ಮತ್ತು ಕತಾರ್‌ಗೆ ತಾಲಿಬಾನ್ ಆಹ್ವಾನ ನೀಡಿದೆ ಎಂಬ ವರದಿಗೆ ಚೀನಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇಂತಹ ಆಹ್ವಾನದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರರಾದ ವಾಂಗ್ ವೆನ್‌ಬಿನ್ ಹೇಳಿದ್ದಾರೆ.

ತನ್ನ ಮಿತ್ರ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ರಷ್ಯಾ ಜತೆಗೆ ಸೇರಿಕೊಂಡು ಅಫ್ಗಾನಿಸ್ತಾನ ನೀತಿ ಏನಿರಬೇಕು ಎಂಬ ಬಗ್ಗೆ ಚೀನಾ ಸಮಾಲೋಚನೆ ನಡೆಸುತ್ತಿದೆ. ಅಫ್ಗಾನಿಸ್ತಾನದಲ್ಲಿರುವ ತಮ್ಮ ರಾಯಭಾರ ಕಚೇರಿಗಳನ್ನು ಈ ಮೂರೂ ದೇಶಗಳು ತೆರೆದೇ ಇರಿಸಿವೆ. ಜತೆಗೆ, ಸರ್ಕಾರ ರಚನೆಯಾದ ಬಳಿಕ ಅದಕ್ಕೆ ಮಾನ್ಯತೆ ನೀಡಲು ಕೂಡ ಈ ದೇಶಗಳು ಉತ್ಸುಕವಾಗಿವೆ.

ಹೊಸ ಎತ್ತರಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಹೊಸ ದಾಖಲೆಯ ಮಟ್ಟ ತಲುಪಿದವು. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಷೇರು ಹಾಗೂ ಐ.ಟಿ. ವಲಯದ ಕಂಪನಿಗಳ ಷೇರು ಖರೀದಿ ಜೋರಾಗಿ ನಡೆದಿದ್ದು ಈ ಏರಿಕೆಗೆ ಕೊಡುಗೆ ನೀಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 166 ಅಂಶ ಏರಿಕೆಯಾಗಿ ದಾಖಲೆಯ 58,296 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 58,515 ಅಂಶವನ್ನು ತಲುಪಿತ್ತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 54 ಅಂಶ ಹೆಚ್ಚಾಗಿ ದಾಖಲೆಯ ಮಟ್ಟವಾದ 17,377ರಲ್ಲಿ ವಹಿವಾಟು ಕೊನೆಗೊಳಿಸಿತು.

‘ಆರ್ಥಿಕ ಚಟುವಟಿಕೆಗಳು ಸಹಜವಾಗುತ್ತಿರುವುದರಿಂದ ರಿಯಾಲ್ಟಿ ವಲಯದ ಷೇರುಗಳತ್ತ ಖರೀದಿದಾರರು ಮುಖ ಮಾಡುವಂತೆ ಆಗಿದೆ. ಐ.ಟಿ. ವಲಯದ ಷೇರುಗಳು ಎಂದಿನಂತೆ ಖರೀದಿದಾರರ ಆಕರ್ಷಣೆಯನ್ನು ಉಳಿಸಿಕೊಂಡಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಎಂಟು ಪೈಸೆ ಇಳಿಕೆ ಆಗಿದ್ದು ₹ 73.10ಕ್ಕೆ ತಲುಪಿದೆ.

ಸಂಕ್ಷಿಪ್ತ ಸುದ್ದಿ

ಉ. ಪ್ರದೇಶದ ಮಾಜಿ ರಾಜ್ಯಪಾಲರ ವಿರುದ್ಧ ದೇಶದ್ರೋಹ ಪ್ರಕರಣ

ಲಖನೌ (ಪಿಟಿಐ): ಯೋಗಿ ಆದಿತ್ಯನಾಥ್ ಸರ್ಕಾರದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕಾಗಿ ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ಅಜೀಜ್ ಖುರೇಷಿ ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ.

ಬಿಜೆಪಿ ನಾಯಕ ಆಕಾಶ್ ಕುಮಾರ್ ಸಕ್ಸೇನಾ ನೀಡಿದ ದೂರಿನ ಮೇರೆಗೆ ರಾಮಪುರ ಜಿಲ್ಲೆಯ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

‘ಯೋಗಿ ಆದಿತ್ಯನಾಥ್ ಸರ್ಕಾರ ರಕ್ತ ಹೀರುವ ರಾಕ್ಷಸ’ ಎಂದು ಖುರೇಷಿ ಹೇಳಿಕೆ ನೀಡಿದ್ದಾರೆ ಎನ್ನುವುದನ್ನು ಸಕ್ಸೇನಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನೀಟ್ ಮುಂದೂಡಿಕೆ ಇಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಇದೇ 12ಕ್ಕೆ ನಿಗದಿಯಾಗಿರುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯನ್ನು (ನೀಟ್–ಯುಜಿ 2021) ಮುಂದೂಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ. ಬೇರೆ ದಿನಕ್ಕೆ ಪರೀಕ್ಷೆಯನ್ನು ಮರುನಿಗದಿ ಮಾಡುವುದು ಸರಿಯಲ್ಲ ಎಂದಿರುವ ಕೋರ್ಟ್, ಈ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಲು ಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಹಲವು ಪರೀಕ್ಷೆಗಳನ್ನು ಬರೆಯಲು ವಿದ್ಯಾರ್ಥಿಗಳು ಬಯಸಿದ್ದರೆ, ತಮ್ಮ ಆದ್ಯತೆ ಏನು ಎಂಬುದನ್ನು ಅವರು ನಿರ್ಧರಿಸಬೇಕು. ಪರೀಕ್ಷೆಯ ದಿನಾಂಕಗಳಿಗೆ ಸಂಬಂಧಿಸಿ ಎಲ್ಲರನ್ನೂ ತೃಪ್ತಿಪಡಿಸುವುದು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಸುಮಾರು 25 ಸಾವಿರ ವಿದ್ಯಾರ್ಥಿಗಳು 12ನೇ ತರಗತಿಯ ಪರೀಕ್ಷೆ ಫಲಿತಾಂಶ ಸುಧಾರಣೆಗೆ ಮರುಪರೀಕ್ಷೆ ಬರೆಯಲಿದ್ದಾರೆ. ಸೆ. 12ರ ಆಸುಪಾಸಿನಲ್ಲಿ ಹಲವು ಪರೀಕ್ಷೆಗಳು ಇವೆ. ಹಾಗಾಗಿ ನೀಟ್ ಮುಂದೂಡಬೇಕು ಎಂದು ಅರ್ಜಿದಾರರ ಪರ ವಕೀಲ ಶೋಯಬ್ ಆಲಂ ವಾದಿಸಿದರು. ಇದು ಶೇ 1ರಷ್ಟು ವಿದ್ಯಾರ್ಥಿಗಳಿಗೆ ಅನ್ವಯವಾಗುವ ವಿಚಾರ ಮಾತ್ರ ಎಂದು ಪೀಠವು ವಾದವನ್ನು ತಳ್ಳಿಹಾಕಿತು.

ಗಡಾಫಿ ಪುತ್ರ ಏಳು ವರ್ಷಗಳ ನಂತರ ಬಿಡುಗಡೆ

ಕೈರೊ (ಪಿಟಿಐ): ತನ್ನ ತಂದೆಯ ಆಡಳಿತದ ವಿರುದ್ಧ ದಂಗೆ ಎದ್ದ ಆರೋಪದ ಮೇಲೆ ಏಳು ವರ್ಷಗಳ ಹಿಂದೆ ನೈಜೀರಿಯಾದಿಂದ ಗಡಿ ಪಾರಾಗಿ, ಟ್ರಿಪೋಲಿಯಲ್ಲಿ ಬಂಧನಕ್ಕೊಳಗಾಗಿದ್ದ ಲಿಬಿಯಾದ ಸರ್ವಾಧಿಕಾರಿ ಮುಅಮ್ಮರ್ ಗಡಾಫಿ ಅವರ ಪುತ್ರ ಅಲ್–ಸಾದಿ ಗಡಾಫಿಯನ್ನು ಭಾನುವಾರ ಅಧಿಕಾರಿಗಳು ಬಿಡುಗಡೆ ಮಾಡಿದ್ದಾರೆ.

‘ಸಾದಿ ಗಡಾಫಿ ಬಿಡುಗಡೆಯಾದ ನಂತರ, ಟರ್ಕಿಗೆ ಪ್ರಯಾಣಿಸಿದರು’ ಎಂದು ಅಲ್–ಮರ್ಸಾದ್ ನ್ಯೂಸ್ ವೆಬ್‌ಸೈಟ್ ವರದಿ ಮಾಡಿದೆ.

ನಿಫಾ ತಡೆಗೆ ಮಾರ್ಗಸೂಚಿ ಪ್ರಕಟ

ಮುಖ್ಯಾಂಶಗಳು
- ಬಾಲಕನ ಪ್ರಾಥಮಿಕ ಸಂಪರ್ಕಿತ 11 ಜನರಲ್ಲಿ ನಿಫಾ ಲಕ್ಷಣ
- ಏಳೂ ಜನರ ಮಾದರಿಗಳನ್ನು ಪುಣೆಯ ಪ್ರಯೋಗಾಲಯಕ್ಕೆ ರವಾನೆ
- ಮಂಗಳವಾರ ಬೆಳಿಗ್ಗೆ ಪರೀಕ್ಷಾ ವರದಿಗಳು ಬರುವ ಸಾಧ್ಯತೆ

ತಿರುವನಂತಪುರ (ಪಿಟಿಐ): ನಿಫಾ ವೈರಸ್ ಹರಡುವಿಕೆ ತಡೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಕೇರಳ ಸರ್ಕಾರವು ಸೋಮವಾರ ಮಾರ್ಗಸೂಚಿ ಹೊರಡಿಸಿದೆ. ರಾಜ್ಯದ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು ಈ ಮಾರ್ಗಸೂಚಿಗಳನ್ನು ಪಾಲಿಸಬೇಕಿದೆ. ಇದರ ಮೇಲ್ವಿಚಾರಣೆಗೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ.

‘ನಿಫಾ ವೈರಸ್ ತಡೆಗಟ್ಟಲು ಪ್ರಾಥಮಿಕ ಸಂಪರ್ಕಿತರನ್ನು ಪತ್ತೆ ಮಾಡುವುದು, ತಪಾಸಣೆ ಮತ್ತು ಚಿಕಿತ್ಸೆಯೇ ಪರಿಣಾಮಕಾರಿ ವಿಧಾನ. ಇದಕ್ಕಾಗಿ ರಾಜ್ಯ ಮಟ್ಟದ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ. ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಅಗತ್ಯಕ್ಕೆ ತಕ್ಕಂತೆ ಮತ್ತಷ್ಟು ಮಾರ್ಗಸೂಚಿಗಳನ್ನು ಸೇರಿಸಿಕೊಳ್ಳಬಹುದು’ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

‘ಸೋಂಕಿತರ ಸಂಪರ್ಕಿತರನ್ನು ಕ್ವಾರಂಟೈನ್ ಮಾಡಲಾಗುತ್ತದೆ. ಚಿಕಿತ್ಸಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಪಾಲಿಸಲಾಗುತ್ತದೆ. ಆಸ್ಪತ್ರೆಯ ವೈದ್ಯರು, ದಾದಿಯರು, ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಎಲ್ಲಾ ಸಿಬ್ಬಂದಿಯೂ ಪಿಪಿಇ ಕಿಟ್ ಧರಿಸಲು ಸೂಚನೆ ನೀಡಲಾಗಿದೆ. ಈ ಎಲ್ಲಾ ಸಿಬ್ಬಂದಿಗೆ ನಿಫಾ ಹರಡುವುದನ್ನು ತಡೆಗಟ್ಟಲು ವಿಶೇಷ ತರಬೇತಿ ನೀಡಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

‘ಕೋಯಿಕ್ಕೋಡ್‌ನಲ್ಲಿ ನಿಫಾದಿಂದ ಮೃತಪಟ್ಟ ಬಾಲಕನ ಸಂಪರ್ಕಕ್ಕೆ ಬಂದಿರುವವರ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಬಾಲಕನನ್ನು ಮೊದಲು ಒಂದು ಕ್ಲಿನಿಕ್‌ಗೆ, ಆನಂತರ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆನಂತರ ಮತ್ತೊಂದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಲ್ಲಿಂದ ಕೋಯಿಕ್ಕೋಡ್ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ನಂತರ ಮತ್ತೊಂದು ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಈ ಎಲ್ಲಾ ಆಸ್ಪತ್ರೆಯಲ್ಲಿ ಬಾಲಕನ ಸಂಪರ್ಕಕ್ಕೆ ಬಂದಿದ್ದ ಜನರನ್ನು ಪತ್ತೆ ಮಾಡಬೇಕಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಈವರೆಗೆ ಪತ್ತೆಯಾಗಿರುವ 188 ಪ್ರಾಥಮಿಕ ಸಂಪರ್ಕಿತರಲ್ಲಿ 11 ಜನರ ಮಾದರಿಗಳನ್ನು ಪುಣೆಯ ವೈರಾಣುಶಾಸ್ತ್ರ ಸಂಸ್ಥೆಗೆ ಕಳುಹಿಸಲಾಗಿದೆ. 11 ಜನರಲ್ಲೂ ನಿಫಾ ಲಕ್ಷಣಗಳು ಕಂಡುಬಂದಿದೆ. ಅವರ ಪ್ರಾಥಮಿಕ ಸಂಪರ್ಕಿತರನ್ನೂ ಪತ್ತೆ ಮಾಡಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ತಾಲಿಬಾನ್ ಜತೆ ಆರ್‌ಎಸ್‌ಎಸ್ ಹೋಲಿಕೆ ಸಂಪೂರ್ಣ ತಪ್ಪು’

ಮುಂಬೈ (ಪಿಟಿಐ): ಚಿತ್ರ ಸಾಹಿತಿ ಜಾವೇದ್ ಅಖ್ತರ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ತಾಲಿಬಾನ್‌ಗೆ ಹೋಲಿಸಿರುವುದು ಸಂಪೂರ್ಣ ತಪ್ಪು ಎಂದು ಶಿವಸೇನಾ ಹೇಳಿದೆ.

‘ಜಾವೇದ್ ಅಖ್ತರ್ ಜಾತ್ಯತೀತ ವ್ಯಕ್ತಿ. ಅವರು ಮೂಲಭೂತವಾದದ ವಿರುದ್ಧ ಮಾತನಾಡುತ್ತಾರೆ. ಹಾಗಿದ್ದರೂ, ಆರ್‌ಎಸ್‌ಎಸ್ ಅನ್ನು ತಾಲಿಬಾನ್‌ಗೆ ಹೋಲಿಸಿರುವುದು ಸಂಪೂರ್ಣ ತಪ್ಪು. ಹಿಂದೂ ರಾಷ್ಟ್ರ ಪರಿಕಲ್ಪನೆಯನ್ನು ಬೆಂಬಲಿಸುವವರು ತಾಲಿಬಾನಿ ಮನಸ್ಥಿತಿಯನ್ನು ಹೊಂದಿದವರು ಎಂದು ನೀವು ಹೇಗೆ ಹೇಳುತ್ತೀರಿ? ನಾವು ಇದನ್ನು ಒಪ್ಪುವುದಿಲ್ಲ’ ಎಂದು ಶಿವಸೇನಾ ಮುಖವಾಣಿ ‘ಸಾಮ್ನಾ’ ಪತ್ರಿಕೆಯ ಸಂಪಾದಕೀಯದಲ್ಲಿ ಹೇಳಲಾಗಿದೆ.

‘ಪಾಕಿಸ್ತಾನ ರಚನೆಗೆ ಕಾರಣವಾದ ವಿಭಜನೆಯು ಧರ್ಮ ಆಧಾರಿತವಾಗಿತ್ತು. ಹಿಂದೂ ರಾಷ್ಟ್ರವನ್ನು ಬೆಂಬಲಿಸುವವರು ಬಹುಸಂಖ್ಯಾತ ಹಿಂದೂಗಳನ್ನು ದೂರವಿಡಬಾರದು ಎಂಬುದನ್ನು ಮಾತ್ರ ಬಯಸುತ್ತಾರೆ’ ಎಂದು ಉಲ್ಲೇಖಿಸಲಾಗಿದೆ.

‘ಹಿಂದುತ್ವ ಒಂದು ಸಂಸ್ಕೃತಿ. ಈ ಸಮುದಾಯದವರು ತಮ್ಮ ಸಂಸ್ಕೃತಿಯ ಮೇಲೆ ದಾಳಿ ಮಾಡುವವರನ್ನು ತಡೆಯುವ ಹಕ್ಕನ್ನು ಬಯಸುತ್ತಾರೆ. ಹಿಂದುತ್ವವನ್ನು ತಾಲಿಬಾನ್‌ಗೆ ಹೋಲಿಸುವ ಮೂಲಕ ಹಿಂದೂ ಸಂಸ್ಕೃತಿಗೆ ಅವಮಾನ ಮಾಡಲಾಗಿದೆ’ ಎಂದು ತಿಳಿಸಲಾಗಿದೆ.

‘ಇದು ಹಿಂದೂ ಬಹುಸಂಖ್ಯಾತ ದೇಶವಾಗಿದ್ದರೂ, ನಾವು ಜಾತ್ಯತೀತತೆಯ ತತ್ವವನ್ನು ಎತ್ತಿ ಹಿಡಿದಿದ್ದೇವೆ. ಹಿಂದುತ್ವ ಪ್ರತಿಪಾದಕರು ಹಿಂದೂಗಳನ್ನು ಮೂಲೆಗುಂಪು ಮಾಡಬಾರದೆಂದು ಬಯಸುತ್ತಾರೆ. ನಿಮಗೆ ಆರ್‌ಎಸ್‌ಎಸ್‌ನೊಂದಿಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ, ಆ ಸಂಘಟನೆಯ ತತ್ವಗಳನ್ನು ತಾಲಿಬಾನ್‌ಗೆ ಹೋಲಿಸುವುದು ಸರಿಯಲ್ಲ’ ಎಂದು ಸಂಪಾದಕೀಯ ಹೇಳಿದೆ.

ಜಾವೇದ್ ಅಖ್ತರ್ ನಿವಾಸಕ್ಕೆ ಭದ್ರತೆ ಹೆಚ್ಚಳ



ಮುಂಬೈ (ಪಿಟಿಐ): ‘ಮುಂಬೈನ ಜುಹು ಪ್ರದೇಶದಲ್ಲಿ ಇಸ್ಕಾನ್ ದೇವಸ್ಥಾನದ ಬಳಿಯಿರುವ ಚಿತ್ರ ಸಾಹಿತಿ ಜಾವೇದ್ ಅಖ್ತರ್ ಅವರ ನಿವಾಸದ ಬಳಿ ಭದ್ರತೆಯನ್ನು ಹೆಚ್ಚಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಆರ್‌ಎಸ್‌ಎಸ್ ಅನ್ನು ತಾಲಿಬಾನ್‌ಗೆ ಹೋಲಿಸಿದ್ದಕ್ಕೆ ಜಾವೇದ್ ಅಖ್ತರ್ ಕ್ಷಮೆಯಾಚಿಸಬೇಕು ಎಂದು ಮಹಾರಾಷ್ಟ್ರದ ಬಿಜೆಪಿ ಶಾಸಕ ರಾಂ ಕದಂ ಅವರು ಒತ್ತಾಯಿಸಿದ್ದಾರೆ. ಇದರ ಬೆನ್ನಲ್ಲೇ ಅಖ್ತರ್ ನಿವಾಸದ ಮುಂದೆ ಮಹಿಳಾ ಕಾನ್‌ಸ್ಟೆಬಲ್‌ಗಳು ಸೇರಿದಂತೆ ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ನಮಾಜ್‌ಗೆ ಕೊಠಡಿ: ಪ್ರತಿಭಟನೆ

ರಾಂಚಿ (ಪಿಟಿಐ): ಜಾರ್ಖಂಡ್ ವಿಧಾನಸಭೆಯ ನೂತನ ಕಟ್ಟಡದಲ್ಲಿ ನಮಾಜ್ ಮಾಡುವುದಕ್ಕಾಗಿ ಪ್ರತ್ಯೇಕ ಕೊಠಡಿ ಮೀಸಲಿಡುವ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಬಿಜೆಪಿ ಸದಸ್ಯರು ನಡೆಸಿದ ಪ್ರತಿಭಟನೆ, ಗದ್ದಲದಿಂದಾಗಿ ವಿಧಾನಸಭಾ ಕಲಾಪಕ್ಕೆ ಅಡ್ಡಿಯುಂಟಾಯಿತು.

ಸೋಮವಾರ ಅಧಿವೇಶನ ಆರಂಭಕ್ಕೆ ಮುನ್ನವೇ ಬಿಜೆಪಿ ಶಾಸಕರು ವಿಧಾನಸೌಧದ ಪ್ರವೇಶದ್ವಾರದ ಮೆಟ್ಟಿಲುಗಳ ಮೇಲೆ ಕುಳಿತು ಹನುಮಾನ್ ಚಾಲೀಸ್ ಪಠಿಸುತ್ತಾ, ಹರೇ ರಾಮ ಎಂದು ಘೋಷಣೆಗಳನ್ನು ಕೂಗಿದರು.

ದಿನದ ಕಲಾಪ ಆರಂಭವಾದ ಕೂಡಲೇ ಬಿಜೆಪಿ ಸದಸ್ಯರು ‘ಜೈ ಶ್ರೀ ರಾಮ್’ ಎಂದು ಘೋಷಣೆ ಕೂಗುತ್ತಾ ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ತೆರಳಿ ಪ್ರತಿಭಟಿಸಿದರು. ನಮಾಜ್‌ಗಾಗಿ ಪ್ರತ್ಯೇಕ ಕೊಠಡಿ ಮೀಸಲಿಡುವ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದರು.

ವಿಧಾನ ಸಭಾಧ್ಯಕ್ಷ ರವೀಂದ್ರನಾಥ್ ಮಾತ್ತೊ, ‘ನೀವೆಲ್ಲ ಒಳ್ಳೆಯ ಸದಸ್ಯರು. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಸದನ ನಡೆಯಲು ಸಹಕಾರ ನೀಡಿ’ ಎಂದು ಪ್ರತಿಭಟನಾ ನಿರತ ಬಿಜೆಪಿ ಸದಸ್ಯರಿಗೆ ಸೂಚಿಸಿದರು. ಆದರೂ ಬಿಜೆಪಿ ಸದಸ್ಯರು ಕಲಾಪಕ್ಕೆ ಅಡ್ಡಿಪಡಿಸುವುದನ್ನು ಮುಂದುವರಿಸಿದರು. ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾದ ಕಾರಣ ಸ್ಪೀಕರ್ ಅವರು ಕಲಾಪವನ್ನು ಮುಂದೂಡಿದರು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿ ಕಾರ್ಯಕರ್ತರು ಭಾನುವಾರ ಜಾರ್ಖಂಡ್ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿ, ವಿಧಾನಸಭಾ ಸ್ಪೀಕರ್ ಮತ್ತು ಮುಖ್ಯಮಂತ್ರಿಯವರ ಪ್ರತಿಕೃತಿ ದಹನ ಮಾಡಿದ್ದರು.

ಸ್ಪೀಕರ್ ರವೀಂದ್ರನಾಥ್ ಮಾತ್ತೊ ಅವರು, ವಿಧಾನಸಭಾ ಕಟ್ಟಡದ 348 ಸಂಖ್ಯೆಯ ಕೊಠಡಿಯನ್ನು ನಮಾಜ್ ಮಾಡುವುದಕ್ಕಾಗಿ ಮೀಸಲಿಟ್ಟು ಆದೇಶ ಹೊರಡಿಸಿದ್ದರು.

ಸಿಐಡಿ ವಿಚಾರಣೆಗೆ ಸುವೇಂದು ಅಧಿಕಾರಿ ಗೈರು

ಕೋಲ್ಕತ್ತ (ಪಿಟಿಐ): ಅಂಗರಕ್ಷಕ ಸಾವಿಗೀಡಾದ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಸಿಐಡಿ ವಿಚಾರಣೆಗೆ ಗೈರು ಹಾಜರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಂಗರಕ್ಷಕರಾಗಿದ್ದ ಸುಭಬ್ರತಾ ಚಕ್ರವರ್ತಿ ಅವರ ಸಾವಿನ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಬಬಾನಿ ಭವನದಲ್ಲಿರುವ ಸಿಐಡಿಯ ಪ್ರಧಾನ ಕಚೇರಿಗೆ ಹಾಜರಾಗುವಂತೆ ಸುವೇಂದು ಅವರಿಗೆ ಸಿಐಡಿ ಸಮನ್ಸ್ ಜಾರಿ ಮಾಡಿತ್ತು.

ಗಿನಿ ರಾಷ್ಟ್ರದಲ್ಲಿ ಕ್ಷಿಪ್ರಕ್ರಾಂತಿ: ಅಧ್ಯಕ್ಷರ ಬಂಧನ

ಕೊನಕ್ರಿ (ಗಿನಿ) (ಎಪಿ): ಪಶ್ಚಿಮ ಆಫ್ರಿಕಾದ ಗಿನಿ ರಾಷ್ಟ್ರದಲ್ಲಿ ಬಂಡಾಯ ಎದ್ದಿರುವ ಯೋಧರು, ಅಧ್ಯಕ್ಷ ಆಲ್ಫಾ ಕೊಂಡೆ (83) ಅವರನ್ನು ಬಂಧಿಸಿದ್ದಾರೆ.

ಅಧ್ಯಕ್ಷೀಯ ಸೌಧದ ಸಮೀಪ ಹಲವು ಗಂಟೆಗಳು ಗುಂಡಿನ ಮಳೆಗರೆದಿದ್ದಾರೆ. ಕ್ಷಿಪ್ರಕ್ರಾಂತಿಯಿಂದಾಗಿ ಸರ್ಕಾರದ ವಿಸರ್ಜನೆಯಾಗಿದೆ ಎಂದು ಸರ್ಕಾರಿ ಟಿವಿ ಮಾಧ್ಯಮದಲ್ಲಿ ಪ್ರಕಟಿಸಲಾಗಿದೆ.

ಸರ್ಕಾರಿ ಟಿವಿ ಮಾಧ್ಯಮದಲ್ಲಿ ಕಾಣಿಸಿಕೊಂಡ ಸೇನೆಯ ಕರ್ನಲ್ ಮಾಮಾಡಿ ದೌಂಬೌಯಾ, ದೇಶದ ಗಡಿಗಳನ್ನು ಮುಚ್ಚಲಾಗಿದೆ ಹಾಗೂ ದೇಶದ ಸಂವಿಧಾನವು ಅಸಿಂಧುಗೊಂಡಿದೆ ಎಂದು ಪ್ರಕಟಿಸಿದ್ದಾರೆ.

ಗಿನಿಯಲ್ಲಿ ಕ್ಷಿಪ್ರಕ್ರಾಂತಿಯ ಬಳಿಕ ಸೇನಾಪಡೆಯೊಂದಿಗೆ ಜನರ ಸಂಭ್ರಮ

ಕಠ್ಮಂಡುವಿನ ಸಿಂಧೂಪಾಲ್‌ಚೋಕ್‌ನಲ್ಲಿ ಭಾರಿ ಮಳೆಯಿಂದಾಗಿ ಉಂಟಾಗಿರುವ ಪ್ರವಾಹದಲ್ಲಿ ಜಲಾವೃತಗೊಂಡ ಮನೆಗಳು –ಎಎಫ್‌ಪಿ ಚಿತ್ರ

ನೇಪಾಳ ಪ್ರವಾಹ: 382 ಮನೆಗಳು ಜಲಾವೃತ

ಕಠ್ಮಂಡು (ಪಿಟಿಐ): ‘ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಭಾರಿ ಮಳೆಯಿಂದಾಗಿ ಉಂಟಾಗಿರುವ ಪ್ರವಾಹದಲ್ಲಿ 382 ಮನೆಗಳು ಜಲಾವೃತಗೊಂಡಿದ್ದು, ಹಲವು ವಸತಿ ಪ್ರದೇಶಗಳು ಹಾನಿಗೊಳಗಾಗಿವೆ’ ಎಂದು ಪೊಲೀಸರು ಸೋಮವಾರ ತಿಳಿಸಿದರು.

‘ಭಾನುವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಇಲ್ಲಿನ 100ಕ್ಕೂ ಹೆಚ್ಚು ಪ್ರದೇಶಗಳು ಜಲಾವೃತವಾಗಿವೆ. ಕಳೆದ ರಾತ್ರಿ ನೇಪಾಳ ಪೊಲೀಸ್ ಪಡೆ, ಶಸ್ತ್ರಾಸ್ತ್ರ ಪೊಲೀಸ್ ಪಡೆ, ನೇಪಾಳ ಸೇನೆಯು 138 ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದೆ’ ಎಂದು ಮೆಟ್ರೊಪಾಲಿಟನ್ ಪೊಲೀಸ್ ಕಚೇರಿಯ ವಕ್ತಾರ ಸುಶೀಲ್ ಸಿಂಗ್ ರಾಥೋರ್ ಅವರು ಹೇಳಿದರು.

‘ಕಠ್ಮಂಡುವಿನಲ್ಲಿ ನಾಲ್ಕು ಗಂಟೆಗಳಲ್ಲಿ 105 ಮಿ.ಮೀ ಮಳೆಯಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅಮೆರಿಕ ಪ್ರವಾಹ ಭಾರತದ ಇಬ್ಬರು ನಾಪತ್ತೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ನ್ಯೂಜೆರ್ಸಿಯಲ್ಲಿ ಇಡಾ ಚಂಡಮಾರುತದಿಂದ ಸಂಭವಿಸಿದ ಭಾರಿ ಪ್ರವಾಹದಲ್ಲಿ ಭಾರತೀಯ ಸಂಜಾತರಾದ ಇಬ್ಬರು ನಾಪತ್ತೆಯಾಗಿದ್ದಾರೆ. ಇವರ ಪತ್ತೆಗೆ ಡ್ರೋನ್ ಮತ್ತು ಬೋಟ್‌ಗಳ ಮೂಲಕ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ನಿಧಿ ರಾಣಾ (18) ಮತ್ತು ಆಯುಷ್ ರಾಣಾ (21) ನಾಪತ್ತೆಯಾದವರು. ಆಯುಷ್ ಅವರ ಕಾರು ಬುಧವಾರ ಪ್ರವಾಹದಲ್ಲಿ ಸಿಲುಕಿಕೊಂಡಿತ್ತು. ಅವರು ಕಾಣಿಸಿಕೊಂಡಿದ್ದು ಅದೇ ಕೊನೆ ದಿನ ಎಂದು ‘ನಾರ್ಥಜೆರ್ಸಿ.ಕಾಮ್’ ವರದಿ ಮಾಡಿದೆ.

‘ಎರಡು ಬೋಟ್‌ಗಳು ಮತ್ತು ಮೂರು ಡ್ರೋನ್‌ಗಳನ್ನು ಶೋಧ ಕಾರ್ಯಾಚರಣೆಗೆ ಬಳಸಲಾಗಿದೆ. ರಕ್ಷಣಾ ತಂಡಗಳು ಮೋರಿಯಲ್ಲೂ ಶೋಧ ನಡೆಸಿವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಂಡಮಾರುತದಿಂದಾಗಿ ಇದುವರೆಗೆ 40ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ.

ಆಗಸ್ಟ್‌ನಲ್ಲಿ ಚಿನ್ನ ಆಮದು ಎರಡು ಪಟ್ಟು ಹೆಚ್ಚಳ

ಮುಂಬೈ (ರಾಯಿಟರ್ಸ್): ಚಿನ್ನದ ಆಮದು ಪ್ರಮಾಣವು ಆಗಸ್ಟ್‌ನಲ್ಲಿ ಎರಡು ಪಟ್ಟು ಹೆಚ್ಚಾಗಿದ್ದು, ಐದು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಚಿನ್ನದ ಬೆಲೆ ಇಳಿಕೆ ಆಗಿರುವುದರಿಂದ ಹಾಗೂ ಹಬ್ಬದ ಋತುವಿನ ಬೇಡಿಕೆಯನ್ನು ಪೂರೈಸಲು ವ್ಯಾಪಾರಿಗಳು ಹೆಚ್ಚಿನ ಖರೀದಿ ನಡೆಸಿದ್ದಾರೆ. ಭಾರತವು 2020ರ ಆಗಸ್ಟ್‌ನಲ್ಲಿ 63 ಟನ್ ಚಿನ್ನ ಆಮದು ಮಾಡಿಕೊಂಡಿತ್ತು. ಆಮದು ಪ್ರಮಾಣವು 2021ರ ಆಗಸ್ಟ್‌ನಲ್ಲಿ 121 ಟನ್‌ಗೆ ಏರಿಕೆ ಆಗಿದೆ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೌಲ್ಯದ ಲೆಕ್ಕದಲ್ಲಿ ₹ 27,047 ಕೋಟಿಗಳಿಂದ ₹ 48,977 ಕೋಟಿಗಳಿಗೆ ಏರಿಕೆ ಆಗಿದೆ.

ಚಿನ್ನದ ಆಮದು ಹೆಚ್ಚಾಗುವುದರಿಂದ ದೇಶದ ವ್ಯಾಪಾರ ಕೊರತೆ ಅಂತರ ಮತ್ತು ರೂಪಾಯಿ ಮೇಲೆ ಒತ್ತಡ ಹೆಚ್ಚುವ ಅಂದಾಜು ಮಾಡಲಾಗಿದೆ.

ಬೆಲೆ ಹೆಚ್ಚಿಸಿದ ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಕಂಪನಿಯು ಸೆಲೆರಿಯೊ ಹೊರತುಪಡಿಸಿ ಇತರ ಎಲ್ಲ ಮಾದರಿ ಕಾರುಗಳ ಬೆಲೆಯನ್ನು ಗರಿಷ್ಠ ಶೇಕಡ 1.9ರವರೆಗೆ ಹೆಚ್ಚಿಸಿರುವುದಾಗಿ ಸೋಮವಾರ ಹೇಳಿದೆ. ಬೆಲೆ ಹೆಚ್ಚಳವು ತಕ್ಷಣದಿಂದ ಜಾರಿಗೆ ಬಂದಿದೆ.

ವಾಹನ ತಯಾರಿಕಾ ವೆಚ್ಚ ಹೆಚ್ಚಳ ಆಗಿರುವುದರ ಪರಿಣಾಮವಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಮಾರುತಿ ಸುಜುಕಿಯು ಈ ವರ್ಷದಲ್ಲಿ ಮೂರನೆಯ ಬಾರಿ ಬೆಲೆ ಹೆಚ್ಚಳ ಮಾಡಿದೆ.

ಜನವರಿ ಮತ್ತು ಏಪ್ರಿಲ್‌ನಲ್ಲಿ ಕಂಪನಿಯು ಕಾರು ಬೆಲೆ ಹೆಚ್ಚಿಸಿತ್ತು. ಮೂರನೆಯ ಬಾರಿಗೆ ಆಗಿರುವ ಹೆಚ್ಚಳದಿಂದಾಗಿ ಒಟ್ಟು ಶೇ 3.5ರಷ್ಟು ಬೆಲೆ ಏರಿಕೆಯಾಗಿದೆ.

ಆರೋಗ್ಯ ಕಾರ್ಯಕರ್ತರೊಂದಿಗೆ ಪ್ರಧಾನಿ ಮೋದಿ ಸಂವಾದ

‘ನಿತ್ಯ 1.25 ಕೋಟಿ ಲಸಿಕೆ ನೀಡಿಕೆ’

ಶಿಮ್ಲಾ (ಪಿಟಿಐ): ‘ಭಾರತದಲ್ಲಿ ಪ್ರತಿ ನಿತ್ಯ 1.25 ಕೋಟಿ ಡೋಸ್‌ಗಳಷ್ಟು ಕೋವಿಡ್ ಲಸಿಕೆ ನೀಡುತ್ತಿದ್ದು, ಇದು ವಿಶ್ವದ ಹಲವು ರಾಷ್ಟ್ರಗಳ ಒಟ್ಟು ಜನಸಂಖ್ಯೆಗಿಂತ ಹೆಚ್ಚು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸಂಚಾರ–ಸಾರಿಗೆ ಸೌಲಭ್ಯಗಳ ಸಮಸ್ಯೆಯ ನಡುವೆಯೂ ಹಿಮಾಚಲ ಪ್ರದೇಶ ಸರ್ಕಾರ ಅರ್ಹ ಜನರಿಗೆ ಕೋವಿಡ್ ಲಸಿಕೆ ನೀಡುವ ಮೂಲಕ, ದೇಶದ ಮೊದಲ ‘ಚಾಂಪಿಯನ್’ ಆಗಿದೆ ಎಂದರು.

ಸೋಮವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಹಿಮಾಚಲ ಪ್ರದೇಶ ರಾಜ್ಯದ ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಲಸಿಕೆ ಪಡೆದಿರುವ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಪ್ರಧಾನಿ, ಗುಡ್ಡಗಾಡು ರಾಜ್ಯದಲ್ಲಿ ನಡೆದಿರುವ ಕೋವಿಡ್ ಲಸಿಕೆ ಕಾರ್ಯಕ್ರಮದ ಪ್ರಗತಿಯನ್ನು ಶ್ಲಾಘಿಸಿದರು.

‘ಕಾಲಿನ ಮೂಳೆ ಮುರಿದಿದ್ದರೂ, ಜನರಿಗೆ ಲಸಿಕೆ ನೀಡುವುದನ್ನು ತಪ್ಪಿಸದ ಉನಾ ಪಟ್ಟಣದ ಆರೋಗ್ಯ ಕಾರ್ಯಕರ್ತೆ ಕಾರ್ಮೋದೇವಿಯವರ ಕಾರ್ಯವನ್ನು ಮೋದಿ ಇದೇ ವೇಳೆ ಶ್ಲಾಘಿಸಿದರು. ಇಲ್ಲಿವರೆಗೆ ನಾನು 22,500 ಡೋಸ್‌ಗಳಷ್ಟು ಲಸಿಕೆ ನೀಡಿದ್ದೇನೆ’ ಎಂದು ಕಾರ್ಮೋದೇವಿಯವರು ತಿಳಿಸಿದರು.

ಕೋವಿಡ್: ಸಾವಿನ ಸಂಖ್ಯೆ 167 ದಿನಗಳಲ್ಲೇ ಕನಿಷ್ಠ

ನವದೆಹಲಿ (ಪಿಟಿಐ): ‘ದೇಶದಲ್ಲಿ ಸೋಮವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ಹೊಸದಾಗಿ 38,948 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 3,30,27,621ಕ್ಕೆ ಏರಿಕೆಯಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

‘ಇದೇ ಅವಧಿಯಲ್ಲಿ 219 ಮಂದಿ ಮೃತಪಟ್ಟಿದ್ದು, ಇದು 167 ದಿನಗಳಲ್ಲಿ ವರದಿಯಾದ ಅತಿ ಕಡಿಮೆ ಸಾವಿನ ಸಂಖ್ಯೆಯಾಗಿದೆ. ಒಟ್ಟು ಸಾವಿನ ಸಂಖ್ಯೆ 4,40,752ಕ್ಕೆ ಏರಿದೆ. ದೇಶದಲ್ಲಿ ಸಾವಿನ ಪ್ರಮಾಣವು ಶೇಕಡ 1.33ಕ್ಕೆ ಇಳಿದಿದೆ’ ಎಂದು ತಿಳಿಸಲಾಗಿದೆ.

‘ದೇಶದಲ್ಲಿ ಸಕ್ರಿಯ ಪ್ರಕರಣಗಳು 4,04,874ಕ್ಕೆ ಇಳಿಕೆಯಾಗಿದ್ದು, ಇದು ಒಟ್ಟು ಪ್ರಕರಣಗಳ ಪೈಕಿ ಶೇಕಡ 1.23ರಷ್ಟು ಪಾಲನ್ನು ಹೊಂದಿದೆ. ದೇಶದಲ್ಲಿ ಚೇತರಿಕೆ ಪ್ರಮಾಣ ಶೇಕಡ 97.44ರಷ್ಟಿದೆ’ ಎಂದು ಮಾಹಿತಿ ನೀಡಿದೆ.

ಮಿಂಚಿದ ಬೂಮ್ರಾ, ಉಮೇಶ್, ಶಾರ್ದೂಲ್: ಭಾರತಕ್ಕೆ ಭರ್ಜರಿ ಜಯ

ಬೌಲರ್‌ಗಳ ಗೆಲುವಿನ ಕಾಣಿಕೆ

ಲಂಡನ್ (ಎಎಫ್‌ಪಿ): ಆರಂಭಿಕ ಜೋಡಿ ಶತಕದ ಜೊತೆಯಾಟವಾಡಿ ಆತಂಕ ಮೂಡಿಸಿದರೂ ವಿರಾಟ್ ಕೊಹ್ಲಿ ಬಳಗ ವಿಚಲಿತಗೊಳ್ಳಲಿಲ್ಲ. ವೇಗ ಮತ್ತು ಸ್ಪಿನ್ ದಾಳಿಯ ಮೂಲಕ ಎದುರಾಳಿಗಳನ್ನು ಕಂಗೆಡಿಸಿದ ಭಾರತ ತಂಡ ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ 157 ರನ್‌ಗಳ ಗೆಲುವು ಸಾಧಿಸಿತು.

ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಬಿಟ್ಟುಕೊಟ್ಟರೂ ಎರಡನೇ ಇನಿಂಗ್ಸ್‌ನಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ ಭಾರತ ಮುಂದಿಟ್ಟ 368 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆತಿಥೇಯ ತಂಡ 92.2 ಓವರ್‌ಗಳಲ್ಲಿ 210 ರನ್‌ಗಳಿಗೆ ಪತನಗೊಂಡಿತು. ಐದು ಪಂದ್ಯಗಳ ಸರಣಿಯಲ್ಲಿ ಭಾರತ 2–1 ಮುನ್ನಡೆ ಸಾಧಿಸಿತು.

4ನೇ ದಿನವಾದ ಭಾನುವಾರ 77 ರನ್ ಸೇರಿಸಿದ್ದ ಆರಂಭಿಕ ಜೋಡಿ ರೋರಿ ಬರ್ನ್ಸ್ ಮತ್ತು ಹಸೀಬ್ ಹಮೀದ್ ಸೋಮವಾರ ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು. ಅರ್ಧಶತಕ ಗಳಿಸಿದ ರೋರಿ ಬರ್ನ್ಸ್ ವಿಕೆಟ್ ಉರುಳಿಸಿ ಶಾರ್ದೂಲ್ ಠಾಕೂರ್ ಮಹತ್ವದ ತಿರುವು ನೀಡಿದರು. ನಂತರ ಎಡಗೈ ಸ್ಪಿನ್ನರ್ ಜಡೇಜ ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ಕರಾಮತ್ತು ತೋರಿದರು. ಡೇವಿಡ್ ಮಲಾನ್ ರನ್ ಔಟ್ ಆದದ್ದು ಇಂಗ್ಲೆಂಡ್ ಪಾಲಿಗೆ ದುಬಾರಿಯಾಯಿತು.

147 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಭೋಜನಕ್ಕೆ ತೆರಳಿದ ಇಂಗ್ಲೆಂಡ್‌ಗೆ ವಿರಾಮದ ನಂತರ ಶಾರ್ದೂಲ್ ಮತ್ತೊಮ್ಮೆ ಪೆಟ್ಟು ನೀಡಿದರು. ನಾಯಕ ಜೋ ರೂಟ್ ವಿಕೆಟ್ ಉರುಳಿಸಿ ಸಂಭ್ರಮಿಸಿದರು.

ಮೂರಂಕಿ ದಾಟಿದ ಬೂಮ್ರಾ: ಭಾನುವಾರ 43 ರನ್ ಗಳಿಸಿದ್ದ ಹಸೀಬ್ ಅವರ ಆಫ್‌ಸ್ಟಂಪ್ ಉರುಳಿಸುವ ಮೂಲಕ ಜಡೇಜ ವಾಪಸ್ ಕಳುಹಿಸಿದರು. ಒಲಿ ಪೋಪ್ ಅವರು ಜಸ್‌ಪ್ರೀತ್ ಬೂಮ್ರಾ ಹಾಕಿದ ರಿವರ್ಸ್ ಸ್ವಿಂಗ್‌ಗೆ ಬಲಿಯಾದರು. ಈ ಮೂಲಕ ಬೂಮ್ರಾ ವಿಕೆಟ್ ಗಳಿಕೆಯಲ್ಲಿ ಮೂರಂಕಿ ಮೊತ್ತ ದಾಟಿದರು. ತಮ್ಮ ಮುಂದಿನ ಓವರ್‌ನಲ್ಲಿ ಜಾನಿ ಬೆಸ್ಟೊ ಅವರನ್ನು ವಾಪಸ್ ಕಳುಹಿಸಿದರು. ಕೊನೆಯ ಮೂರು ವಿಕೆಟ್‌ಗಳು ಉಮೇಶ್ ಯಾದವ್ ಪಾಲಾದವು.

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 191 (61.3ಓವರ್)
ಇಂಗ್ಲೆಂಡ್ (ಮೊದಲ ಇನಿಂಗ್ಸ್) 290 (84 ಓವರ್)
ಭಾರತ (ಎರಡನೇ ಇನಿಂಗ್ಸ್) 466 (148.2 ಓವರ್)
ಇಂಗ್ಲೆಂಡ್ (ಎರಡನೇ ಇನಿಂಗ್ಸ್) 210 (92.2 ಓವರ್) (ಭಾನುವಾರ 32 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 77)
ಬರ್ನ್ಸ್ ಸಿ ಪಂತ್ ಬಿ ಶಾರ್ದೂಲ್ 50 (125 ಎ, 4x5), ಹಮೀದ್ ಬಿ ಜಡೇಜ 63 (193 ಎ, 4x6), ಮಲಾನ್ ರನ್ ಔಟ್ (ಮಯಂಕ್ (ಬದಲಿ)/ಪಂತ್) 5 (33 ಎ), ರೂಟ್ ಬಿ ಠಾಕೂರ್ 36 (78 ಎ, 4x3), ಪೋಪ್ ಬಿ ಬೂಮ್ರಾ 2 (11 ಎ), ಬೆಸ್ಟೊ ಬಿ ಬೂಮ್ರಾ 0 (4 ಎ), ಮೋಯಿನ್ ಸಿ ಸೂರ್ಯಕುಮಾರ್ (ಬದಲಿ) ಬಿ ಜಡೇಜ 0 (4 ಎ), ವೋಕ್ಸ್ ಸಿ ರಾಹುಲ್ ಬಿ ಯಾದವ್ 18 (47 ಎ, 4x1), ಕ್ರೇಗ್ ಬಿ ಯಾದವ್ 10 (29 ಎ, 4x1), ರಾಬಿನ್ಸನ್ ಔಟಾಗದೆ 10 (32 ಎ, 4x2), ಆ್ಯಂಡರ್ಸನ್ ಸಿ ಪಂತ್ ಬಿ ಯಾದವ್ 2 (5 ಎ)
ಇತರೆ (ಬೈ 2, ಲೆಗ್‌ಬೈ 5, ನೋಬಾಲ್ 7) 14
ವಿಕೆಟ್ ಪತನ: 1-100 (ರೋರಿ ಬರ್ನ್ಸ್, 40.4), 2-120 (ಡೇವಿಡ್ ಮಲಾನ್, 53.1), 3-141 (ಹಸೀಬ್ ಹಮೀದ್ 61.3), 4-146 (ಒಲಿ ಪೋಪ್, 64.5), 5-146 (ಜಾನಿ ಬೆಸ್ಟೊ, 66.3), 6-147 (ಮೋಯಿನ್ ಅಲಿ, 67.2), 7-182 (ಜೋ ರೂಟ್, 80.1), 8-193 (ಕ್ರಿಸ್ ವೋಕ್ಸ್, 84.1), 9-202 (ಕ್ರೇಗ್ ಓವರ್ಟನ್, 88.5), , 10-210 (ಜೇಮ್ಸ್ ಆ್ಯಂಡರ್ಸನ್, 92.2)
ಬೌಲಿಂಗ್: ಉಮೇಶ್ ಯಾದವ್ 18.2–2–60–3, ಜಸ್‌ಪ್ರೀತ್ ಬೂಮ್ರಾ 22–9–27–2, ರವೀಂದ್ರ ಜಡೇಜ 30–11–50–2, ಮೊಹಮ್ಮದ್ ಸಿರಾಜ್ 14–0–44–0, ಶಾರ್ದೂಲ್ ಠಾಕೂರ್ 8–1–22–2

ಫಲಿತಾಂಶ: ಭಾರತಕ್ಕೆ 157 ರನ್‌ಗಳ ಜಯ; ಸರಣಿಯಲ್ಲಿ 2–1 ಮುನ್ನಡೆ. ಕೊನೆಯ ಪಂದ್ಯ ಸೆ.10ರಿಂದ, ಮ್ಯಾಂಚೆಸ್ಟರ್‌ನಲ್ಲಿ.

ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್‌ನಲ್ಲಿ ಗೆಲುವು ಸಾಧಿಸಿದ ಭಾರತದ ಆಟಗಾರರ ಸಂಭ್ರಮ– ರಾಯಿಟರ್ಸ್ ಚಿತ್ರ

ವಿಮಾನ ನಿಲ್ದಾಣದಲ್ಲಿ ಬೆಳ್ಳಿ ಪದಕ ಪ್ರದರ್ಶಿಸಿದ ಸುಹಾಸ್ ಯತಿರಾಜ್

ಆರ್ಚರಿಯಲ್ಲಿ ಕಂಚಿನ ಪದಕ ಗೆದ್ದ ಹರ್ವಿಂದರ್ ಸಿಂಗ್ ಅವರೊಂದಿಗೆ ಸಂಭ್ರಮಿಸಿದ ತಂದೆ –ಪಿಟಿಐ ಚಿತ್ರಗಳು

ಪ್ಯಾರಾ ಅಥ್ಲೀಟ್ಸ್‌ಗೆ ಹೃದಯಸ್ಪರ್ಶಿ ಸ್ವಾಗತ

ಹೂವಿನ ಹಾರ ಹಾಕಿ ಅಭಿನಂದಿಸಿದ ಅಭಿಮಾನಿಗಳು, ಕುಟುಂಬದ ಸದಸ್ಯರು

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿದ ಭಾರತ ಪ್ಯಾರಾ ಅಥ್ಲೀಟ್ಸ್ ಸೋಮವಾರ ತವರಿಗೆ ವಾಪಸಾದರು. ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಅವರಿಗೆ ಹೃತ್ಪೂರ್ವಕ ಸ್ವಾಗತ ಕೋರಲಾಯಿತು.

ಭಾರತದ ಕೊನೆಯ ತಂಡದಲ್ಲಿ ಬ್ಯಾಡ್ಮಿಂಟನ್ ಆಟಗಾರರು, ಶೂಟರ್‌ಗಳು ಮತ್ತು ರಿಕರ್ವ್ ಆರ್ಚರಿ ತಂಡದವರು ಇದ್ದರು. ಅವರು ಬರುವ ವಿವರ ತಿಳಿದ ಅಭಿಮಾನಿಗಳು ಮತ್ತು ಸಂಬಂಧಿಕರು ಹೂವಿನ ಹಾರ ಹಾಕಿ ಅಭಿನಂದಿಸಿದರು. ವಿಮಾನ ನಿಲ್ದಾಣದ ಸಿಬ್ಬಂದಿ ಕೂಡ ಅವರೊಂದಿಗೆ ಸಂಭ್ರಮಿಸಿದರು. ನಂತರ ತೆರೆದ ನಂತರ ತೆರೆದ ವಾಹನದಲ್ಲಿ ಕರೆದುಕೊಂಡು ಹೋಗಲಾಯಿತು.

ಭಾರತ ಈ ಬಾರಿ ಗರಿಷ್ಠ ಸಾಧನೆ ಮಾಡಿದೆ. ಐದು ಚಿನ್ನ ಸೇರಿದಂತೆ ಒಟ್ಟು 19 ಪದಕಗಳನ್ನು ಗೆದ್ದುಕೊಂಡಿರುವ ಭಾರತ ಪದಕ ಪಟ್ಟಿಯಲ್ಲಿ 24ನೇ ಸ್ಥಾನ ಗಳಿಸಿದೆ. ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಪದಕ ಗೆದ್ದ ಐಎಎಸ್ ಅಧಿಕಾರಿ, ಕನ್ನಡಿಗ ಸುಹಾಸ್ ಯತಿರಾಜ್, ಶೂಟಿಂಗ್‌ನಲ್ಲಿ ಚಿನ್ನ ಮತ್ತು ಕಂಚು ಗಳಿಸಿದ 19 ವರ್ಷದ ಅವನಿ ಲೇಖರಾ, ಚಿನ್ನ ಗೆದ್ದ ಬ್ಯಾಡ್ಮಿಂಟನ್ ಪಟುಗಳಾದ ಪ್ರಮೋದ್ ಭಗತ್ ಮತ್ತು ಕೃಷ್ಣ ನಗಾರ್, ಕಂಚು ಗಳಿಸಿದ ಮನೋಜ್ ಸರ್ಕಾರ್, ಶೂಟರ್‌ಗಳಾದ ಸಿಂಘರಾಜ್ ಅಡಾನ ಮತ್ತು ಮನೀಷ್ ನರ್ವಾಲ್ ಸಂಜೆ ಬಂದಿಳಿದರು. ಟೇಬಲ್ ಟೆನಿಸ್‌ನಲ್ಲಿ ಬೆಳ್ಳಿ ಗೆದ್ದ ಭಾವಿನಾ ಪಟೇಲ್ ಬೆಳಿಗ್ಗೆ ಬಂದಿಳಿದರು. ಗುರುವಾರ ಎಲ್ಲ ಅಥ್ಲೀಟ್‌ಗಳು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗುವ ಸಾಧ್ಯತೆ ಇದೆ.

ಪ್ರಮೋದ್ ಭಗತ್ ಚಿನ್ನದ ಸಂಭ್ರಮ

ಪದಕಗಳೊಂದಿಗೆ ಅವನಿ ಲೇಖರಾ

ಬದುಕು ‘ಸುಂದರ’ಗೊಳಿಸಿದ ಕ್ರೀಡೆ

ನವದೆಹಲಿ (ಪಿಟಿಐ): ಅಂಗ ಊನಗೊಂಡು ತೊಂದರೆಗೊಳಗಾಗಿದ್ದ ಸುಂದರ್ ಸಿಂಗ್ ಗುರ್ಜಾರ್ ಒಮ್ಮೆ ಆತ್ಮಹತ್ಯೆ ಚಿಂತನೆಯನ್ನೂ ಮಾಡಿದ್ದರು. ಆದರೆ ಕ್ರೀಡೆಯು ಅವರಲ್ಲಿ ಬದುಕುವ ಆಸೆ ಮೂಡುವಂತೆ ಮಾಡಿತು. ಈ ಪ್ರೇರಣೆ, ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ವರೆಗೂ ಅವರ ಕೈ ಹಿಡಿಯಿತು.

ಟೋಕಿಯೊದಲ್ಲಿ ಚೊಚ್ಚಲ ಕಂಚಿನ ಪದಕ ಗೆದ್ದಿರುವ ಗುರ್ಜರ್ ಸೋಮವಾರ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಮ್ಮ ಬದುಕಿನ ಕಥೆಯನ್ನು ಬಿಚ್ಚಿಟ್ಟರು. ಊರ ಜನರು ಅದರಲ್ಲೂ ವಿಶೇಷವಾಗಿ ಕೋಚ್ ಮಹಾವೀರ್ ಸೈನಿ ತಮ್ಮ ಬಾಳಿನಲ್ಲಿ ಹೊಸ ಬೆಳಕು ಮೂಡಿಸಿದರು ಎಂದರು.

ಭಾವಿನಾಗೆ ನೆರವಾದ ‘ರೋಬೋಟ್’

ಕೋವಿಡ್‌ನಿಂದಾಗಿ ಅಭ್ಯಾಸಕ್ಕೆ ಅಡ್ಡಿಯಾದಾಗ ಭಾವಿನಾ ಬೆನ್ ಪಟೇಲ್ ಅವರ ಕೈ ಹಿಡಿದದ್ದು ರೋಬೋಟ್. ಪ್ಯಾರಾಲಿಂಪಿಕ್ಸ್‌ನ ಟೇಬಲ್ ಟೆನಿಸ್‌ನಲ್ಲಿ ಐತಿಹಾಸಿಕ ಬೆಳ್ಳಿ ಪದಕ ಗೆದ್ದಿರುವ ಭಾವಿನಾ ಬೆನ್ ಅವರಿಗೆ ಭಾರತ ಕ್ರೀಡಾ ಪ್ರಾಧಿಕಾರ ಅಭ್ಯಾಸಕ್ಕಾಗಿ ರೋಬೋಟ್ ನೆರವು ಒದಗಿಸಿತ್ತು. ಇದು ತಮ್ಮ ಭವಿಷ್ಯವನ್ನೇ ಬದಲಿಸಿತು ಎಂದು ಅವರು ಹೇಳಿದರು.

ಅಥ್ಲೆಟಿಕ್ಸ್: ರೋಹಿತ್, ರೀನಾ ವೇಗದ ಓಟಗಾರರು

ಪ್ರಜಾವಾಣಿ ವಾರ್ತೆ

ಉಡುಪಿ: ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಆರಂಭವಾದ ರಾಜ್ಯಮಟ್ಟದ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 100 ಮೀಟರ್ಸ್ ಓಟದಲ್ಲಿ ಉಡುಪಿಯ ರೋಹಿತ್ ಮತ್ತು ಮೈಸೂರಿನ ರೀನಾ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದ ಪ್ರಥಮ ಸ್ಥಾನ ಗಳಿಸಿದರು.

ಪುರುಷರ ವಿಭಾಗದಲ್ಲಿ ರೋಹಿತ್ 10.94 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಸಿ.ಟಿ ಅಂಡ್ ಎಫ್‌ನ ರಾಧಾಕೃಷ್ಣ ದ್ವಿತೀಯ, ಮೈಸೂರಿನ ರಾಧೇಶ್ ತೃತೀಯ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ರೀನಾ 12.1 ಸೆಕೆಂಡುಗಳಲ್ಲಿ ಅಂತಿಮ ಗೆರೆ ತುಳಿದರು. ಕೆನರಾ ಬ್ಯಾಂಕ್‌ನ ಎಂ.ಜಿ. ಪದ್ಮಿನಿ ದ್ವಿತೀಯ ಮತ್ತು ಎ.ಎಸ್.ಅಂಜು ಮೂರನೇ ಸ್ಥಾನ ಗಳಿಸಿದರು.

ಫಲಿತಾಂಶಗಳು: ಪುರುಷರ 400 ಮೀ. ಓಟ: ಗೌರಿ ಶಂಕರ್(ಆಳ್ವಾಸ್)-1. ಕಾಲ: 48.9 ಸೆ, ಗುರುಪ್ರಸಾದ್ (ಮೈಸೂರು)-2, ದೇವಯ್ಯ (ಆಳ್ವಾಸ್)-3; 1,500 ಮೀ. ಓಟ: ಬಿ.ಕೆ.ಕುಮಾರಸ್ವಾಮಿ(ಕೆಎಸ್‌ಪಿ)-1. ಕಾಲ: 4 ನಿ 10.3ಸೆ, ಕೆ.ದೀಪ್‌ರಾಜ್ (ಮೈಸೂರು)-2, ಲಕ್ಷ್ಮಣ್ (ಧಾರವಾಡ)-3; 10,000 ಮೀ:ಎನ್.ಡಿ.ಸುನಿಲ್ (ಧಾರವಾಡ)-1. ಕಾಲ: 31 ನಿ 28.2 ಸೆ, ಅನಿಲ್ ಕುಮಾರ್ (ಆಳ್ವಾಸ್)-2, ಲಕ್ಷ್ಮೀಶ (ಮೈಸೂರು)-3; ಹೈಜಂಪ್: ಎಸ್.ಹರ್ಷಿತ್ (ಬೆಂಗಳೂರು ಸ್ಪೋರ್ಟ್ಸ್ ಕ್ಲಬ್)-1. ಅಂತರ: 2 ಮೀ, ಲೋಕೇಶ್ (ಮೈಸೂರು)-2, ವೆಂಕಟೇಶ್ (ಆಳ್ವಾಸ್)-3; ಜಾವೆಲಿನ್ ಥ್ರೋ: ಆಕಾಶ್ ಗಂಗಾಧರ್ (ಬೆಳಗಾವಿ)-1. ದೂರ: 49.7 ಮೀ, ಚಿಕ್ಕತಿಮ್ಮಯ್ಯ (ತುಮಕೂರು)-2, ಶ್ರೀನಿವಾಸ್ (ಆಳ್ವಾಸ್)-3; 110 ಮೀ. ಹರ್ಡಲ್ಸ್: ಶ್ರೀಕಾಂತ್ ಮಧ್ಯಸ್ಥ (ಆಳ್ವಾಸ್)-1, ಶ್ರವಣ್ ಉಳ್ಳಾಲ್ (ದಕ್ಷಿಣ ಕನ್ನಡ)-2, ಕೆ.ಹರೀಶ್ (ಬೆಂಗಳೂರು)-3.

ಮಹಿಳೆಯ 400 ಮೀ ಓಟ: ಇಂಚರ (ಕೆನರಾ ಬ್ಯಾಂಕ್)-1. ಕಾಲ: 54.7 ಸೆ, ಲಿಖಿತಾ (ಆಳ್ವಾಸ್)-2; 1,500 ಮೀ ಓಟ: ದೀಕ್ಷಾ (ಆಳ್ವಾಸ್)-1. ಕಾಲ: 5 ನಿ 9.3 ಸೆ, ಎಲ್.ಡಿ.ಪ್ರಿಯಾ (ಆಳ್ವಾಸ್)-2, ಮರಿಯಾ (ದಕ್ಷಿಣ ಕನ್ನಡ)-3; 10,000 ಮೀ: ಲಕ್ಷ್ಮಿ(ಆಳ್ವಾಸ್)-1. ಕಾಲ: 36ನಿ 24 ಸೆ, ಮಾಲಾಶ್ರೀ (ಆಳ್ವಾಸ್)-2, ಧನುಶಾ (ಆಳ್ವಾಸ್)-3; ಲಾಂಗ್‌ಜಂಪ್: ಐಶ್ವರ್ಯಾ (ಆಳ್ವಾಸ್)-1. ಅಂತರ: 5.20 ಮೀ, ಯಾಸ್ಮಿನ್ (ಆಳ್ವಾಸ್)-2, ನಿವೇದಿತಾ (ಬೆಂಗಳೂರು)-3; ಹೈಜಂಪ್: ಚೈತ್ರಾ (ಆಳ್ವಾಸ್)-1. ಎತ್ತರ: 1.55 ಮೀ, ಸಮ್ರೀನ್ ಕೆ.ಶೇಖ್ (ಆಳ್ವಾಸ್)-2; ಡಿಸ್ಕಸ್ ಥ್ರೋ: ನಿವೇದಿತಾ ಸಾವಂತ್ (ಕಾರವಾರ)-1. ದೂರ: 40.52 ಮೀ, ಪಿ.ರೋಷನಿ (ಚಾಮರಾಜನಗರ)-2; ಜಾವೆಲಿನ್ ಥ್ರೋ: ಎಂ.ಎನ್.ಪಾರ್ವತಿ (ಆಳ್ವಾಸ್)-1. ದೂರ: 31.60 ಮೀ, ಪೂಜಾ (ಮೈಸೂರು)-2; 110 ಮೀ. ಹರ್ಡಲ್ಸ್: ಮೇದಾ ರಾಜೇಶ್ ಕಾಮತ್ (ಫ್ಯೂಷನ್ ಅಥ್ಲೆಟಿಕ್ಸ್ ಕ್ಲಬ್)-1. ಕಾಲ: 14.33 ಸೆ, ನಿವೇದಿತಾ (ಬೆಂಗಳೂರು)-2.

23 ವರ್ಷದೊಳಗಿನ ಮಹಿಳೆಯರು: 100 ಮೀ ಓಟ: ಆರ್.ಹರ್ಷಿಣಿ (ಮೈಸೂರು)-1. ಕಾಲ: 12.69 ಸೆ, ಮೋನಿಕಾ ರುಕ್ಮಯ್ಯ ಗೌಡ (ಡಿವೈಇಎಸ್)-2, ಅಮುದಾ (ಬೆಂಗಳೂರು)-3; 1,500 ಮೀ: ರೇಖಾ ಪೈರೋಜಿ(ಆಳ್ವಾಸ್)-1. ಕಾಲ: 5ನಿ 10.4 ಸೆ, ಪಿ.ಚೈತ್ರಾ (ಆಳ್ವಾಸ್)-2, ಪ್ರತೀಕ್ಷಾ (ಉಡುಪಿ)-3; 10,000 ಮೀ: ಚೈತ್ರಾ ದೇವಾಡಿಗ (ಆಳ್ವಾಸ್)-1. ಕಾಲ: 39 ನಿ 19.1 ಸೆ, ಶಾಹಿನ್ (ಧಾರವಾಡ)-2, ನಾಗಶ್ರೀ (ಶಿವಮೊಗ್ಗ)-3; ಲಾಂಗ್ ಜಂಪ್: ಶ್ರೀವೇವಿಕಾ (ಆಳ್ವಾಸ್)-1. ಅಂತರ: 5.76ಮೀ, ಐಶ್ವರ್ಯಾ (ಬೆಳಗಾವಿ)-2, ಅಂಕಿತಾ (ಆಳ್ವಾಸ್)-3; ಹೈಜಂಪ್: ಎನ್. ಪಾವನಾ (ಆಳ್ವಾಸ್)-1. ಎತ್ತರ: 1.70 ಮೀ, ಸಿಂಚನಾ (ಆಳ್ವಾಸ್)-2, ಕವನಾ (ತುಮಕೂರು)-3; ಡಿಸ್ಕಸ್ ಥ್ರೋ: ಶೃತಿ (ಆಳ್ವಾಸ್)-1. ದೂರ: 39.75 ಮೀ, ಸುಷ್ಮಾ (ಮೈಸೂರು)-2, ಬಿ.ಸುಷ್ಮಾ(ಆಳ್ವಾಸ್)-3; ಜಾವೆಲಿನ್ ಥ್ರೋ: ಕರಿಷ್ಮಾ ಸನಿಲ್ (ಉಡುಪಿ)-1. ದೂರ: 45.29 ಮೀ, ನಿಧಿ(ಉಡುಪಿ)-2, ಜೀವಿತಾ(ಆಳ್ವಾಸ್)-3; 100 ಮೀ. ಹರ್ಡಲ್ಸ್: ಚಿತ್ರಾ ದಾಸ್(ಕ್ಯಾಪ್ಟನ್ ಟ್ರ್ಯಾಕ್ ಆ್ಯಂಡ್ ಫೀಲ್ಡ್)-1. ಕಾಲ:15.8ಸೆ, ಸಿಂಧು(ಆಳ್ವಾಸ್)-2, ದೀಕ್ಷಾ(ಆಳ್ವಾಸ್)-3.

ಪುರುಷರ 100 ಮೀ ಓಟ: ಶಶಿಕಾಂತ್–1. ಕಾಲ: 10.65 ಸೆ, ಕುಶಾಲ್–2, ರಾಜ್ ಧ್ರುವ-3; 400 ಮೀ: ಎನ್. ಎಸ್.ವಿನಾಯಕ್(ಧಾರವಾಡ)-1. ಕಾಲ: 48.5 ಸೆ, ರಿನ್ಸ್ ಜೋಸೆಫ್(ಆಳ್ವಾಸ್)-2, ನಿಹಾಲ್ ಜೊಯಿಲ್(ಫ್ಯೂಷನ್)-3; 1500 ಮೀ: ನಾಗರಾಜ್(ಧಾರವಾಡ)-1. ಕಾಲ: 4ನಿ 5ಸೆ, ರೋಹಿತ್(ಬೆಂಗಳೂರು)-2, ಸುದೀಪ(ಬೆಂಗಳೂರು)-3.

ಅಲ್ಕರಾಜ್: ಅಮೆರಿಕ ಓಪನ್‌ನ ‘ಯುವ’ರಾಜ

ನ್ಯೂಯಾರ್ಕ್ (ರಾಯಿಟರ್ಸ್): ಹದಿನೆಂಟರ ಹರೆಯದ ಕಾರ್ಲೋಸ್ ಅಲ್ಕರಾಜ್ ಇಲ್ಲಿನ ಹುಲ್ಲಿನ ಅಂಗಣದಲ್ಲಿ ಮಿಂಚಿದರು. ಭಾನುವಾರ ರಾತ್ರಿ ನಡೆದ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಗೆದ್ದ ಅವರು ಟೂರ್ನಿಯ ಎಂಟರ ಘಟ್ಟ ಪ್ರವೇಶಿಸಿದ ಅತಿ ಕಿರಿಯ ಆಟಗಾರ ಎನಿಸಿಕೊಂಡರು.

ಐದು ಸೆಟ್‌ಗಳ ರೋಚಕ ಪಂದ್ಯದಲ್ಲಿ ಸ್ಪೇನ್‌ನ ಕಾರ್ಲೋಸ್ ಜರ್ಮನಿಯ ಪೀಟರ್ ಗೊಜೊವ್‌ಜಿಕ್ ವಿರುದ್ಧ 5-7, 6-1, 5-7, 6-2, 6-0ರಲ್ಲಿ ಗೆಲುವು ಸಾಧಿಸಿದರು.

1988ರ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಅಮೆರಿಕದ ಆ್ಯಂಡ್ರೆ ಅಗಾಸಿ ಈ ಸಾಧನೆ ಮಾಡಿದ ಅತಿ ಕಿರಿಯ ಆಟಗಾರ ಎನಿಸಿಕೊಂಡಿದ್ದರು. ಅಗಾಸಿಗಿಂತ ಕಾರ್ಲೋಸ್ ಎಂಟು ದಿನ ಕಿರಿಯರಾಗಿದ್ದಾರೆ. ಅವರಿಗೆ ಈಗ 18 ವರ್ಷ ನಾಲ್ಕು ತಿಂಗಳು ಪ್ರಾಯ.

ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಅಮೆರಿಕದ ಫ್ರಾನ್ಸಿಸ್ ತಿಯಾಫಿ ಅವರ ಸವಾಲು ಮೀರಿ ನಿಂತ ಫೆಲಿಕ್ಸ್ 4-6, 6-2, 7-6(6), 6-4ರಲ್ಲಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮತ್ತೊಂದು ಪಂದ್ಯದಲ್ಲಿ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಅವರು 6-3, 6-4, 6-3ರಿಂದ ಬ್ರಿಟನ್‌ನ ಡೇನಿಯಲ್ ಇವಾನ್ಸ್ ಎದುರು ಗೆದ್ದು ಎಂಟರಘಟ್ಟ ತಲುಪಿದರು.

ಏಂಜಲಿಕ್ ಕರ್ಬರ್‌ಗೆ ಆಘಾತ: ಕಳೆದ ವರ್ಷದ ಚಾಂಪಿಯನ್ ನವೊಮಿ ಒಸಾಕ ವಿರುದ್ಧ 2ನೇ ಸುತ್ತಿನಲ್ಲಿ ಜಯ ಗಳಿಸಿದ್ದ ಕೆನಡಾದ ಲೇಲ್ಲಾ ಫರ್ನಾಂಡಸ್ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಜರ್ಮನಿಯ ಏಂಜಲಿಕ್ ಕರ್ಬರ್ ವಿರುದ್ಧ 4-6, 7-6(5), 6-2ರಲ್ಲಿ ಗೆದ್ದರು.

ಕಾರ್ಲೋಸ್ ಅಲ್ಕರಾಜ್

ರಾಷ್ಟ್ರಮಟ್ಟದ ವಾಲಿಬಾಲ್ ಟೂರ್ನಿ ಅ. 8ರಿಂದ

ಚಿತ್ರದುರ್ಗ: ಮುರುಘಾ ಮಠದ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಪುರುಷ ಮತ್ತು ಮಹಿಳೆಯರ ಹೊನಲು ಬೆಳಕಿನ ರಾಷ್ಟ್ರಮಟ್ಟದ ಆಹ್ವಾನಿತ ‘ಜಮುರಾ ಕಪ್’ ವಾಲಿಬಾಲ್ ಟೂರ್ನಿ ಅಕ್ಟೋಬರ್ 8ರಿಂದ 12ರ ವರೆಗೆ ನಡೆಯಲಿದೆ ಎಂದು ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಶಿವಮೂರ್ತಿ ಮುರುಘಾ ಶರಣರು ಪೀಠಾಧ್ಯಕ್ಷರಾಗಿ 30 ವರ್ಷಗಳಾಗುತ್ತಿವೆ. ಈ ಸಂಭ್ರಮದಲ್ಲಿ ಶರಣ ಸಂಸ್ಕೃತಿ ಉತ್ಸವ ವಿಶಿಷ್ಟವಾಗಿ ರೂಪಿಸಲಾಗಿದೆ. ಇದೇ ಮೊದಲ ಬಾರಿ ರಾಷ್ಟ್ರಮಟ್ಟದ ವಾಲಿಬಾಲ್ ಟೂರ್ನಿ ಚಿತ್ರದುರ್ಗದ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ನಡೆಯಲಿದೆ’ ಎಂದು ವಿವರಿಸಿದರು.

ಶಿವಮೂರ್ತಿ ಮುರುಘಾ ಶರಣರು, ಕರ್ನಾಟಕ ವಾಲಿಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ. ನಂದಕುಮಾರ್, ಸಂಚಾಲಕ ಕೆ. ವೆಂಕಟೇಶ್, ಚಿತ್ರದುರ್ಗ ಜಿಲ್ಲಾ ವಾಲಿಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾಬು ಇದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,323
ಇಂದಿನ ಅಂತ್ಯ	17,377
▲	54
ದಿನದ ಗರಿಷ್ಠ	17,429

ವಿನಿಮಯ ದರ

$ ಡಾಲರ್	73.10
£ ಪೌಂಡ್	101.18
€ ಯುರೊ	86.70
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1395(1390)
ಸೂರ್ಯಕಾಂತಿ(ರಿಫೈನ್ಡ್)	₹1450(1450)
ಪಾಮೋಲಿನ್	₹1256 (1257)

ಕಂಪನಿಗಳ ಜಾತಕ ನೋಡುವುದು ಹೇಗೆ?

ಮದುವೆ ನಿಶ್ಚಯಕ್ಕೂ ಮುನ್ನ ಜಾತಕ ನೋಡಿ ಮುಂದುವರಿಯುವ ಸಂಪ್ರದಾಯ ಇರುವಂತೆಯೇ, ಷೇರುಪೇಟೆಯಲ್ಲಿ ಹೂಡಿಕೆಗೂ ಮುನ್ನ ಕಂಪನಿಯ ಜಾತಕ ಆಧರಿಸಿ ಹೂಡಿಕೆ ನಿರ್ಧಾರ ಮಾಡುವುದು ಬಹಳ ಮುಖ್ಯ. ಕಂಪನಿಯೊಂದರ ‘ಜಾತಕಫಲ’ ಅರಿಯದೆ ಹೂಡಿಕೆ ಮಾಡಿದರೆ ದುಡ್ಡು ಕರಗುವುದು ನಿಶ್ಚಿತ. ಕಂಪನಿಗಳ ಬಗ್ಗೆ ಮಾಹಿತಿ ಹುಡುಕುವುದು ಹೇಗೆ? ಎಲ್ಲೆಲ್ಲಿ ಆ ಮಾಹಿತಿ ಸಿಗುತ್ತದೆ ಮತ್ತು ಅದನ್ನು ಅರ್ಥೈಸಿಕೊಳ್ಳುವುದು ಹೇಗೆ ಎಂದು ತಿಳಿಯೋಣ.

ಮಾಹಿತಿ ಹುಡುಕಾಟ: ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಹಣಕಾಸು ಸ್ಥಿತಿಗತಿ ಬಗ್ಗೆ ಉಚಿತವಾಗಿ ಮಾಹಿತಿ ಒದಗಿಸುವ ಹಲವು ವೆಬ್‌ಸೈಟ್‌ಗಳು ಇವೆ. ಷೇರುಪೇಟೆಯ ಬಗ್ಗೆ ಒಟ್ಟಾರೆ ಸಮಗ್ರ ಮಾಹಿತಿ ಬೇಕೆಂದರೆ ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಮತ್ತು ಮುಂಬೈ ಷೇರುಪೇಟೆಯ (ಬಿಎಸ್‌ಇ) ವೆಬ್‌ಸೈಟ್ ಕಡೆ ನೋಟ ಹರಿಸಬಹುದು.

ಉದಾಹರಣೆಗೆ, ನೀವು ರಾಷ್ಟ್ರೀಯ ಷೇರುಪೇಟೆಯ ವೆಬ್‌ಸೈಟ್‌ಗೆ (www.nseindia.com) ಲಾಗಿನ್ ಆದರೆ ಮುಖಪುಟದಲ್ಲೇ ಕಾರ್ಪೊರೇಟ್ ಅನೌನ್ಸ್‌ಮೆಂಟ್ಸ್, ಬೋರ್ಡ್ ಮೀಟಿಂಗ್ಸ್, ಕಾರ್ಪೊರೇಟ್ ಆ್ಯಕ್ಷನ್ಸ್ ಎಂಬ ಟ್ಯಾಬ್‌ಗಳು ಇವೆ. ಅವುಗಳ ಮೇಲೆ ಕ್ಲಿಕ್ ಮಾಡಿದರೆ ಕಂಪನಿಗಳ ಪ್ರಮುಖ ಘೋಷಣೆಗಳು, ಮಂಡಳಿ ಸಭೆಗಳು, ಲಾಭಾಂಶ ಹಂಚಿಕೆ, ಬೋನಸ್ ಷೇರು ಘೋಷಣೆ ಬಗ್ಗೆ ಮಾಹಿತಿ ಲಭಿಸುತ್ತದೆ. ನಿಮಗೆ ನಿರ್ದಿಷ್ಟ ಕಂಪನಿಯ ಮಾಹಿತಿ ಬೇಕು ಎಂದಾದರೆ ಮನಿ ಕಂಟ್ರೋಲ್ ಡಾಟ್ ಕಾಂ, ಸ್ಕ್ರೀನರ್ ಡಾಟ್ ಇನ್, ವ್ಯಾಲ್ಯೂರಿಸರ್ಚ್ ವೆಬ್ ಸೈಟ್‌ಗಳನ್ನು ನೋಡಬಹುದು.

ಮನಿ ಕಂಟ್ರೋಲ್‌ನಂತಹ ತಾಣಗಳು ನಿರ್ದಿಷ್ಟ ಕಂಪನಿಗಳ ಶಕ್ತಿ-ದೌರ್ಬಲ್ಯ, ಆ ಕಂಪನಿಗೆ ಇರುವ ಅವಕಾಶಗಳು ಹಾಗೂ ಅಪಾಯಗಳ ಬಗ್ಗೆ ವಿವರ ನೀಡುತ್ತವೆ. ಈ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ ನೀವು, ನಿಮಗೆ ಆಸಕ್ತಿ ಇರುವ ಕಂಪನಿಯ ಸಾಮರ್ಥ್ಯ, ದೌರ್ಬಲ್ಯ, ಆ ಕಂಪನಿಗೆ ಇರುವ ಸವಾಲುಗಳು ಹಾಗೂ ಅವಕಾಶಗಳು ಏನು ಎಂಬುದನ್ನು ಅರಿತುಕೊಳ್ಳಬಹುದು.

ಇಷ್ಟೇ ಅಲ್ಲದೆ, ಕಂಪನಿಯ ಲಾಭ-ನಷ್ಟ ಎಷ್ಟು, ಪ್ರಸ್ತುತ ಹಣಕಾಸು ಸ್ಥಿತಿ ಹೇಗಿದೆ, ಸಾಲದ ಹೊರೆ ಎಷ್ಟಿದೆ, ನಗದು ಲಭ್ಯತೆ ಉತ್ತಮವಾಗಿದೆಯೇ, ಕಂಪನಿಯ ಪ್ರವರ್ತಕರು ಹೊಂದಿರುವ ಷೇರುಗಳ ಪ್ರಮಾಣ ಎಷ್ಟು, ಕಂಪನಿ ಎಷ್ಟು ಪ್ರಮಾಣದ ಷೇರುಗಳನ್ನು ಅಡಮಾನ ಇರಿಸಿದೆ ಎಂಬ ವಿವರಗಳನ್ನು ತಿಳಿದುಕೊಳ್ಳಬಹುದು. ಅಲ್ಲದೆ, ನೀವು ನೋಡುತ್ತಿರುವ ಕಂಪನಿಯು ತನ್ನ ಪ್ರತಿಸ್ಪರ್ಧಿಗಳ ಜೊತೆ ಹೋಲಿಸಿದರೆ ಎಷ್ಟು ಸಾಧನೆ ತೋರಿದೆ, ಬ್ರೋಕರೇಜ್ ಸಂಸ್ಥೆಗಳು ಆ ಕಂಪನಿ ಬಗ್ಗೆ ಸಿದ್ಧಪಡಿಸಿರುವ ಸಂಶೋಧನಾ ವರದಿಗಳು ಏನು ಹೇಳುತ್ತವೆ, ವಿದೇಶಿ ಮತ್ತು ದೇಶಿ ಸಾಂಸ್ಥಿಕ ಹೂಡಿಕೆದಾರರು ಎಷ್ಟು ಪ್ರಮಾಣದಲ್ಲಿ ಅಲ್ಲಿ ಹೂಡಿಕೆ ಮಾಡಿದ್ದಾರೆ ಎಂಬೆಲ್ಲ ವಿವರಗಳನ್ನು ಪಡೆಯಬಹುದು.

ಇವೆಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ನೀವು ಯಾವ ಕಂಪನಿಯ ಷೇರಿನಲ್ಲಿ ಹಣ ತೊಡಗಿಸಬಹುದು ಎಂಬ ತೀರ್ಮಾನ ಮಾಡಬಹುದು. ಲೆಕ್ಕಾಚಾರಗಳ ಬಳಿಕ ಮಾಡುವ ಷೇರು ಹೂಡಿಕೆ ನಿಮಗೆ ಫಲ ಕೊಡುವ ಸಾಧ್ಯತೆ ಹೆಚ್ಚು.

(ಗಮನಿಸಿ: ಬರಹದಲ್ಲಿ ಉಲ್ಲೇಖಿಸಿರುವ ಕೆಲವು ವೆಬ್‌ಸೈಟ್‌ಗಳ ಹೆಸರು ಉದಾಹರಣೆಗೆ ಮಾತ್ರ; ಅವೇ ವೆಬ್‌ಸೈಟ್‌ಗಳನ್ನು ಗಮನಿಸಬೇಕು ಎಂಬ ಶಿಫಾರಸು ಅಲ್ಲ)

ಹೋಂಡಾ ಮೋಟರ್‌ಸೈಕಲ್ ಡಿಜಿಟಲ್ ಷೋರೂಂ

ಮುಂಬೈ (ಪಿಟಿಐ): ಹೋಂಡಾ ಮೋಟರ್‌ಸೈಕಲ್ ಮತ್ತು ಸ್ಕೂಟರ್ ಇಂಡಿಯಾ (ಎಚ್‌ಎಂಎಸ್‌ಐ) ಕಂಪನಿಯು ತನ್ನ ಗ್ರಾಹಕರಿಗೆ ಸಂಪರ್ಕ ರಹಿತ ಸೇವೆಗಳನ್ನು ನೀಡಲು ಡಿಜಿಟಲ್ ಷೋರೂಂ ಶುರು ಮಾಡಿದೆ.

ಉತ್ಪನ್ನಗಳ ವಿವರವಾದ ಡೆಮೊ, ಆನ್‌ಲೈನ್ ಮೂಲಕವೇ ದಾಖಲೆಪತ್ರಗಳ ಸಲ್ಲಿಕೆ, ಮನೆ ಬಾಗಿಲಿಗೆ ವಿತರಣೆ ಹಾಗೂ ವರ್ಚುವಲ್ ಚಾಟ್ ಬೆಂಬಲ ಸೇರಿದಂತೆ ಹಲವು ವೈಶಿಷ್ಟ್ಯಗಳು ಈ ಷೋರೂಂನಲ್ಲಿ ಇವೆ ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ನಿರ್ದೇಶಕ ಯದುವೀಂದರ್ ಸಿಂಗ್ ಗುಲೇರಿಯಾ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

6-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1355 (1355)
ಪಾಮ್ ವಾರದ ಡೆಲಿವರಿ	1254 (1255)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,300 (47,3750)
ಬೆಳ್ಳಿ ಕೆ.ಜಿ 64,900 (65,075)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46500
ಹಳತು	42500-50500
ಚಿತ್ರದುರ್ಗ	
ಆಪಿ	58100-58500
ಬೆಟ್ಟೆ	39929-40379
ಕೆಂಪುಗೋಟು	33619-34099
ರಾಶಿ	57639-58069
ಕುಮಟ	
ಚಿಪ್ಪು	34069-37019
ಕೋಕ	22399-36999
ಫ್ಯಾಕ್ಟರಿ	17019-23211
ಹಳೆಚಾಲಿ	42869-43709
ಹೊಸಚಾಲಿ	41899-44099
ಸಿದ್ದಾಪುರ	
ಬಿಳಿಗೋಟು	32299-38099
ಚಾಲಿ	40519-44179
ಕೋಕ	29699-36419
ಕೆಂಪುಗೋಟು	28911-33699
ರಾಶಿ	50009-52944
ತಟ್ಟಿಬೆಟ್ಟೆ	34600-49099
ಶಿರಸಿ	
ಬೆಟ್ಟೆ	19699-49999
ಬಿಳಿಗೋಟು	15199-39189
ಚಾಲಿ	27091-44008
ರಾಶಿ	40609-53669
ಯಲ್ಲಾಪುರ	
ಬಿಳಿಗೋಟು	31118-38118
ಚಾಲಿ	39318-43699
ಕೋಕ	27118-34618
ಕೆಂಪುಗೋಟು	33319-34618
ರಾಶಿ	48699-52019
ತಟ್ಟಿಬೆಟ್ಟೆ	42690-48040

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	13100	194.35 ಸೆಂಟ್ಸ್
ಎಸಿ	---	4800	5275	
ಆರ್‌ಪಿ	---	5700	6250	ಲಂಡನ್
ಆರ್‌ಸಿ	---	3500	3620	2056 ಡಾಲರ್ಸ್